

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಏಪ್ರಿಲ್ 1 ಶನಿವಾರ 2023
ಸಂಪುಟ: 43 | ಸಂಚಿಕೆ: 341 | ಪುಟಗಳು: 12
ಮೈಸೂರು ಮಿತ್ರ 43
ಮೈಸೂರು ಕಚೇರಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4



ಕೆಬಿಜಿಯವರ ಧೂಮಂತ್ರ... ಧೂಮಂತ್ರ...



ಸಿದ್ದರಾಮಯ್ಯನವರು ವರುಣಾ ಕ್ಷೇತ್ರಕ್ಕೆ ಬರುತ್ತಿದ್ದಾರೆ ದಾರಿ ಬಿಡಿ...

■ ಪುಟ–4

ವರುಣಾ ಸ್ಪರ್ಧೆಗೆ ವಿಜಯೇಂದ್ರ ಷರತ್ತು

ಶಿಕಾರಿಪುರದಲ್ಲೂ ಸ್ಪರ್ಧೆಗೆ ಅವಕಾಶ ಕಲ್ಪಿಸುವಂತೆ ಬೇಡಿಕೆ

ಈಗ ವರಿಷ್ಠರ ಅಂಗಳದಲ್ಲಿ 'ವರುಣಾ' ಸ್ಪರ್ಧೆ ನಿರ್ಣಯ; ತೀವ್ರ ಕುತೂಹಲ ಮೂಡಿಸಿರುವ ಬೆಳವಣಿಗೆ

ಬೆಂಗಳೂರು, ಮಾ.31(ಕೆಎಂಶಿ)– ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುತ್ರ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಕಣಕ್ಕಿಳಿಸಲು ಬಿಜೆಪಿ ವರಿಷ್ಠರು ನಿರ್ಧರಿಸಿದ್ದಾರೆ. ಆದರೆ, ವಿಜಯೇಂದ್ರ ಶಿಕಾರಿಪುರದಲ್ಲೂ ಸ್ಪರ್ಧೆಗೆ ಅವಕಾಶ ನೀಡಿದರೆ ಮಾತ್ರ ವರುಣಾದಲ್ಲಿ ಸ್ಪರ್ಧಿಸುವುದಾಗಿ ಷರತ್ತು ವಿಧಿಸಿದ್ದಾರೆ ಎಂದು ಬಲ್ಲ ಮೂಲಗಳು ತಿಳಿಸಿವೆ.

ಪ್ರಭಾವಿಗಳ ವಿರುದ್ಧ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಸಂಬಂಧ ನಿನ್ನೆ ತಡರಾತ್ರಿಯವರೆಗೂ ಆರ್‌ಎಸ್‌ಎಸ್ ನಾಯಕರು ಸಭೆ ನಡೆಸಿ ಪಟ್ಟಿ ಸಿದ್ಧಪಡಿಸಿದ್ದಾರೆ. ವಿಜಯೇಂದ್ರ ಅವರನ್ನು ಕೇಶವ ಶಿಲ್ಪಕ್ಕೆ ನಿನ್ನೆ ಕರೆಸಿಕೊಂಡ ಸಂಘದ ಪ್ರಮುಖರು ಸಿದ್ದರಾಮಯ್ಯ ಅವರ ವಿರುದ್ಧ ಕಣಕ್ಕಿಳಿಯುವಂತೆ ಸಲಹೆ ನೀಡಿದ್ದಾರೆ. ಆದರೆ ಅವರ ಸಲಹೆ ಸ್ವೀಕರಿಸಿದ ವಿಜಯೇಂದ್ರ, ನಿಮ್ಮ ಮಾತನ್ನು ನಾನು ತೆಗೆದು ಹಾಕುವುದಿಲ್ಲ. ಆದರೆ ನನಗೆ ಶಿಕಾರಿಪುರ ವಿಧಾನಸಭಾ ಕ್ಷೇತ್ರದಿಂದಲೂ ಸ್ಪರ್ಧಿಸಲು ಅನುವು ಮಾಡಿಕೊಟ್ಟರೆ ಮಾತ್ರ ಸಿದ್ದರಾಮಯ್ಯ ಅವರ ವಿರುದ್ಧ ಸ್ಪರ್ಧಿಸಲು ಸಿದ್ಧವಿರುವುದಾಗಿ ತಿಳಿಸಿದ್ದಾರೆ. ನಮ್ಮ ತಂದೆ ಯಡಿಯೂರಪ್ಪನವರನ್ನು ಸತತವಾಗಿ ಗೆಲ್ಲಿಸಿ, ದೇಶವೇ ಗುರುತಿಸುವಂತೆ ಮಾಡಿದ ಶಿಕಾರಿಪುರ ಕ್ಷೇತ್ರವನ್ನು ಬೇರೊಬ್ಬರಿಗೆ ಬಿಟ್ಟುಕೊಡಲು ಸಾಧ್ಯವಿಲ್ಲ. ತಂದೆ ಯಡಿಯೂರಪ್ಪ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದಾಗ ಅಲ್ಲಿನ ಜನತೆ ನಾನು ಸ್ಪರ್ಧಿಸಬೇಕೆಂದು ಒತ್ತಡ ಹಾಕಿದ್ದಾರೆ. ತಮ್ಮ ತಂದೆಯೂ ಕೂಡ ಜನರೆದುರೇ ನನ್ನ ಸ್ಪರ್ಧೆ ಬಗ್ಗೆ ಘೋಷಿಸಿದ್ದಾರೆ. ನಾನು ಆ ಕ್ಷೇತ್ರದಲ್ಲಿ ಈಗಾಗಲೇ ಸಕ್ರಿಯವಾಗಿ ಸಂಘಟನೆ ಮಾಡುತ್ತಿದ್ದೇನೆ. ಹೀಗಾಗಿ ಇಲ್ಲಿಯೂ ಸ್ಪರ್ಧಿಸಲು ಅವಕಾಶ ಮಾಡಿಕೊಡಿ ಎಂಬ ಮಾತಿಗೆ ಈ ಬಗ್ಗೆ ದೆಹಲಿ ನಾಯಕರು ತೀರ್ಮಾನ ಕೈಗೊಳ್ಳುತ್ತಾರೆ. ನೀವು ಪಕ್ಷದ ಯಾವುದೇ ತೀರ್ಮಾನಕ್ಕೆ ತಲೆಬಾಗಿ ಎಂದು ಹೇಳಿ ಕಳುಹಿಸಿದ್ದಾರೆ.

2018ರ ಚುನಾವಣೆ ವೇಳೆ ವಿಜಯೇಂದ್ರ ವರುಣಾ ಕ್ಷೇತ್ರದಲ್ಲಿ ಮಿಂಚಿನ ಸಂಚಾರ ಮಾಡಿ ಸಂಘಟನೆ ಮೂಲಕ ಸಂಚಲನವನ್ನುಂಟು ಮಾಡಿದ್ದರು. ಕ್ಷೇತ್ರದಲ್ಲೇ ಬಾಡಿಗೆ ಮನೆಯನ್ನೂ ಮಾಡಿದ್ದ ಅವರು, ವರುಣಾದಲ್ಲಿ ಸ್ಪರ್ಧಿಸಲು ಉತ್ಸುಕತೆ ತೋರಿದ್ದರು. ಕಾರ್ಯಕರ್ತರೂ ಕೂಡ ಹುಮ್ಮಸ್ಸಿನಿಂದ ವಿಜಯೇಂದ್ರ ಅವರಿಗೆ ಬೆಂಬಲ ಸೂಚಿಸಿದ್ದರು. ಕೊನೇ ಕ್ಷಣದಲ್ಲಿ ಸ್ವತಃ ಯಡಿಯೂರಪ್ಪನವರೇ ನಂಜನಗೂಡಿಗೆ ಆಗಮಿಸಿ, ಕಾರ್ಯಕರ್ತರ ಸಭೆಯಲ್ಲಿ ವರುಣಾ ಅಭ್ಯರ್ಥಿಯಾಗಿ ●9ನೇ ಪುಟಕ್ಕೆ

ವಿಜಯೇಂದ್ರ ಶಿಕಾರಿಪುರ ಬಿಟ್ಟು ಬರಲ್ಲಾ...

ಮೈಸೂರು, ಮಾ.31– ವರುಣಾದಿಂದ ಪುತ್ರ ಬಿ.ವೈ.ವಿಜಯೇಂದ್ರ ಸ್ಪರ್ಧೆಗೆ ಹೈಕಮಾಂಡ್ ಸಲಹೆ ನೀಡಿದ್ದರೂ ವಿಜಯೇಂದ್ರ ಯಾವುದೇ ಕಾರಣಕ್ಕೂ ಶಿಕಾರಿಪುರ ಬಿಟ್ಟು ಬರುವುದಿಲ್ಲ ಎಂದಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಈ ವಿಚಾರದಲ್ಲಿ ಹೈಕಮಾಂಡ್ ಮನವೊಲಿಸುತ್ತೇನೆ ಎಂದು ತಿಳಿಸಿದರು.



ಖಾಸಗಿ ಕಾರ್ಯಕ್ರಮಕ್ಕಾಗಿ ಮೈಸೂರಿಗೆ ಆಗಮಿಸಿದ್ದ ಅವರು, ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ವರುಣಾದಿಂದ ಸ್ಪರ್ಧಿಸುವಂತೆ ಇಲ್ಲಿನ ಕಾರ್ಯಕರ್ತರು ಸಾಕಷ್ಟು ಒತ್ತಡ ಹಾಕುತ್ತಿದ್ದಾರೆ. ಆದರೆ, ವಿಜಯೇಂದ್ರ ಶಿಕಾರಿಪುರ ಬಿಟ್ಟು ಬರುವುದಿಲ್ಲ. ಅಲ್ಲೇ ಸ್ಪರ್ಧಿಸುತ್ತಾರೆ. ನಾನೂ ಕೂಡ ಅಲ್ಲೇ ಸ್ಪರ್ಧಿಸುವಂತೆ ಹೇಳಿದ್ದೇನೆ.

ಈವರೆಗೆ ಶಿಕಾರಿಪುರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ನಾನು ಇನ್ನು ಮುಂದೆ ಚುನಾವಣೆಯಲ್ಲಿ ಸ್ಪರ್ಧಿಸದೇ ಇರುವ ಕಾರಣ ಆ ಕ್ಷೇತ್ರದಲ್ಲಿ ವಿಜಯೇಂದ್ರ ಸ್ಪರ್ಧಿಸಬೇಕು ಎಂಬುದು ನನ್ನ ನಿರ್ಧಾರ ಎಂದ ಅವರು ತಮ್ಮ ಪುತ್ರ ಎರಡು ಕ್ಷೇತ್ರಗಳಿಂದ ಸ್ಪರ್ಧಿಸುವ ಪ್ರಶ್ನೆಯೇ ಇಲ್ಲ. ಹೀಗಾಗಿ ವರುಣಾದಲ್ಲಿ ಸ್ಪರ್ಧಿಸುವ ವಿಚಾರದಲ್ಲಿ ಚರ್ಚೆ ಬೇಡ. ವರುಣಾ ಕ್ಷೇತ್ರಕ್ಕೆ ಒಳ್ಳೆಯ ಅಭ್ಯರ್ಥಿ ಹಾಕುತ್ತೇವೆ ಎಂದು ಸ್ಪಷ್ಟಪಡಿಸಿದರು.

ಪಕ್ಷದ ಹೈಕಮಾಂಡ್ ನಿರ್ಧರಿಸಿದಲ್ಲಿ ನನ್ನ ಸ್ಪರ್ಧೆ

■ ಮೈಸೂರಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಸ್ಪಷ್ಟನೆ ■ ವರುಣಾದಲ್ಲೇ ಸ್ಪರ್ಧಿಸುವಂತೆ ಕಾರ್ಯಕರ್ತರ ಆಗ್ರಹ



ಮೈಸೂರು, ಮಾ.31(ಎಸ್‌ಪಿಎನ್)– ನಾನು ವರುಣಾ ಕ್ಷೇತ್ರದಲ್ಲಿ ಇಲ್ಲವೇ ಶಿಕಾರಿಪುರದಲ್ಲಿ ಸ್ಪರ್ಧಿಸಬೇಕೋ ಎಂಬುದನ್ನು ಬಿಜೆಪಿ ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಪುತ್ರ ಹಾಗೂ ಭಾರತೀಯ ಜನತಾ ಪಾರ್ಟಿ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಮೈಸೂರಿನ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ ನಡೆದ ವರುಣಾ ಸೇರಿದಂತೆ ಮೈಸೂರು ಜಿಲ್ಲೆಯ ವಿವಿಧ ತಾಲೂಕಿನ ಬಿಜೆಪಿ ಕಾರ್ಯಕರ್ತರು, ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ನಮ್ಮ ತಂದೆ ಬಿ.ಎಸ್.ಯಡಿಯೂರಪ್ಪನವರು ಶಿಕಾರಿಪುರದಿಂದ ತಾವು ಸ್ಪರ್ಧೆ ಮಾಡುವುದಿಲ್ಲ ಎಂದು ಘೋಷಣೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಶಿಕಾರಿಪುರದ ಮುಖಂಡರು, ಕಾರ್ಯಕರ್ತರಿಗೆ ನಾನು ಅಲ್ಲಿಯೇ ಸ್ಪರ್ಧಿಸಬೇಕೆಂಬ ಅಪೇಕ್ಷೆ ಇದೆ. ಅವರ ಅಣತಿಯಂತೆ ಯಡಿಯೂರಪ್ಪ ನವರೂ ಸಹ ಶಿಕಾರಿಪುರಕ್ಕೆ ವಿಜಯೇಂದ್ರ ಬರುತ್ತಾರೆ ಎಂದು ಸೂಚ್ಯವಾಗಿ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಶಿಕಾರಿಪುರದ ಪ್ರತಿ ಗ್ರಾಮಗಳಿಗೂ ಭೇಟಿ ನೀಡುತ್ತಿದ್ದೇನೆ. ಅಲ್ಲದೆ, ಪಕ್ಷದ ಹೈಕಮಾಂಡ್ ನನಗೆ ಹಲವು ಮೋರ್ಚಾಗಳ ಸಂಘಟನೆ ಜವಾಬ್ದಾರಿಯನ್ನೂ ನೀಡಿದ್ದು, ರಾಜ್ಯಾದ್ಯಂತ ಪ್ರವಾಸ ಕೈಗೊಂಡಿದ್ದೇನೆ ಎಂದರು. ನನ್ನ ಸ್ಪರ್ಧೆ ವಿಚಾರದಲ್ಲಿ ಹೈಕಮಾಂಡ್ ಎಲ್ಲಿ ಎಂದು ನಿರ್ಧರಿಸುತ್ತದೆಯೋ ಅಲ್ಲಿ ಸ್ಪರ್ಧೆ ಮಾಡುತ್ತೇನೆ. ಹಾಗಾಗಿ ವರುಣಾ ಕ್ಷೇತ್ರದ ಕಾರ್ಯಕರ್ತರು, ಮುಖಂಡರು ಯಾವುದೇ ಗೊಂದಲಕ್ಕೆ ಆಸ್ಪದ ನೀಡದೇ ಈ ಬಾರಿ ಚುನಾವಣೆಯಲ್ಲಿ ಬೂತ್ ಮಟ್ಟದಲ್ಲಿ ಬಿಜೆಪಿಯನ್ನು ಸಂಘಟಿಸಿ, ಪಕ್ಷದ ಅಭ್ಯರ್ಥಿ ●9ನೇ ಪುಟಕ್ಕೆ

ಹೆಚ್.ಡಿ.ರೇವಣ್ಣ, ಸಿದ್ದರಾಮಯ್ಯ ಎರಡು ಕಡೆ ಸ್ಪರ್ಧೆ ಇರಾದೆ

ಈ ನಡುವೆ ಜೆಡಿಎಸ್‌ನ ಹಿರಿಯ ನಾಯಕ ಹಾಗೂ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಕೂಡ ಹೊಳೆನರಸೀಪುರದ ಜೊತೆಗೆ ಹಾಸನ ದಿಂದಲೂ ಸ್ಪರ್ಧಿಸುವುದಾಗಿ ಹೇಳಿಕೊಂಡಿದ್ದಾರೆ. ಸಿದ್ದರಾಮಯ್ಯನವರಿಗೆ ವರುಣಾದಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ನೀಡಿದೆ. ಇದರ ಜೊತೆಗೆ ಕೋಲಾರದಿಂದಲೂ ಸ್ಪರ್ಧಿಸುವುದಾಗಿ ಅವರು ಹೇಳಿಕೊಂಡಿದ್ದಾರೆ ಇದು ಕೇವಲ ಕಾಂಗ್ರೆಸ್ ಜೆಡಿಎಸ್ ಅಷ್ಟೇ ಅಲ್ಲ ಬಿಜೆಪಿಯಲ್ಲೂ ಕೆಲವು ನಾಯಕರು ಎರಡೆರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಆಸಕ್ತಿ ತೋರಿದ್ದಾರೆ. ಸುರಕ್ಷಿತ ಕ್ಷೇತ್ರ ಬಯಸುವ ನಾಯಕರ ಸಂಖ್ಯೆ ಮೂರೂ ರಾಜಕೀಯ ಪಕ್ಷಗಳಲ್ಲಿ ಕಾಣಿಸಿಕೊಂಡಿರುವುದು ಈ ಬಾರಿಯ ಚುನಾವಣೆ ●9ನೇ ಪುಟಕ್ಕೆ

ವರುಣಾದಲ್ಲಿ ಯಾರೇ ನಿಂತರೂ ಎದುರಿಸಲು ಸಿದ್ಧ

ಬೆಂಗಳೂರು: ವರುಣಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಯಾರೇ ಬಂದರೂ ಸ್ವಾಗತಿಸುತ್ತೇನೆ ಎಂದು ಕಾಂಗ್ರೆಸ್ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಬೆಂಗಳೂರಿನಲ್ಲಿ ಬಿ.ಎಸ್. ಯಡಿಯೂರಪ್ಪ, ವರುಣಾದಿಂದ ತಮ್ಮ ಪುತ್ರ ವಿಜಯೇಂದ್ರರನ್ನು ಕಣಕ್ಕಿಳಿಸುವ ಬಗ್ಗೆ ಚಿಂತನೆ ನಡೆಯುತ್ತಿದೆ. ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳಲಿದೆ ಎಂದಿದ್ದರು.

ಇದಕ್ಕೆ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, ಯಾರೇ ಬಂದರೂ ಅವರನ್ನು ಎದುರಿಸಲು ಸಿದ್ಧನಿದ್ದೇನೆ, ಎದುರಾಳಿಗಳು ಯಾರು ಎಂದು ನಾನು ಯೋಚನೆಯೇ ಮಾಡಿಲ್ಲ, ಜನರು ಆಶೀರ್ವಾದ ಮಾಡುತ್ತಾರೆ.ವಿಜಯೇಂದ್ರ ಅವರು ನಿಲ್ಲುತ್ತಾರೆಯೇ, ಬೇರೆಯವರು ಯಡಿಯೂರಪ್ಪನವರೇ ಬಂದು ನಿಲ್ಲಲಿ. ಯಾರೇ ಬಂದರೂ ಅವರನ್ನು ಎದುರಿಸಲು ಸಿದ್ಧನಿದ್ದೇನೆ ಎಂದರು.



ಬಿಜೆಪಿ 60 ಸೀಟು ಗಳಿಗಿಂತ ಹೆಚ್ಚು ಗೆಲ್ಲುವುದಿಲ್ಲ: ಬಿಜೆಪಿ 150 ಸ್ಥಾನ ಗೆಲ್ಲಲಿದೆ ಎಂಬ ಬಿ.ಎಸ್.ಯಡಿಯೂರಪ್ಪ ಹೇಳಿಕೆಗೆ ತಿರುಗೇಟು ನೀಡಿದ ಅವರು, ಬಿಜೆಪಿ 60 ಸೀಟು ದಾಟುವುದಿಲ್ಲ, ಯಾವುದೇ ರಾಜಕೀಯ ಪಕ್ಷದಿಂದ ನಮಗೆ ಯಾವುದೇ ಹೆದರಿಕೆ ಇಲ್ಲ, ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಹೇಳಿದರು. ಜೆಡಿಎಸ್ ನಾಯಕ ಹೆಚ್.ಡಿ.ಕುಮಾರಸ್ವಾಮಿ ಅವರು ಕಾಂಗ್ರೆಸ್ ಮೈತ್ರಿ ಕುರಿತು ಹೇಳಿಕೆ ನೀಡಿರುವ ಕುರಿತು ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ನಾವು ಅವರನ್ನು ಕರೆದಿಲ್ಲ, ನಮ್ಮೊಂದಿಗೆ ಬರುವಂತೆ ಹೇಳಿಲ್ಲ, ಕರ್ನಾಟಕದ ಜನತೆ ಕಾಂಗ್ರೆಸ್‌ಗೆ ಮತ ಹಾಕಲು ನಿರ್ಧರಿಸಿದ್ದು, ಸಂಪೂರ್ಣ ಬಹುಮತದೊಂದಿಗೆ ನಮ್ಮ ಸರ್ಕಾರ ರಚನೆಯಾಗಲಿದೆ ಎಂದರು.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ

ಇಂದಿನಿಂದ ಟೋಲ್ ದರ ಹೆಚ್ಚಳ



ಮೈಸೂರು, ಮಾ. 31(ಆರ್‌ಕೆ)– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇತ್ತೀಚೆಗಷ್ಟೇ ಉದ್ಘಾಟನೆ ಮಾಡಿದ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಈಗ ಮತ್ತಷ್ಟು ದುಬಾರಿಯಾಗಲಿದೆ.

ನಾಳೆ (ಏಪ್ರಿಲ್ 1)ಯಿಂದಲೇ ದಶಪಥ ರಸ್ತೆಯ ಟೋಲ್ ಶುಲ್ಕವನ್ನು ಶೇ. 22 ರಷ್ಟು ಹೆಚ್ಚಿಸಿ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಹೆಚ್‌ಎಐ)ವು ಆದೇಶ ಹೊರಡಿಸಿದೆ. ಕಾರು, ವ್ಯಾನ್, ಜೀಪ್‌ಗಳ ಏಕಮುಖ ಸಂಚಾರಕ್ಕೆ 165 ರೂ. (30 ರೂ. ಹೆಚ್ಚಳ), ದ್ವಿಮುಖ ಸಂಚಾರಕ್ಕೆ 250 ರೂ. (45 ರೂ. ಹೆಚ್ಚಳ), ಲಘು ವಾಹನ, ಮಿನಿ ಬಸ್‌ಗಳಿಗೆ 270 ರೂ. (50 ರೂ. ಹೆಚ್ಚಳ), ದ್ವಿಮುಖ ಸಂಚಾರಕ್ಕೆ 405 ರೂ. (75 ರೂ. ಹೆಚ್ಚಳ), ಟ್ರಕ್, ಬಸ್, 2 ಆಕ್ಸೆಲ್ ವಾಹನಗಳಿಗೆ 565 ರೂ. (165 ರೂ. ಹೆಚ್ಚಳ), ದ್ವಿಮುಖ ಸಂಚಾರಕ್ಕೆ 850 ರೂ. (160 ರೂ. ಹೆಚ್ಚಳ), 3 ಆಕ್ಸೆಲ್ ವಾಣಿಜ್ಯ ವಾಹನಗಳಿಗೆ 615 ರೂ. (115 ರೂ. ಹೆಚ್ಚಳ), ದ್ವಿಮುಖ ಸಂಚಾರಕ್ಕೆ 925 ರೂ. (225 ರೂ. ಹೆಚ್ಚಳ), ಭಾರೀ ವಾಹನಗಳು, ಅರ್ಥ ಮೂವ್ಸ್, 4–6 ಆಕ್ಸೆಲ್ ವಾಹನಗಳಿಗೆ 885 ರೂ. (165 ರೂ. ಹೆಚ್ಚಳ), ದ್ವಿಮುಖ ಸಂಚಾರಕ್ಕೆ 1,330 ರೂ. (250 ರೂ. ಹೆಚ್ಚಳ) ●5ನೇ ಪುಟಕ್ಕೆ

ಮಂಗಳೂರು ಹೋಟೆಲ್‌ನಲ್ಲಿ ಪತ್ನಿ, ಪುತ್ರಿಯರ ಕೊಂದು ಮೈಸೂರು ಉದ್ಯಮಿ ಆತ್ಮಹತ್ಯೆ

ಸಾಲಬಾಧೆ, ಮಾಟ–ಮಂತ್ರದಿಂದ ರೋಸಿ ಹೋಗಿ ಆತ್ಮಹತ್ಯೆ ನಿರ್ಧಾರ; ಡೆತ್‌ನೋಟ್‌ನಲ್ಲಿ ವಿವರಿಸಿರುವ ನತದೃಷ್ಟ ಉದ್ಯಮಿ

ಮೈಸೂರು, ಮಾ.31(ಆರ್‌ಕೆ)–ಮೈಸೂರಿನ ಉದ್ಯಮಿಯೋರ್ವ ಸಾಲ ಬಾಧೆಯಿಂದ ಪತ್ನಿ ಹಾಗೂ ಅವಳಿ ಪುತ್ರಿಯರನ್ನು ಹತ್ಯೆಗೈದು ತಾನು ನೇಣಿಗೆ ಶರಣಾದ ಹೃದಯವಿದ್ರಾವಕ ಘಟನೆ ಮಂಗಳೂರಿನಿಂದ ವರದಿಯಾಗಿದೆ.

ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಬಡಾವಣೆಯಲ್ಲಿರುವ ಬಾಲಾಜಿ ಇಂಡಸ್ಟ್ರೀಸ್ ಹೆಸರಿನಲ್ಲಿ ಸಿಎನ್‌ಸಿ ಪ್ರಿಸಿಷನ್ ಕಾಂಪೋನೆಂಟ್ಸ್ ಮಿಷನ್ ಟೂಲ್ಸ್ ಆಕ್ಸೆಸರೀಸ್ ಉತ್ಪಾದನೆ ಕಾರ್ಖಾನೆಯ ಮಾಲೀಕನಾಗಿದ್ದು, ವಿಜಯನಗರ 2ನೇ ಹಂತದ ಅಭಿಷೇಕ್ ಸರ್ಕಲ್ ಬಳಿ ಇರುವ ವಾಣಿ ವಿಲಾಸ ಬಡಾವಣೆಯಲ್ಲಿ ವಾಸವಿದ್ದ ಎನ್.ಇ.ದೇವೇಂದ್ರಪ್ಪ (48), ತಮ್ಮ ಪತ್ನಿ ನಿರ್ಮಲಾ(46), ಅವಳಿ ಪುತ್ರಿಯರಾದ 9 ವರ್ಷ ವಯಸ್ಸಿನ ಚೈತ್ರ ಮತ್ತು ಚೈತನ್ಯ ಅವರನ್ನು ಹತ್ಯೆ ಮಾಡಿ, ತಾನು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಮಂಗಳೂರಿನ ಹೃದಯ ಭಾಗದಲ್ಲಿರುವ ಕೆ.ಎಸ್. ರಾವ್ ರಸ್ತೆಯ ಹೋಟೆಲ್ ಕರುಣಾ ರೆಸಿಡೆನ್ಸಿಯ ಕೊಠಡಿ ಸಂಖ್ಯೆ 124ರಲ್ಲಿ ಇಂದು (ಶುಕ್ರವಾರ) ಬೆಳಿಗ್ಗೆ ನೇಣು ಬಿಗಿದ ಸ್ಥಿತಿಯಲ್ಲಿ ದೇವೇಂದ್ರಪ್ಪ ಶವ ಹಾಗೂ ಬೆಡ್ ಮೇಲೆ ಉಸಿರುಗಟ್ಟಿಸಿ ಹತ್ಯೆ ಮಾಡಿರುವ ಸ್ಥಿತಿಯಲ್ಲಿ ಆತನ ಪತ್ನಿ ಮತ್ತು ಮಕ್ಕಳ ಶವ ಪತ್ತೆಯಾಗಿದೆ.



ವಿವರ: ಮೂಲತಃ ದಾವಣಗೆರೆ ಜಿಲ್ಲೆ ನಾಗರತ್ನಹಳ್ಳಿ ಗ್ರಾಮದವರಾದ ದೇವೇಂದ್ರಪ್ಪ ಕಳೆದ 11 ವರ್ಷದ ಹಿಂದೆ ಮೈಸೂರಿಗೆ ಬಂದು ನೆಲೆಸಿ ಉದ್ಯಮ ನಡೆಸುತ್ತಿದ್ದರು ಎಂದು ಹೇಳಲಾಗಿದೆ. ಇತ್ತೀಚೆಗೆ ಉದ್ಯಮದಲ್ಲಿ ನಷ್ಟ ಉಂಟಾದ ಹಿನ್ನೆಲೆಯಲ್ಲಿ ವಿಪರೀತ ಸಾಲ ಬಾಧೆಯಿಂದ ಬೇಸತ್ತು ಜಿಗುಪ್ಸೆಗೊಂಡಿದ್ದರು ಎಂದು ತಿಳಿದು ಬಂದಿದೆ. ಸಾಲ ತೀರಿಸುವ ಸಲುವಾಗಿ ಸ್ವಗ್ರಾಮದಲ್ಲಿರುವ ಆಸ್ತಿಯನ್ನು ಮಾರಾಟ ಮಾಡಲು ಹೋಗುತ್ತಿರುವುದಾಗಿ ಪರಿಚಯಸ್ಥರಿಗೆ ತಿಳಿಸಿ ಮಾ.27ರಂದು ಕುಟುಂಬ ಸಮೇತ ದೇವೇಂದ್ರಪ್ಪ ಮಂಗಳೂರಿಗೆ ತೆರಳಿದ್ದಾರೆ. ಅಲ್ಲಿನ ಕರುಣಾ ರೆಸಿಡೆನ್ಸಿಯಲ್ಲಿ ಮೊದಲಿಗೆ ಒಂದು ದಿನದ ಮಟ್ಟಿಗೆ ರೂಂ ಬುಕ್ ಮಾಡಿದ್ದ ಅವರು, ಒಂದು ದಿನ ಕಳೆಯುತ್ತಿದ್ದಂತೆಯೇ ಮತ್ತೆ ಎರಡು ದಿನಕ್ಕೆ ಅದೇ ರೂಂ ಅನ್ನು ಬುಕ್ ಮಾಡಿ ಕುಟುಂಬದೊಂದಿಗೆ ಮಂಗಳೂರಿನ ಪ್ರವಾಸಿ ತಾಣಗಳಿಗೆ ಹೋಗಿ–ಬಂದಿದ್ದರು ಎಂದು ಹೇಳಲಾಗಿದೆ.

ಅವರು ಮಾ.30ರಂದು ಸಂಜೆ ರೂಂ ಅನ್ನು ಖಾಲಿ ಮಾಡಬೇಕಿತ್ತು ರಾತ್ರಿಯಾದರೂ ರೂಂ ಖಾಲಿ ಮಾಡದ ಕಾರಣ ಮತ್ತೆ ವಾಸ್ತವ್ಯವನ್ನು ವಿಸ್ತರಿಸುತ್ತಾರೆಯೇ ಅಥವಾ ರೂಂ ಖಾಲಿ ಮಾಡುತ್ತಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಂದು ರಾತ್ರಿ 8.30ರಿಂದ ಹಲವು ಬಾರಿ ಹೋಟೆಲ್ ಸಿಬ್ಬಂದಿ ಇಂಟರ್‌ಕಾಂನಲ್ಲಿ ರೂಂಗೆ ಕರೆ ಮಾಡಿದರೂ ಪ್ರತಿಕ್ರಿಯೆ ಬಂದಿರಲಿಲ್ಲ. ಇಂದು ಬೆಳಿಗ್ಗೆ ರೂಂನಿಂದ ದೇವೇಂದ್ರಪ್ಪ ಅವರ ಕುಟುಂಬದವರು ಹೊರ ಬಂದಿಲ್ಲ. ಇಂಟರ್‌ಕಾಂ ಕರೆಗೆ ಪ್ರತಿಕ್ರಿಯೆಯೂ ಇರಲಿಲ್ಲ. ಇದರಿಂದಾಗಿ ಸಂಶಯಗೊಂಡ ಹೋಟೆಲ್ ಸಿಬ್ಬಂದಿ ರೂಂನ ಕಿಟಕಿ ಮೂಲಕ ●5ನೇ ಪುಟಕ್ಕೆ

ಏ.9ರಂದು ಬಂಡೀಪುರಕ್ಕೆ ಪ್ರಧಾನಿ ಮೋದಿ ಭೇಟಿ

■ ಹುಲಿ ಸಮೀಕ್ಷಾ ವರದಿ ಬಿಡುಗಡೆ ■ ವಿದ್ಯುತ್ ಸ್ಪರ್ಶಕ್ಕೆ ಒಳಗಾಗಿದ್ದ ಆನೆ ಜೀವ ಉಳಿಸಿದ ಸಿಬ್ಬಂದಿಗೆ ಸನ್ಮಾನ ■ ಏ.8, 9ರಂದು ಸಫಾರಿ ಬಂದ್ ■ ಮದುಮಲೈ ಹುಲಿ ಸಂರಕ್ಷಿತ ಪ್ರದೇಶಕ್ಕೂ ಭೇಟಿ ಸಾಧ್ಯತೆ

ಮೈಸೂರು,ಮಾ.31(ಎಂಟಿವೈ)– ಹುಲಿ ಸಮೀಕ್ಷಾ ವರದಿ ಬಿಡುಗಡೆಗೆ ಮೈಸೂರಿಗೆ ಆಗಮಿಸುತ್ತಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ಏ.9ರಂದು ಚಾಮರಾಜನಗರ ಜಿಲ್ಲೆಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಭೇಟಿ ನೀಡಲಿದ್ದು, ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಬಂಡೀಪುರ ಅರಣ್ಯ ವ್ಯಾಪ್ತಿಯಲ್ಲೇ ಹುಲಿ ಸಮೀಕ್ಷೆ ವರದಿ ಬಿಡುಗಡೆ ಮಾಡಿ, ವಿದ್ಯುತ್ ಸ್ಪರ್ಶಕ್ಕೆ ಒಳಗಾಗಿದ್ದ ಕಾಡಾನೆ ರಕ್ಷಿಸಿದ ಅರಣ್ಯ ಸಿಬ್ಬಂದಿಯನ್ನು ಸನ್ಮಾನಿಸಲಿದ್ದಾರೆ.

ಕಳೆದ ವರ್ಷ ನಡೆದ ಹುಲಿ ಸಮೀಕ್ಷೆ ವರದಿ ಸಿದ್ಧಗೊಂಡಿದ್ದು, ಅದನ್ನು ಹಳೆ ಮೈಸೂರು ಭಾಗದಲ್ಲಿ ಬಿಡುಗಡೆ ಮಾಡಲು ಪ್ರಧಾನಿ ಮೋದಿ ನಿರ್ಧರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರವು ಕರ್ನಾಟಕ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಕಳೆದ ವಾರ ಮೈಸೂರಲ್ಲಿ ಮುಕ್ತ ವಿವಿಯ ಘಟಿಕೋತ್ಸವ ಭವನ, ಮೈಸೂರು ವಿವಿಯ ಸೆನೆಟ್ ಭವನ ಹಾಗೂ ಖಾಸಗಿ ಹೋಟೆಲ್ ಸ್ಥಳಗಳ ಪರಿಶೀಲನೆಯನ್ನು ನಡೆಸಿತ್ತು. ಅಲ್ಲದೆ, ಮೂರು ಸ್ಥಳದಲ್ಲಿ ಮುಕ್ತ ವಿವಿ ಘಟಿಕೋತ್ಸವ ಭವನ ಅಂತಿಮಗೊಳಿಸಲು ನಿರ್ಧರಿಸಲಾಗಿತ್ತು. ಆದರೆ, ಪ್ರಧಾನ ಮಂತ್ರಿಗಳ ಕಾರ್ಯಾಲಯವು ಹುಲಿಗಳಿರುವ ಅರಣ್ಯದಲ್ಲೇ ವರದಿ ಬಿಡುಗಡೆ ಮಾಡುವುದು ಸೂಕ್ತ ಎಂಬ ಸಂದೇಶ ರವಾನಿಸಿರುವುದರಿಂದ ಅರಣ್ಯ ಇಲಾಖೆ ಬಂಡೀಪುರದಲ್ಲೇ ವರದಿ ಬಿಡುಗಡೆಗೆ ಮುಂದಾಗಿದೆ. ಅದಕ್ಕಾಗಿ ಸದ್ದಿಲ್ಲದೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.



■ ಎರಡು ದಿನ ಸಫಾರಿ ಬಂದ್: ಕಾರ್ಯಕ್ರಮಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಏ.9ರಂದು ಮೈಸೂರಿಗೆ ಆಗಮಿಸಿ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಏ.9ರಂದು ಬೆಳಿಗ್ಗೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಿಂದ ವಿಶೇಷ ಹೆಲಿಕಾಪ್ಟರ್‌ನಲ್ಲಿ ಗುಂಡ್ಲುಪೇಟೆಗೆ ತೆರಳಲಿದ್ದಾರೆ. ಅಲ್ಲಿ ಮೇಲುಕಾಮನಹಳ್ಳಿಯ ಸಫಾರಿ ಕೇಂದ್ರದ ಬಳಿ, ಗುಂಡ್ಲುಪೇಟೆಯ ಕಾಲೇಜು ಮೈದಾನ ಸೇರಿದಂತೆ ಮೂರು ಕಡೆ ಹೆಲಿಪ್ಯಾಡ್ ನಿರ್ಮಿಸಲಿದ್ದು, ಪ್ರಧಾನಿ ಭದ್ರತಾ ಸಿಬ್ಬಂದಿ ಆಯ್ಕೆ ಮಾಡಿದ ಹೆಲಿಪ್ಯಾಡ್‌ಗೆ ಬಂದಿಳಿಯಲಿದ್ದಾರೆ. ಬಳಿಕ ಬಂಡೀಪುರ ಅರಣ್ಯದ ಕ್ಯಾಂಪಸ್‌ನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಹುಲಿ ಸಮೀಕ್ಷಾ ವರದಿ ಬಿಡುಗಡೆ ಮಾಡಲಿದ್ದಾರೆ. ಆ ವೇಳೆ ಕಾಡಾನೆ ಜೀವ ಉಳಿಸಿದ ಅರಣ್ಯ ಸಿಬ್ಬಂದಿಯ ಸನ್ಮಾನಿಸಲಿದ್ದಾರೆ. ಆ ನಂತರ ಸಫಾರಿಗೆ ತೆರಳುವ ಸಾಧ್ಯತೆ ಇದೆ. ಪ್ರಧಾನಿ ಮೋದಿ ಆಗಮನದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಏ.8 ಮತ್ತು 9ರಂದು ಬಂಡೀಪುರದಲ್ಲಿ ಸಫಾರಿಯನ್ನು ಬಂದ್ ಮಾಡಲಾಗಿದೆ.

> ಪ್ರಧಾನಿ ಮೋದಿ ಕಾರ್ಯಕ್ರಮಕ್ಕೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಆಯ್ಕೆ ಮಾಡಿಕೊಂಡಿರುವುದು ತೀವ್ರ ಕುತೂಹಲ ಕೆರಳಿಸಿದೆ. ಈ ಬಾರಿ ಹುಲಿ ಸಮೀಕ್ಷೆಯಲ್ಲಿ ಕರ್ನಾಟಕ ಮೊದಲ ಸ್ಥಾನ ಪಡೆಯುವುದು ಖಚಿತವಾಗಿದೆ. ಅಲ್ಲದೆ, ಬಂಡೀಪುರ ಅತೀ ಹೆಚ್ಚು ಹುಲಿ ಹೊಂದಿರುವ ಅಭಯಾರಣ್ಯವಾಗಿರುವುದು ಕಾರ್ಯಕ್ರಮದ ವೇದಿಕೆ ಸೃಷ್ಟಿಗೆ ಕಾರಣ ಎಂದು ವಿಶ್ಲೇಷಿಸಲಾಗಿದೆ.


ಸನ್ಮಾನಿತರು: ವಿದ್ಯುತ್ ಸ್ಪರ್ಶಕ್ಕೆ ಒಳಗಾಗಿ ಜೀವನ್ಮರಣದ ನಡುವೆ ಹೋರಾಡುತ್ತಿದ್ದ ಕಾಡಾನೆಯನ್ನು ಸಕಾಲಕ್ಕೆ ಚಿಕಿತ್ಸೆ ನೀಡಿ ಅದರ ಜೀವ ಉಳಿಸಿದ ಅರಣ್ಯ ಇಲಾಖೆಯ 12 ಮಂದಿ ತಂಡವನ್ನು ಪ್ರಧಾನಿ ಅಭಿನಂದಿಸಲಿದ್ದಾರೆ. ಫೆ.14ರಂದು ಬೆಳಿಗ್ಗೆ 7.30ಕ್ಕೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಓಂಕಾರ ವಲಯದ ಬರ್ಗಿ ಬೀಟ್ ವ್ಯಾಪ್ತಿಯಲ್ಲಿ 35 ರಿಂದ 40 ವರ್ಷದ ಹೆಣ್ಣು ಕಾಡಾನೆಯೊಂದು ಜಮೀನೊಂದರಲ್ಲಿ ವಿದ್ಯುತ್ ಸ್ಪರ್ಶಕ್ಕೆ ತುತ್ತಾಗಿ ಜೀವನ್ಮರಣದ ನಡುವೆ ಹೋರಾಡುತ್ತಿದ್ದ ಮಾಹಿತಿ ಅರಣ್ಯ ಅಧಿಕಾರಿಗಳಿಗೆ ಲಭ್ಯವಾಗಿತ್ತು. ಸ್ಥಳಕ್ಕೆ ಓಂಕಾರ ವಲಯದ ಡಿಆರ್‌ಎಫ್‌ಒ ಆರ್.ಶಿವಕುಮಾರ್ ಹೋಗಿ ಪರಿಶೀಲಿಸಿದಾಗ ಕಾಡಾನೆ ಇನ್ನೂ ವಿದ್ಯುತ್ ಸ್ಪರ್ಶಕ್ಕೆ ಒಳಗಾಗಿದ್ದು ಕಂಡು ಬಂದಿದೆ. ಕೂಡಲೇ ವಿದ್ಯುತ್ ಸಂಪರ್ಕ ಕಡಿತಗೊಳಿಸಿ ಹೆಚ್ಚಿನ ಅನಾಹುತವಾಗದಂತೆ ನೋಡಿಕೊಂಡಿದ್ದರು. ವಿಷಯ ತಿಳಿದು ಸ್ಥಳಕ್ಕೆ ಬಂದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್, ಎಸಿಎಫ್ ಜಿ.ರವೀಂದ್ರ, ಓಂಕಾರ ವಲಯದ ಆರ್‌ಎಫ್‌ಒ ಕೆ.ಪಿ. ಸತೀಶ್‌ಕುಮಾರ್, ಡಿಆರ್‌ಎಫ್‌ಒಗಳಾದ ಆರ್.ಶಿವಕುಮಾರ್, ಕೆ.ಪಿ.ಅಮರ್, ಪಶುವೈದ್ಯ ಡಾ.ವಾಸಿಂ ಮಿರ್ಜಾ, ಸಿಬ್ಬಂದಿ ಡಿ.ಸಿದ್ದೇಶ್, ಬಿ.ಕುಮಾರ, ಕೆ.ಕೆ. ಅರವಿಂದ, ಕೆಂಪಶೆಟ್ಟಿ, ಮಾದಪ್ಪ ಹಾಗೂ ರಾಜೇಶ್ ಒಳಗೊಂಡ ತಂಡ ಸತತ 4–5ಗಂಟೆ ಚಿಕಿತ್ಸೆ ನೀಡಿದ್ದರು. ಬಳಿಕ ಆನೆಗೆ ಪ್ರಜ್ಞೆ ಬಂದಿತ್ತು. ಅದರೂ ಮೇಲೆಳಲು ಆಗದಿದ್ದರಿಂದ ಜೆಸಿಬಿಯಿಂದ ಆನೆಯನ್ನು ಎತ್ತಿ ನಿಲ್ಲಿಸಲಾಗಿತ್ತು. ಕುಸಿದು ಬೀಳುವ ಹಂತದಲ್ಲಿದ್ದ ಕಾಡಾನೆಯನ್ನು ಸತತ ಪ್ರಯತ್ನದಿಂದ ಮತ್ತೆ ನೆಲಕ್ಕೆ ಕಾಲೂರುವಂತೆ ಮಾಡಲಾಗಿತ್ತು. ಚೇತರಿಸಿಕೊಂಡ ಕಾಡಾನೆ ಅರಣ್ಯದತ್ತ ಹೆಜ್ಜೆ ಹಾಕಿತ್ತು. ಇದನ್ನು ಪ್ರಧಾನಿ ಮೋದಿ, ಕೇಂದ್ರ ಸಚಿವರು ಹಾಗೂ ಹಿರಿಯ ಅಧಿಕಾರಿಗಳು ಟ್ವಿಟ್ ಮಾಡಿ ಆನೆ ಜೀವ ಉಳಿಸಿದ ಬಂಡೀಪುರ ಅರಣ್ಯ ಸಿಬ್ಬಂದಿಯ ಕಾರ್ಯವನ್ನು ಶ್ಲಾಘಿಸಿದ್ದರು. ಈ ಹಿನ್ನೆಲೆಯಲ್ಲಿ ಖುದ್ದಾಗಿ ಪ್ರಧಾನಿ ಮೋದಿ ಅವರು 12 ಮಂದಿಯನ್ನು ಏ.9ರಂದು ಸನ್ಮಾನಿಸಲಿದ್ದಾರೆ. ●5ನೇ ಪುಟಕ್ಕೆ





ಮೈಸೂರು ಮಿತ್ರ ಶನಿವಾರ 1 ಏಪ್ರಿಲ್ 2023

ಇಂದು ಡಾ.ಶಿವಕುಮಾರ ಸ್ವಾಮೀಜಿಗಳ ಜಯಂತಿ; ಗೋಪೂಜೆ



ಮೈಸೂರು, ಮಾ. 31– ಕೃಷ್ಣರಾಜ ಯುವ ಬಳಗದ ವತಿಯಿಂದ ನಡೆದಾಡುವ ದೇವರು ಡಾ.ಶ್ರೀ ಶಿವಕುಮಾರ ಸ್ವಾಮೀಜಿಗಳ ಜಯಂತಿ ಅಂಗವಾಗಿ ಗೋಪೂಜೆಯನ್ನು ನಾಳೆ ಏಪ್ರಿಲ್ 1 ರಂದು ನಂಜುಮಳಿಗೆ ಸಮೀಪ ಇರುವ ಮಹದೇಶ್ವರ ಸ್ವಾಮಿ ದೇವಸ್ಥಾನದ ಮುಂಭಾಗ ಆಯೋಜಿಸಲಾಗಿದೆ ಎಂದು ಕೃಷ್ಣರಾಜ ಯುವ ಬಳಗದ ಅಧ್ಯಕ್ಷ ನವೀನ್ ಕೆಂಪಿ ತಿಳಿಸಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡಿಕೆರೆ ಗೋಪಾಲ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ ಗೌಡ, ನಗರ ಪಾಲಿಕಾ ಸದಸ್ಯ ಮ.ವಿ.ರಾಮಪ್ರಸಾದ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಜೀವದ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುಖಂಡರಾದ ಜ್ಯೋತಿ ರೇಚಣ್ಣ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಗೌರವಾಧ್ಯಕ್ಷ ಮುಳ್ಳೂರು ಗುರುಪ್ರಸಾದ್, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಅಪೂರ್ವ ಸುರೇಶ್, ರಾಕೇಶ್‌ಭಟ್ ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಜಲಸೇವಾ ನಿಯಂತ್ರಣ ಕೊಠಡಿ ಸ್ಥಾಪನೆ

ಮೈಸೂರು, ಮಾ.31– ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ, ಮೈಸೂರು ತಾಲೂಕು ಪಂಚಾಯಿತಿ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ, ಮೈಸೂರು ತಾಲೂಕು ಕೇಂದ್ರದಲ್ಲಿ ಜಲಸೇವಾ ನಿಯಂತ್ರಣ ಕೊಠಡಿ ತೆರೆಯಲಾಗಿದೆ.

ಸಾರ್ವಜನಿಕರು ಕುಡಿಯುವ ನೀರಿನ ಸಮಸ್ಯೆಯಿದ್ದಲ್ಲಿ ಜಲಸೇವಾ ನಿಯಂತ್ರಣ ಕೊಠಡಿಯ ದೂ.ಸಂ.0821–2414433 ಅನ್ನು ಸಂಪರ್ಕಿಸಬಹುದು ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರೀಕ್ಷಾ ಕೇಂದ್ರಗಳ ಸುತ್ತಾ ನಿಷೇಧಾಜ್ಞೆ ಜಾರಿ

ಮೈಸೂರು, ಮಾ.31– ಏ.1 ಮತ್ತು 2 ರಂದು ನಗರದ 17 ಪರೀಕ್ಷಾ ಕೇಂದ್ರಗಳಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ರಾಜ್ಯದ ವಿವಿಧ ಇಲಾಖೆಗಳಲ್ಲಿ ಗ್ರೂಪ್–ಸಿ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷೆಗಳನ್ನು ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಪರೀಕ್ಷಾ ಕೇಂದ್ರಗಳ ಸುತ್ತಲೂ ಕಲಂ 144 ಸಿ.ಆರ್.ಪಿ.ಸಿ. ರೀತ್ಯ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ರಮೇಶ್.ಬಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ನಂಜನಗೂಡು ತಾಲೂಕು ವರುಣ ಹೋಬಳಿ, ಬಿದರಗೂಡು ಗ್ರಾಮ ಪಂಚಾಯಿತಿಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಮತ್ತು ಉಚಿತ ಕನ್ನಡಕ ವಿತರಣಾ ಕಾರ್ಯಕ್ರಮವನ್ನು ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದ ಪ್ರಯುಕ್ತ ವನಸಿರಿ ಗ್ರಾಮೀಣಾಭಿವೃದ್ಧಿ ಟ್ರಸ್ಟ್, ಎ ಎಸ್ ಜಿ ಕಣ್ಣಿನ ಆಸ್ಪತ್ರೆ ಮತ್ತು ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಆಯೋಜಿಸಲಾಗಿತ್ತು. ಸುಮಾರು 150 ರಿಂದ 175 ಫಲಾನುಭವಿಗಳಿಗೆ ಕಣ್ಣಿನ ತಪಾಸಣೆ ಮಾಡಿದ್ದು, ಅದರಲ್ಲಿ 50 ಜನರಿಗೆ ಉಚಿತ ಕನ್ನಡಕವನ್ನು ವಿತರಿಸಲಾಯಿತು. ಬರಡನಪುರ ಮಠದ ಶ್ರೀ ಪರಮಶಿವಮೂರ್ತಿ ಸ್ವಾಮಿಗಳು ವನಸಿರಿ ಸಂಸ್ಥೆಯ ಸಂತೋಷ್ ಎನ್.ಕಾರ್ಯದರ್ಶಿ, ಜೆಎಸ್‌ಎಸ್ ಕಾಲೇಜಿನ ಎನ್‌ಎಸ್‌ಎಸ್ ಶಿಬಿರ ಅಧಿಕಾರಿಗಳಾದ ಡಾ. ಶಶಿ ಬಿಂದು, ಡಾ.ಪ್ರೀತಿ ಮತ್ತು ಬಿದರಗೂಡು ಗ್ರಾಮ ಪಂಚಾಯಿತಿಯ ಸದಸ್ಯರು ಪಾಲ್ಗೊಂಡಿದ್ದರು.



ಮೈಸೂರಿನ ರಾಜೇಂದ್ರನಗರದ 1008 ಗಣಪತಿ ದೇವಸ್ಥಾನ ವೃತ್ತದಲ್ಲಿ ಅಭಿಮನ್ಯು ಯುವಸೇನಾ ಹಾಗೂ ರಾಜೇಂದ್ರ ನಗರದ ಯುವಕರ ಬಳಗದ ವತಿಯಿಂದ ಶ್ರೀ ರಾಮನವಮಿ ಆಚರಿಸಲಾಯಿತು. ಈ ವೇಳೆ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಬಿಜೆಪಿ ರಾಜ್ಯ ಸಹ ಸಂಚಾಲಕ ಸು. ಮುರಳಿ, ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಎಚ್.ವಿ. ಗಿರಿಧರ್, ರಾಜ್ಯ ಅಲ್ಪ ಸಂಖ್ಯಾತರ ಪ್ರಧಾನ ಕಾರ್ಯದರ್ಶಿ ಅನಿಲ್ ಥಾಮಸ್, ನರಸಿಂಹರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ವೇಲು, ಅದ್ದೂರಿ ಮಂಜು, ಮೈಸೂರು ನಗರ ಓಬಿಸಿ ಉಪಾಧ್ಯಕ್ಷ ಕೃಷ್ಣಮೂರ್ತಿ, ನರಸಿಂಹರಾಜ ಕ್ಷೇತ್ರದ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಧನರಾಜ್, ನರಸಿಂಹರಾಜ ಕ್ಷೇತ್ರದ ಯುವ ಮೋರ್ಚಾ ಕಾರ್ಯದರ್ಶಿ ಜ. ಅರುಣ್, ಸಾಮರಸ್ಯ ವೇದಿಕೆಯ ಎಸ್. ನಾಗೇಂದ್ರ, ಪ್ರಶಾಂತ್, ಸುಮನ್, ಗೋವಲ್, ಚಂದು, ಚಂದ್ರು, ಸಂತು, ಮಧು ಇನ್ನಿತರರಿದ್ದಾರೆ.

ಟಿಸಿಎಸ್ ಟೆಕ್‌ಬೈಟ್ಸ್‌ನಲ್ಲಿ ಮೈಸೂರಿನ ಕುನಾಲ್ ವಿನ್ನರ್



ಮೈಸೂರು, ಮಾ. 31– ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಮತ್ತು ಕರ್ನಾಟಕ ಸರ್ಕಾರ ಪ್ರವರ್ತಿಸಿದ ಸ್ವಾಯತ್ತ ಸಂಸ್ಥೆಯಾದ ಐಟಿ ಶಿಕ್ಷಣ ಗುಣಮಟ್ಟ ಮಂಡಳಿ (ಬೈಟ್ಸ್), ಟಿಸಿಎಸ್ ಟೆಕ್‌ಬೈಟ್ಸ್ 14ನೇ ಆವೃತ್ತಿಯ ಮೈಸೂರು ಪ್ರಾದೇಶಿಕ ಫೈನಲ್‌ನ ವಿಜೇತರನ್ನು ಪ್ರಕಟಿಸಿದೆ. ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಕುನಾಲ್ ವಿಜೇತರಾಗಿದ್ದಾರೆ. ರಾಮನಗರದ ಎ.ಎಂ. ಐಶ್ವರ್ಯ ರನ್ನರ್ ಅಪ್ ಆಗಿದ್ದಾರೆ.

ಟಿಸಿಎಸ್ ವಿಜೇತರಿಗೆ ರೂ 12,000 ಮೌಲ್ಯದ ಉಡುಗೊರೆ ವೋಚರ್‌ಗಳನ್ನು ಮತ್ತು ರೂ 10,000 ಮೌಲ್ಯದ ರನ್ನರ್ ಅಪ್ ವೋಚರ್‌ಗಳನ್ನು ನೀಡಿದೆ. ಜತೆಗೆ ಎಲ್ಲಾ ಫೈನಲಿಸ್ಟ್‌ಗಳಿಗೆ ಗಿಫ್ಟ್ ವೋಚರ್‌ಗಳನ್ನು ನೀಡಲಾಯಿತು. ವಿಜೇತರು ಏಪ್ರಿಲ್ 5 ರಂದು ಬೆಂಗಳೂರಿನಲ್ಲಿ ನಡೆಯಲಿರುವ ರಾಜ್ಯ ಫೈನಲ್‌ನಲ್ಲಿ ಪ್ರತಿನಿಧಿಸಲಿದ್ದಾರೆ ಎಂದು ಟಿಸಿಎಸ್ ಬೆಂಗಳೂರಿನ ಪ್ರಾದೇಶಿಕ ಮುಖ್ಯಸ್ಥ ಸುನಿಲ್ ದೇಶಪಾಂಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರೋಗ್ಯ ತಪಾಸಣೆ ಶಿಬಿರ

ಮೈಸೂರು, ಮಾ. 31– ಮೈಸೂರಿನ ಅಗ್ರಹಾರದ ನೂರೊಂದು ಗಣಪತಿ ದೇವಸ್ಥಾನದ ಬಳಿಯಿರುವ ಆರೋಗ್ಯ ಮಂದಿರದಲ್ಲಿ ನಾಳೆ (ಏ.1) ಶನಿವಾರ ಬೆಳಗ್ಗೆ 8ರಿಂದ ಮಧ್ಯಾಹ್ನ 12ಗಂಟೆ ವರೆಗೆ ಆರೋಗ್ಯ ತಪಾಸಣಾ ಉಚಿತ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ರಕ್ತ, ಮೂತ್ರ ತಪಾಸಣೆ ಜತೆಗೆ ಆಯುರ್ವೇದದಲ್ಲಿ ತಿಳಿಸಿರುವ ಆಹಾರ, ಜೀವನ ಶೈಲಿ, ಯೋಗ, ವ್ಯಾಯಾಮದ ಬಗ್ಗೆ ಮಾಹಿತಿ ನೀಡಲಾಗುವುದು. ಆಸಕ್ತರು ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಆಗಮಿಸಿ ತಪಾಸಣೆಗೆ ಒಳಗಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

ನಿಧನ



ಎಂ.ಜಿ.ಮಹೇಶ್

ಮೈಸೂರು, ಮಾ.31–ಮೈಸೂರಿನ ಜೆ.ಪಿ.ಪ್ಯಾಲೇಸ್ ಮ್ಯಾನೇಜರ್, ಅಪ್ರಮೇಯ ರೆಸಾರ್ಟ್ ಮಾಲೀಕರೂ ಮತ್ತು ಸೆಂಚುರಿ ಪಾರ್ಕ್ ಲೇಔಟ್ ನಿವಾಸಿ ಪಿ.ಗೋವಿಂದರಾಜು ಅವರ ಪುತ್ರ ಎಂ.ಜಿ. ಮಹೇಶ್(40) ಶುಕ್ರವಾರ ಹೃದಯಾಘಾತದಿಂದ ನಿಧನರಾದರು.

ದಿವಂಗತರು ತಂದೆ–ತಾಯಿ, ಪತ್ನಿ ಸೌಮ್ಯ, ಮಕ್ಕಳಾದ ಚಾಣಕ್ಯ, ಜತಶ್ಯ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ (ಏ.1) ಬೆಳಗ್ಗೆ 11.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಆರ್.ಕ್ಷೇತ್ರದಲ್ಲಿ ವೀರಶೈವ ಲಿಂಗಾಯತರಿಗೆ ಕಾಂಗ್ರೆಸ್ ಟಿಕೆಟ್ ಕೊಡಿ

ವೀರಶೈವ ಲಿಂಗಾಯತ ಸಂಘಟನೆಗಳ ಮುಖಂಡರ ಸಭೆಯಲ್ಲಿ ಆಗ್ರಹ



ಮೈಸೂರು, ಮಾ. 31–ಈ ಚುನಾವಣೆಯಲ್ಲಿ ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ ವೀರಶೈವ–ಲಿಂಗಾಯತರಿಗೆ ಕಾಂಗ್ರೆಸ್ ಟಿಕೆಟ್ ಕೊಡಬೇಕು ಎಂದು ವೀರಶೈವ–ಲಿಂಗಾಯತ ಭಾರತ ಮಹಾಸಭಾ, ವೀರಶೈವ ಲಿಂಗಾಯತ ಸಂಘ–ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟ ಆಗ್ರಹಿಸಿದೆ.

ನಗರದ ಖಾಸಗಿ ಹೋಟೆಲ್‌ನಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಟಿ.ಎಸ್. ಲೋಕೇಶ್ ಅವರು, ವೀರಶೈವ ಲಿಂಗಾಯತ ಮತದಾರರು ಹೆಚ್ಚಾಗಿರುವ ವರುಣಾ ಮತ್ತು ಕೆ.ಆರ್. ಕ್ಷೇತ್ರದಲ್ಲಿ ಸಮುದಾಯದವರಿಗೆ ಟಿಕೆಟ್ ನೀಡಬೇಕು ಎಂಬುದು ನಮ್ಮ ಆಗ್ರಹವಾಗಿದೆ. ಆದರೆ ಸುಮಾರು 70 ಸಾವಿರ ವೀರಶೈವ ಲಿಂಗಾಯತ ಮತದಾರರಿರುವ ವರುಣಾ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಸ್ಪರ್ಧೆ ಮಾಡುತ್ತಿರುವುದರಿಂದ ಅಲ್ಲಿ ಟಿಕೆಟ್ ಕೊಡುವಂತೆ ಕೇಳಲಾಗುತ್ತಿಲ್ಲ. ಆದರೆ, 40 ಸಾವಿರ ಮತದಾರರಿರುವ ಕೃಷ್ಣರಾಜ ಕ್ಷೇತ್ರದಲ್ಲಿ ವೀರಶೈವ ಲಿಂಗಾಯತರಿಗೆ ಕಾಂಗ್ರೆಸ್ ಟಿಕೆಟ್ ಕೊಡಬೇಕು ಎಂಬುದು ನಮ್ಮ ಆಗ್ರಹವಾಗಿದೆ ಎಂದರು.

ವೀರಶೈವ–ಲಿಂಗಾಯತರ ಜನಸಂಖ್ಯೆಗೆ ಅನುಗುಣವಾಗಿ ರಾಜ್ಯದಲ್ಲಿ 65 ಕ್ಷೇತ್ರಗಳಲ್ಲಿ ಟಿಕೆಟ್ ಕೊಡುವಂತೆ ಸಮುದಾಯದ ಪ್ರಮುಖರು ಕೇಂದ್ರ ಹಾಗೂ ರಾಜ್ಯ ನಾಯಕರುಗಳಿಗೆ ಮನವಿ ಮಾಡಿದ್ದಾರೆ. ನಾವು ಕೆ.ಆರ್.ಕ್ಷೇತ್ರದಲ್ಲಿ ಅವಕಾಶ ಮಾಡಿಕೊಡುವಂತೆ ಹಿರಿಯರಾದ ಶಾಮನೂರು ಶಿವಶಂಕರಪ್ಪ, ಎಂ.ಬಿ. ಪಾಟೀಲ್, ಈಶ್ವರ್ ಖಂಡ್ರೆ ಅವರನ್ನು ಒತ್ತಾಯಿಸಿದ್ದೇವೆ. ಅಲ್ಲದೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಗೂ ಮನವಿ ಮಾಡಿದ್ದೇವೆ ಎಂದರು.

ಬಿಜೆಪಿ ಮತ್ತು ಜೆಡಿಎಸ್‌ನಲ್ಲಿ ವೀರಶೈವ ಲಿಂಗಾಯತರಿಗೆ ಮೈಸೂರು ಜಿಲ್ಲೆಯ ಕೆಲ ಕ್ಷೇತ್ರಗಳಲ್ಲಿ ಅವಕಾಶ ನೀಡಲಾಗಿದೆ. ಆದರೆ ಕಳೆದ ಮೂರು ಚುನಾವಣೆಗಳಲ್ಲೂ ಕಾಂಗ್ರೆಸ್ ಪಕ್ಷ ಸಾಮಾಜಿಕ ನ್ಯಾಯದಡಿ ನಮ್ಮ ಸಮುದಾಯದವರಿಗೆ ಟಿಕೆಟ್ ಕೊಟ್ಟಿಲ್ಲ ಎಂಬ ನೋವು ನಮಗಿದೆ. ಈ ಬಾರಿ ಕೆ.ಆರ್.ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿರುವ ವೀರಶೈವ ಲಿಂಗಾಯತರ ಪೈಕಿ ಒಬ್ಬರಿಗೆ ಟಿಕೆಟ್ ನೀಡಲೇಬೇಕು ಎಂದು ಅವರು ಆಗ್ರಹಿಸಿದರು. ಕೃಷ್ಣರಾಜ ಕ್ಷೇತ್ರದಲ್ಲಿ ಬಿಜೆಪಿಯಿಂದ ಎಸ್. ಎ.ರಾಮದಾಸ್ ಅವರಿಗೆ ಟಿಕೆಟ್ ನೀಡದೇ ಹೋದಲ್ಲಿ ವೀರಶೈವ–ಲಿಂಗಾಯತ ವರ್ಗದ ಮುಖಂಡರಿಗೆ ಬಿಜೆಪಿ ಟಿಕೆಟ್ ಕೊಡುವಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಲ್ಲಿ ಮನವಿ ಮಾಡಿದ್ದೇವೆ. ವರುಣಾ ಕ್ಷೇತ್ರದಲ್ಲಿ ಬಿಜೆಪಿಯಿಂದ ಯಾರಿಗೇ ಟಿಕೆಟ್ ಕೊಟ್ಟರೂ ವೀರಶೈವರಿಗೆ ಸಿಗಲಿದೆ. ಹಾಗಾಗಿ, ಕಾಂಗ್ರೆಸ್‌ನಿಂದ ಕೆ.ಆರ್.ಕ್ಷೇತ್ರದಲ್ಲಿ ಟಿಕೆಟ್ ಕೊಡಬೇಕು. ಒಂದು ವೇಳೆ ಟಿಕೆಟ್ ಕೈತಪ್ಪಿದರೆ ಸಂಘಟಕರ ಸಭೆ ಕರೆದು ಮುಂದಿನ ತೀರ್ಮಾನ ಕೈಗೊಳ್ಳುತ್ತೇವೆ ಎಂದ ಅವರು, ಕೆ.ಆರ್.ಕ್ಷೇತ್ರದಲ್ಲಿ ಮೂರೂ ಪಕ್ಷಗಳು ವೀರಶೈವ ಲಿಂಗಾಯತರನ್ನೇ ಕಣಕ್ಕಿಳಿಸಿದರೆ ಯಾರಿಗೆ ಮತ ಹಾಕಬೇಕು ಎಂಬುದನ್ನು ಸಮಾಜದ ತೀರ್ಮಾನಕ್ಕೆ ಬಿಡುತ್ತೇವೆ. ಗೆಲ್ಲುವ ಅಭ್ಯರ್ಥಿಗೆ ಬೆಂಬಲ ಕೊಡಲಾಗುವುದು. ಯಾರೇ ಗೆದ್ದರೂ ನಮ್ಮವರೇ ಆಗಿರುವ ಕಾರಣ ಗೆಲ್ಲುವ ಅಭ್ಯರ್ಥಿ ಪರವಾಗಿ ನಿಲ್ಲುವುದು ಸಹಜ ಎಂದರು. ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಕಾರ್ಯಕಾರಿಣಿ ಸದಸ್ಯ ಗುರುಸ್ವಾಮಿ, ಜಾಗತಿಕ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಗಂಗಾಧರಸ್ವಾಮಿ, ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಟಿ.ಲಿಂಗರಾಜು, ವೀರಶೈವ ಮಹಾಸಭಾ ಮೈಸೂರು ತಾಲೂಕು ಅಧ್ಯಕ್ಷ ಬಿ.ಕೆ.ನಾಗರಾಜು, ಜಿಲ್ಲಾ ಉಪಾಧ್ಯಕ್ಷ ಎಲ್.ಎಸ್.ಮಹದೇವಸ್ವಾಮಿ, ನಗರ ಘಟಕದ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಮತ್ತಿತರರು ಹಾಜರಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭ

ಮೊದಲ ದಿನ ಪ್ರಥಮ ಭಾಷೆಗೆ 590 ವಿದ್ಯಾರ್ಥಿಗಳು ಗೈರು



ಮೈಸೂರು, ಮಾ. 31(ಆರ್‌ಕೆ)– ರಾಜ್ಯಾದ್ಯಂತ ಇಂದಿನಿಂದ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಆರಂಭಗೊಂಡಿವೆ.

ಮೈಸೂರು ನಗರದ 45 ಸೇರಿ ಜಿಲ್ಲೆಯಾದ್ಯಂತ ಒಟ್ಟು 148 ಕೇಂದ್ರಗಳಲ್ಲಿ ಇಂದು ಪ್ರಥಮ ಭಾಷೆ ಪತ್ರಿಕೆಗಳ ಪರೀಕ್ಷೆಯು ಯಾವುದೇ ಗೊಂದಲವಿಲ್ಲದೇ ಶಾಂತಿಯುತವಾಗಿ ನಡೆದವು. ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ ಹಾಗೂ ಸಾರ್ವಜನಿಕ ಶಿಕ್ಷಣ ಮಂಡಳಿ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್ ಅವರು ಕೆಲ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಜಿಲ್ಲೆಯಾದ್ಯಂತ ನೋಂದಣಿಯಾಗಿರುವ ಒಟ್ಟು 37,475 ವಿದ್ಯಾರ್ಥಿಗಳ ಪೈಕಿ 411 ಹೊಸಬರು ಹಾಗೂ 179 ಪುನರಾವರ್ತಿತ ಸೇರಿ 590 ಮಂದಿ ಇಂದಿನ ಪ್ರಥಮ ಭಾಷೆ ಪರೀಕ್ಷೆಗೆ ಗೈರು ಹಾಜರಾಗಿದ್ದರು ಎಂದು ಡಿಡಿಪಿಐ ತಿಳಿಸಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಎಲ್ಲಾ ಕೇಂದ್ರಗಳಲ್ಲಿ ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಪರೀಕ್ಷಾ ಅಕ್ರಮ ನಡೆಯದಂತೆ ಕಟ್ಟೆಚ್ಚರ ವಹಿಸಿದ್ದರು. ನಿಗದಿತ ಸಮಯಕ್ಕೆ ಸರಿಯಾಗಿ ಪ್ರಶ್ನೆ ಪತ್ರಿಕೆ, ಉತ್ತರ ಪತ್ರಿಕೆ ನೀಡಿ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಶಿಕ್ಷಣ ಇಲಾಖೆಯು ಸುಸೂತ್ರವಾಗಿ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳಿಗೆ ವ್ಯವಸ್ಥೆ ಮಾಡಿದ್ದರು. ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿಯಲ್ಲಿ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಿ ಜೆರಾಕ್ಸ್ ಅಂಗಡಿಗಳನ್ನು ಬಂದ್ ಮಾಡಿಸಲಾಗಿತ್ತಲ್ಲದೇ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಪರೀಕ್ಷಾ ಕೇಂದ್ರಕ್ಕೆ ತೆರಳಲು ಪ್ರವೇಶ ಪತ್ರ ತೋರಿಸಿದ ವಿದ್ಯಾರ್ಥಿಗಳಿಗೆ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಮೊದಲ ದಿನದ ಪ್ರಥಮ ಭಾಷೆ ಪರೀಕ್ಷೆ ಬರೆದು ಬಂದ ವಿದ್ಯಾರ್ಥಿಗಳು ಪ್ರಶ್ನೆ ಪತ್ರಿಕೆ ಸುಲಭವಾಗಿತ್ತು. ಎಲ್ಲಾ ಪ್ರಶ್ನೆಗಳಿಗೂ ಸರಿಯಾಗಿ ಉತ್ತರ ಬರೆದಿದ್ದೇವೆ ಎಂದು ಸಂತಸಪಡುತ್ತಿದ್ದರು.

ಉಚಿತ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಮಾ. 31– ವಿಕಲಚೇತನರಿಗೆ ಉದ್ಯೋಗ ಕೇಂದ್ರಿತ ಉಚಿತ ತರಬೇತಿಗೆ ಸಮರ್ಥನಂ ಅಂಗವಿಕಲರ ಸಂಸ್ಥೆಯಿಂದ ಅರ್ಜಿ ಆಹ್ವಾನಿಸಲಾಗಿದೆ. ದೈಹಿಕ, ದೃಷ್ಟಿ, ವಾಕ್ ಮತ್ತು ಶ್ರವಣ ನ್ಯೂನತೆ ಇರುವ ವಿಕಲಚೇತನರು ಅರ್ಜಿ ಸಲ್ಲಿಸಬಹುದು. ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿರಬೇಕು, 18 ರಿಂದ 30 ವರ್ಷದ ಒಳಗಿನ ವಯಸ್ಸಿನ ವಿಕಲಚೇತನರು ಅರ್ಜಿ ಸಲ್ಲಿಸಬಹುದಾಗಿದೆ. ತರಬೇತಿಯು ಏಪ್ರಿಲ್ ಮೊದಲನೇ ವಾರದಿಂದ ಪ್ರಾರಂಭವಾಗುತ್ತದೆ. ತರಬೇತಿ, ಪಠ್ಯಕ್ರಮ, ಊಟ ಮತ್ತು ವಸತಿ, ಮತ್ತು ಪ್ರಮಾಣಪತ್ರ ಎಲ್ಲವೂ ಉಚಿತವಾಗಿರುತ್ತದೆ. ತರಗತಿಯ ಅವಧಿಯು 3 ತಿಂಗಳು ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ 9449864693, 0806833399, 6364867818 ಸಂಪರ್ಕಿಸಬಹುದು.

ಕಾರ್ಮಿಕ ಮಹಿಳೆಯರಿಗೆ ಉತ್ತಮ ವಾತಾವರಣ ನಿರ್ಮಿಸಿ

ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ




ಮೈಸೂರು, ಮಾ. 31– ಕೆಲಸ ಮಾಡುವ ಮಹಿಳೆಯರಿಗೆ ಉತ್ತಮ ವಾತಾವರಣ ಕಲ್ಪಿಸಿಕೊಡಬೇಕು ಎಂದು ಮೈಸೂರು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕರಾದ ಕೆ.ಸಿ.ದಿವ್ಯಶ್ರೀ ತಿಳಿಸಿದ್ದಾರೆ.

ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಮತ್ತು ನೇಗಿಲಯೋಗಿ ಮಹಿಳೆಯರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಬುಧವಾರ ನೇಗಿಲಯೋಗಿ ಮರುಳೇಶ್ವರ ಸೇವಾಭವನದಲ್ಲಿ ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು ತಮ್ಮ ಕಚೇರಿಗಳಲ್ಲಿ ದೂರು ನಿವಾರಣಾ ಸಮಿತಿ ರಚಿಸಬೇಕು. ಕೆಲಸ ಮಾಡುವಾಗ ಏನಾದರೂ ಸಮಸ್ಯೆ ಉಂಟಾದರೆ ಆ ಸಂಸ್ಥೆ ಬಗೆಹರಿಸುವಂತಹ ಕೆಲಸ ಮಾಡಬೇಕು ಎಂದು ಸುಪ್ರೀಂಕೋರ್ಟ್ ಸಲಹೆ ನೀಡಿದೆ. ಆದರೆ ಇದರ ಬಗ್ಗೆ ನಮ್ಮ ಜೊತೆ ಕೆಲಸ ಮಾಡುತ್ತಿರುವವರಿಗೆ ಅರಿವಿಲ್ಲದೆ ಇರುವುದು ಬೇಸರದ ಸಂಗತಿ ಎಂದರು. ಸ್ತ್ರೀಯನ್ನು ಗೌರವಿಸುವ ವಿಚಾರದಲ್ಲಿ ನಮ್ಮ ಸಂಸ್ಕೃತಿಯಲ್ಲಿ ದ್ವಂದ್ವಗಳಿವೆ. ಹೆಣ್ಣು ಅಬಲೆ ಅನ್ನುವುದು, ಯಾವುದೋ ಒಂದು ಕಾರಣಕ್ಕೆ ಪುರುಷ ಸಮರ್ಥ ಎನ್ನುವ ಕಾರಣವನ್ನಿಟ್ಟುಕೊಂಡು ಮಹಿಳೆಯರನ್ನು ಮನೆಯೊಳಗೆ ಕೂಡಿಹಾಕಿದಂತಹ ಸಮಾಜದಲ್ಲೇ ಬಹಳಷ್ಟು ಮಹಿಳೆಯರು ಸಾಧನೆ ಮಾಡಿದ್ದಾರೆ.

ನಮ್ಮ ದೇಶದ ಜನಸಂಖ್ಯೆಗೆ ಹೋಲಿಸಿದರೆ ಬೆರಳೆಣಿಕೆಯಷ್ಟು ಮಹಿಳೆಯರ ಸಾಧನೆಯನ್ನು ನೋಡಿಕೊಂಡು ಹೋಗುವುದಾದರೆ ಸಾಧನೆ ತುಂಬ ಕಡಿಮೆ. ಏಕೆಂದರೆ ಹೆಣ್ಣು ಮತ್ತು ಗಂಡು ಪ್ರತಿ ಸಮಾಜದಲ್ಲಿ, ಪ್ರತಿ ಕುಟುಂಬದಲ್ಲಿ ಸಮಾನ ಸಾಮರ್ಥ್ಯ ಜವಾಬ್ದಾರಿಯನ್ನು ನಿರ್ವಹಿಸುವಂತಹ ಅನಿವಾರ್ಯ. ಇಲ್ಲವಾದರೆ ಎತ್ತು ಏರಿಗೆ ಎಳಿತು, ಕೋಣ ನೀರಿಗೆ ಎಳಿತು ಎನ್ನುವಂತಾಗುತ್ತದೆ. ಸುಸ್ಥಿರ ಸಮಾಜ ನಿರ್ಮಾಣದ ಬದಲು ಅಸ್ಥಿರ ಸಮಾಜ ರೂಪುಗೊಳ್ಳುತ್ತದೆ. ಸ್ತ್ರೀ ಸಾಧನೆ ಪರಂಪರೆಯಾಗಿ ಬೆಳೆದ ನಂತರ ಅದು ಸಮಾಜದ ಒಂದು ಅಂಗವಾಗುತ್ತದೆ ಎಂದರು. ನೇಗಿಲಯೋಗಿ ಮಹಿಳೆಯರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷೆ ಜೆ.ಶೋಭಾ ರಮೇಶ್ ಮಾತನಾಡಿ, ಅಡುಗೆ ಮನೆಗೆ ಸೀಮಿತವಾಗಿದ್ದ ಹೆಣ್ಣು ಇಂದು ಎಲ್ಲ ಕ್ಷೇತ್ರದಲ್ಲೂ ಸಾಧನೆ ಮಾಡಿದ್ದಾಳೆ. ಸ್ತ್ರೀ ಮನೆಯಲ್ಲಷ್ಟೆ ಅಲ್ಲದೆ ಮನೆಯಿಂದ ಹೊರಗೂ ತನ್ನದೆ ಆದ ಛಾಪು ಮೂಡಿಸಿದ್ದಾಳೆ ಆದರೂ ಸಮಾಜದಲ್ಲಿ ಮಹಿಳೆಯರ ಮೇಲಿನ ಶೋಷಣೆಗಳು ಸಂಪೂರ್ಣವಾಗಿ ನಿಂತಿಲ್ಲ ಈ ಬಗ್ಗೆ ಕಾನೂನು ಮತ್ತಷ್ಟು ಗಟ್ಟಿಯಾಗಬೇಕು ಎಂದರು. ಮಹಿಳೆಯರು ಶಿಕ್ಷಣವನ್ನು ಪಡೆಯುವ ಮೂಲಕ ಇನ್ನೂ ಹೆಚ್ಚಿನ ಸಾಧನೆ ಮಾಡಲು ಮುಂದಾಗಬೇಕು. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಮಹಿಳೆಯರು ಸದೃಢರಾಗಬೇಕು. ಕಾರ್ಯಕ್ರಮದಲ್ಲಿ ವಿದ್ಯಾವರ್ಧಕ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ.ಪಿ. ದೀಪು, ಪ್ರಗತಿಪರ ರೈತ ಮಹಿಳೆ ಚೈತ್ರ ರಾಜ್, ಉದ್ಯಮಿ ರಮ್ಯಾ ಉಮಾಶಂಕರ್, ಪ್ರತಿಭಾನ್ವಿತ ವಿದ್ಯಾರ್ಥಿನಿ ದುರ್ಗಾಭವಾನಿ ಅವರನ್ನು ಸನ್ಮಾನಿಸಲಾಯಿತು. ನಗರಪಾಲಿಕೆ ಸಹಾಯಕ ಆಯುಕ್ತರಾದ ಚಂದ್ರಮ್ಮ, ಕರ್ನಾಟಕ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಉಪನಿರ್ದೇಶಕಿ ಐ.ಎಂ.ಸವಿತಾ, ಪ್ರಾಧ್ಯಾಪಕಿ ಡಾ.ಎಚ್.ಪಿ.ಗೀತಾ, ಕಾರ್ಯದರ್ಶಿ ಮಂಜುಳಾ ಭದ್ರೇಗೌಡ, ಖಜಾಂಚಿ ಇನ್ನೂ ಸುವರ್ಣ ರಾಜ್, ಸಂಘದ ನಿರ್ದೇಶಕರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.4.2023 ಶನಿವಾರ, ಮಳೆ ನಕ್ಷತ್ರ: ರೇವತಿ, 31.03.2023 ರಿಂದ 13.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಅಂಗಳ ಸಾಹಿತ್ಯ ಬಳಗ, ಮಾನಸಗಂಗೋತ್ರಿ, ಲಡಾಯಿ ಪ್ರಕಾಶನ, ಗದಗ :** ಡಾ. ಎಚ್.ಎಸ್. ಅನುಪಮಾ ಅವರ ಬೆಳಗಿನೊಳಗು ಮಹಾದೇವಿಯಕ್ಕ ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಪ್ರೊ. ಎಚ್.ಎಸ್. ರಾಘವೇಂದ್ರರಾವ್, ಪುಸ್ತಕ ಕುರಿತು ಮಾತನಾಡುವವರು : ಡಾ. ಎಂ. ಉಷಾ, ಅಧ್ಯಕ್ಷತೆ : ಪ್ರೊ. ಅರವಿಂದ ಮಾಲಗತ್ತಿ, ಉಪಸ್ಥಿತರು : ಪ್ರಕಾಶಕ ಬಸವರಾಜ ಸೂಳಿಬಾವಿ, ಡಾ. ಎಚ್.ಎಸ್. ಅನುಪಮಾ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಉಪನ್ಯಾಸ, ಸ್ಥಳ: ಶ್ರೀರಾಮಕೃಷ್ಣ ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಅದಮ್ಯ ರಂಗಶಾಲೆ :** ರಂಗ ತರಬೇತಿ ಶಿಬಿರದ ಸಮಾರೋಪ ಹಾಗೂ ನಾಟಕ ಪ್ರದರ್ಶನ, ಉದ್ಘಾಟನೆ : ಸಾಹಿತಿ ಡಾ. ವಿಜಯಕುಮಾರಿ ಎಸ್. ಕರಿಕಲ್, ಅಧ್ಯಕ್ಷತೆ : ವಿಚಾರವಾದಿ ಡಾ. ಕೆ. ಕಾಳಚನ್ನೇಗೌಡ, ಮುಖ್ಯ ಅತಿಥಿಗಳು : ಅಂಕಣಕಾರ ಜೆ.ಬಿ. ರಂಗಸ್ವಾಮಿ, ಸ್ಥಳ: ಶ್ರೀ ಕುವೆಂಪು ರಂಗ ಮಂದಿರ, ಶ್ರೀ ವಿವೇಕಾನಂದ ಪದವಿಪೂರ್ವ ಕಾಲೇಜು, ಜಯಲಕ್ಷ್ಮಿಪುರಂ, ಸಂಜೆ 6ಕ್ಕೆ.

■ **ತರಳಬಾಳು ಸಮಾಗಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಡಾ. ಸ.ಜ. ನಾಗಲೋಟಿ ಮಠ ಅವರ ಆತ್ಮಕಥೆ ಆಧಾರಿತ ನಾಟಕ 'ಬಿಚ್ಚಿದ ಜೋಳಿಗೆ', ರಂಗರೂಪ : ಗಣೇಶ ಅಮೀನಗಡ, ನಿರ್ದೇಶನ : ಜಗದೀಶ್ ಆರ್. ಜಾಣೆ, ಉದ್ಘಾಟನೆ : ಕರ್ನಾಟಕ ವೈದ್ಯಕೀಯ ಸಂಘದ ಅಧ್ಯಕ್ಷ ಡಾ. ಶಿವಕುಮಾರ ಬಿ. ಲಕ್ಕೋಳ, ಉಪಸ್ಥಿತರು : ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ, ಕಲಬುರಗಿ ರಂಗಾಯಣ ನಿರ್ದೇಶಕ ಪ್ರಭಾಕರ ಜೋಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 6.45ಕ್ಕೆ.

ನಗರದಲ್ಲಿ ವಿವಿಧೆಡೆ ಶ್ರೀರಾಮೋತ್ಸವ

■ **ಶ್ರೀರಾಮ ಭಕ್ತವೃಂದ ಸೇವಾ ಟ್ರಸ್ಟ್ :** ಶ್ರೀ ರಾಮನವಮಿ, ಬೆಳಗ್ಗೆ 8 ರಿಂದ ಶ್ರೀರಾಮ ರಕ್ಷಾ ಹೋಮ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಟ್ರಸ್ಟ್ ಆವರಣ, ಜೆ.ಪಿ.ನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಸಿರಿಧಾನ್ಯದ ಸಿರಿ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರ್ ಉಮೇಶ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆಗಳು–ಸುನೀತಾ ಚಂದ್ರಕುಮಾರ್, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ ಮಾಲಿಕೆಯಲ್ಲಿ ಚಾಮರಾಜನಗರದ ದೀನಬಂಧು ಟ್ರಸ್ಟ್‌ನ ಪ್ರೊ.ಜಿ.ಎಸ್. ಜಯದೇವ್ ಅವರೊಂದಿಗೆ ಸವಾದ. ನಡೆಸಿಕೊಡುವವರು– ದಿವಾಕರ ಹೆಗಡೆ

ಮಧ್ಯಾಹ್ನ: 12.45 ಜನಪದ ಸಂಗೀತ–ಡಿ.ಆರ್.ಮಹದೇವಸ್ವಾಮಿ ಮತ್ತು ತಂಡ, 1.20 ಭಾವಗೀತೆ – ಎಸ್. ಪವೀಣ್, 3.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ– ಕೆ.ಬಿ. ಮೀನಾ, 4.00 ನಾಟಕ, 6.50 ಕೃಷಿರಂಗ "ತೋರಣ ಹೂರಣ", 8.00 ಯುವವಾಣಿ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಸಮಿತ್ ಕುಮಾರ್ ಮಲ್ಲಿಕ್, ದ್ರುಪದ್, ದಮಾರ್, ಅಕ್ರಂ ಖಾನ್–ತಬಲಾ



■ **ಶ್ರೀರಾಮ ದೇವಸ್ಥಾನ :** ಶ್ರೀರಾಮ ದೇವರ ಹಾಗೂ ನವಗ್ರಹ ವಿಗ್ರಹಗಳ ಕಳಾಕರ್ಷಣೆ ನಿಮಿತ್ತ ಹೋಮ, ಕಳಾಕರ್ಷಣೆ, ಅಭಿಷೇಕ, ಪೂಜಾ ಕಾರ್ಯಕ್ರಮ, ಪ್ರಸಾದ ವಿತರಣೆ, ಸ್ಥಳ: ಶ್ರೀರಾಮ ದೇವಸ್ಥಾನ, ಅರಮನೆ ಉತ್ತರ ಕೋಟೆ ಬಾಗಿಲು, ಸಂಜೆ 6ರಿಂದ.

■ **ಶ್ರೀರಾಮ ಸೇನಾ ಮಂಡಳಿ ಚಾರಿಟೆಬಲ್ ಟ್ರಸ್ಟ್, ಮೈಸೂರು ಉತ್ತರ :** 29ನೇ ಶ್ರೀ ರಾಮನವಮಿ ಸಂಗೀತೋತ್ಸವ–2023, ಬೆಳಗ್ಗೆ 10 ರಿಂದ ಸೀತಾ ಕಲ್ಯಾಣ, ಸೀತಾ ಸಹಸ್ರನಾಮ ಮತ್ತು ಶ್ರೀ ರಾಮ ಪಟ್ಟಾಭಿಷೇಕ, ಸಂಜೆ 6ಕ್ಕೆ ಎ.ವಿ. ಆನಂದ ಅವರಿಗೆ ಸಂಗೀತ ಕಲಾರಾಧಕ ಪ್ರಶಸ್ತಿ ಪ್ರದಾನ, ಡಾ. ಸುಕನ್ಯ ಪ್ರಭಾಕರ್ ಅವರು ನಿರ್ದೇಶಿತ ಸುರಭಿ ಗಾನ ಕಲಾ ಮಂದಿರದವರಿಂದ 'ಪಂಚಕಂ' ಸಂಗೀತ ನೃತ್ಯ ರೂಪಕ, ಸ್ಥಳ: ಶ್ರೀಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ,

■ **ಶ್ರೀ ಕಾಶೀಮಠದ ಶ್ರೀರಾಮಮಂದಿರ :** ಶ್ರೀರಾಮನವಮಿ, ಅನೂಪ್ ಶೆಣೈ ಅವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀ ಕಾಶೀಮಠದ ಶ್ರೀರಾಮಮಂದಿರ, ಶ್ರೀರಾಮಪೇಟೆ ಸಂಜೆ 6.15 ರಿಂದ.

■ **ಶ್ರೀ ರಾಮ ಸೇವಾ ಮಂಡಲಿ :** 70ನೇ ವರ್ಷದ ಶ್ರೀ ರಾಮೋತ್ಸವ, ಸಂಜೆ 6.30 ರಿಂದ ವಿದ್ವಾನ್ ತುಮಕೂರು ಬಿ. ರವಿಶಂಕರ್ ಮತ್ತು ವೃಂದದವರಿಂದ ತಾಳವಾದ್ಯ ಕಛೇರಿ – ನಾದಲಯ ಲಹರಿ, ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್ :** ಸಂಗೀತೋತ್ಸವ, ವಿದ್ವಾನ್ ಹೇರಂಬ ಮತ್ತು ವಿದ್ವಾನ್ ಹೇಮಂತ್ ಅವರಿಂದ ದ್ವಂದ್ವ ಕೊಳಲು ವಾದನ, ವಿದ್ವಾನ್ ವಿಶ್ವೇಷ್ ಚಂದ್ರಶೇಖರ್–ಪಿಟೀಲು, ವಿದ್ವಾನ್ ಹೆಚ್.ಎಸ್. ಸುಧೀಂದ್ರ–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30 ರಿಂದ.

■ **ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ :** 107ನೇ ರಾಮನವಮಿ ವಾರ್ಷಿಕ ಪರಂಪರೆಯ ಸಂಗೀತೋತ್ಸವ, ವಿದುಷಿ ಇಳ ಸಂಗೀತ ದಿಲೀಪ್ ಮತ್ತು ವಿದ್ವಾನ್ ಕೆ.ಜೆ. ದಿಲೀಪ್ ಅವರಿಂದ ದ್ವಂದ್ವ ವಯೋಲಿನ್ ವಾದನ, ವಿದ್ವಾನ್ ಚಲುವರಾಜು–ಮೃದಂಗ, ವಿದ್ವಾನ್ ಎನ್.ಗುರುಮೂರ್ತಿ–ಘಟಂ, ವಿದ್ವಾನ್ ಸುನಾದ್ ಅನೂರ್–ಖಂಜರ, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 6.15ಕ್ಕೆ.


■ **ಶ್ರೀರಾಮ ಮಂದಿರ :** ಶ್ರೀರಾಮ ನವಮಿ, ವಿದುಷಿ ದೀಪಾರಾವ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀರಾಮ ಮಂದಿರ, ಜಯನಗರ, ಸಂಜೆ 6.30 ರಿಂದ.

ಅರಕಲಗೂಡು ಜೆಡಿಎಸ್ ಶಾಸಕ ರಾಮಸ್ವಾಮಿ, ಕೂಡ್ಲಿಗಿ ಬಿಜೆಪಿ ಶಾಸಕ ಎನ್.ವೈ.ಗೋಪಾಲಕೃಷ್ಣ ರಾಜೀನಾಮೆ

ಕ್ರಮವಾಗಿ ಬಿಜೆಪಿ, ಕಾಂಗ್ರೆಸ್ ಸೇರ್ಪಡೆ ಸಾಧ್ಯತೆ

ಬೆಂಗಳೂರು, ಮಾ.31(ಕೆಎಂಶಿ)– ಅರಕಲಗೂಡು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಶಾಸಕ ಎ.ಟಿ.ರಾಮಸ್ವಾಮಿ ಮತ್ತು ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಎನ್.ವೈ.ಗೋಪಾಲಕೃಷ್ಣ ಅವರು ತಮ್ಮ ವಿಧಾನಸಭಾ ಸದಸ್ಯ ಸ್ಥಾನಕ್ಕೆ ಇಂದು ರಾಜೀನಾಮೆ ನೀಡಿದ್ದಾರೆ. ಗೋಪಾಲಕೃಷ್ಣ ಅವರು ಶಿರಸಿಯಲ್ಲಿ ವಿಧಾನಸಭೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಭೇಟಿ ಮಾಡಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರೆ, ವಿಧಾನಸಭೆ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಅವರಿಗೆ ತಮ್ಮ ರಾಜೀನಾಮೆ ಪತ್ರವನ್ನು ರಾಮಸ್ವಾಮಿ ಸಲ್ಲಿಸಿದ್ದಾರೆ.


ಎ.ಟಿ.ರಾಮಸ್ವಾಮಿ


ಗೋಪಾಲಕೃಷ್ಣ

ವಿಧಾನಸಭೆ ಚುನಾವಣೆ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಿದ್ದು, ರಾಮಸ್ವಾಮಿ ಬಿಜೆಪಿ, ಗೋಪಾಲಕೃಷ್ಣ ಕಾಂಗ್ರೆಸ್ ಸೇರುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ. ಗೋಪಾಲಕೃಷ್ಣ ಅವರು ಬಿಜೆಪಿ ತೊರೆಯಲಿದ್ದು, ಮೊಳಕಾಲ್ಮೂರು ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ ಎನ್ನಲಾಗಿದೆ. ಆದರೆ, ರಾಮಸ್ವಾಮಿ ಇನ್ನೂ ಮುಂದಿನ ರಾಜಕೀಯ ನಿರ್ಧಾರ ಕೈಗೊಂಡಿಲ್ಲ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

ಜೆಡಿಎಸ್‌ನಿಂದ ಅಂತರ ಕಾಯ್ದುಕೊಂಡಿದ್ದ ರಾಮಸ್ವಾಮಿ ಅವರ ಸ್ವಕ್ಷೇತ್ರ ಅರಕಲಗೂಡು ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಸಚಿವ ಎ.ಮಂಜು ಅವರನ್ನು ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿಸುವುದು ಬಹುತೇಕ ಖಚಿತವಾಗಿದೆ. ಹೀಗಾಗಿ ರಾಮಸ್ವಾಮಿ ಜೆಡಿಎಸ್ ತೊರೆಯುತ್ತಿದ್ದಾರೆ.

ರಾಜೀನಾಮೆ ಪತ್ರ ಸಲ್ಲಿಕೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ರಾಮಸ್ವಾಮಿ, ಜೆಡಿಎಸ್ ಬಿಟ್ಟಿರುವುದಾಗಿ ಎಲ್ಲೂ ಹೇಳಿಲ್ಲ. ಆದರೆ, ಜೆಡಿಎಸ್‌ನವರೇ ನನ್ನನ್ನು ಪಕ್ಷದಿಂದ ಹೊರ ಹಾಕಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿದ್ದೇ ನನಗೆ ಮುಳುವಾಯಿತು ಎಂದು ಹೇಳಿದ್ದಾರೆ. ಸಂತೋಷದಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಶಾಸಕನಾಗಲು ಅವಕಾಶ ಮಾಡಿಕೊಟ್ಟ ಜೆಡಿಎಸ್ ನಾಯಕರಿಗೆ ಧನ್ಯವಾದ ಸಲ್ಲಿಸುವುದಾಗಿ ಹೇಳಿದ್ದಾರೆ.

ವೈಯಕ್ತಿಕ ಹಿತಾಸಕ್ತಿಯಿಂದ ರಾಜಕೀಯ ಮಾಡಿಲ್ಲ. ಶಾಸಕನಾಗಿದ್ದಾಗ ಜನಪರ ಕೆಲಸ ಮಾಡಿದ್ದೇನೆ. ಸರಿ ಇದ್ದರೆ ಸರಿ. ತಪ್ಪಾಗಿದ್ದರೆ ತಪ್ಪು ಎಂದು ಹೇಳಿದ್ದೇನೆ. ಜನರ ಹಿತವನ್ನು ಬಯಸಿ ಕೆಲಸ ಮಾಡಿರುವುದಾಗಿ ಅವರು ತಿಳಿಸಿದ್ದಾರೆ.


ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಹಿರಿಯ ಕಾರ್ಯದರ್ಶಿಯನ್ನಾಗಿ ಹುಣಸೂರು ತಾಲೂಕು ಬಿಳಿಕೆರೆ ಹೋಬಳಿ ಹಳೇ ಬೀಡು ಗ್ರಾಮದ ಶ್ರೀಮತಿ ವೀಣಾ ಅವರನ್ನು ನೇಮಕ ಮಾಡಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ನೇಮಕಾತಿ ಪತ್ರ ನೀಡಿದರು. ಈ ವೇಳೆ ಶಾಸಕ ಹೆಚ್.ಪಿ. ಮಂಜುನಾಥ್ ಉಪಸ್ಥಿತರಿದ್ದಾರೆ.

ಬಿಜೆಪಿ ಅಲ್ಪಸಂಖ್ಯಾತ ಮುಖಂಡರ ರಾಜೀನಾಮೆ

ಮೈಸೂರು, ಮಾ.31– ಬಿಜೆಪಿ ಪಕ್ಷವು ಅಲ್ಪಸಂಖ್ಯಾತ ಸಮುದಾಯದ ಮೇಲೆ ನಿರಂತರವಾಗಿ ಅವಹೇಳನಕಾರಿ ಹೇಳಿಕೆ ನೀಡುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದು ಚಾಮುಂಡೇಶ್ವರಿ ಕ್ಷೇತ್ರ ನಗರ ಮಂಡಲದ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಜೆ.ಸ್ಟೀಫನ್ ಸುಜಿತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 2020ರಲ್ಲಿ ಚಾಮುಂಡೇಶ್ವರಿ ಕ್ಷೇತ್ರ ನಗರ ಮಂಡಲದ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷನಾಗಿ ನೇಮಕಗೊಂಡಿದ್ದು, ಸಂಘಟನೆ ಹಾಗೂ ಪಕ್ಷವನ್ನು ಬಲಪಡಿಸುವಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದೇನೆ. ಸತತವಾಗಿ ಬಿಜೆಪಿ ಪಕ್ಷದವರಿಂದ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ನಿರಂತರ ನಿಂದನೆ ಮತ್ತು ಇಂದಿನ ನಾಯಕರ ನಿಲುವುಗಳು ಬಿಜೆಪಿಯ ತತ್ವ ಮತ್ತು ಸಿದ್ಧಾಂತಗಳಿಗೆ ವಿರುದ್ಧವಾಗಿವೆ. ಜೊತೆಗೆ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಪಕ್ಷಕ್ಕಾಗಿ ಶ್ರಮಿಸಿದವರನ್ನು ಗುರುತಿಸಿ, ಸೂಕ್ತ ಸ್ಥಾನಮಾನ ನೀಡುವುದರಲ್ಲಿಯೂ ವಿಫಲವಾಗಿರುವ ಕಾರಣದಿಂದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿದ್ದೇನೆ ಎಂದು ತಿಳಿಸಿದ್ದಾರೆ.


ಮೈಸೂರು ಯೋಗ ಸಾಧಕರ ಬಳಗದ ವತಿಯಿಂದ ನಗರದ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾ ಮಂಟಪದಲ್ಲಿ ಭಾರತೀಯ ಸಂಸ್ಕೃತಿ ಕುರಿತು ಚಿಂತನಾ ಶಿಬಿರ ಹಾಗೂ ಯೋಗ ಸಾಧಕರ ಸಮಾವೇಶವನ್ನು ಶುಕ್ರವಾರ ಸಂಜೆ ಆಯೋಜಿಸಲಾಗಿತ್ತು. ಈ ವೇಳೆ ಹಿರಿಯ ಶಿಕ್ಷಣ ಯೋಗ ಶಿಕ್ಷಕ ನಾಗಭೂಷಣ್, ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಯೋಗಪ್ರಕಾಶ್, ಪರಮಹಂಸ ಯೋಗ ಮಹಾ ವಿದ್ಯಾನಿಲಯ ಅಧ್ಯಕ್ಷ ಶಿವಪ್ರಕಾಶ್, ಕವಯತ್ರಿ ರತ್ನಾ ಹಾಲಪ್ಪಗೌಡ, ಮುಕ್ತಕ ಸಾಹಿತಿ ಎಂ.ಮುತ್ತುಸ್ವಾಮಿ, ಸಂತೋಷ್ ಎಸ್.ಗೌಡ ಮತ್ತು ಎ.ಸಿ.ರವಿಕುಮಾರ್ ಉಪಸ್ಥಿತರಿದ್ದರು.

ಜೆಡಿಎಸ್ ಸೇರ್ಪಡೆಗೊಂಡ ಕಾಂಗ್ರೆಸ್ ಮುಖಂಡರು


ಚಾಮುಂಡೇಶ್ವರಿ ಕ್ಷೇತ್ರದ ಕಾಮನಕೆರೆ ಹುಂಡಿ ಗ್ರಾಮದ ಕಾಂಗ್ರೆಸ್ ಮುಖಂಡರಾದ ರಾಜ್ಯ ಎಸ್‌ಎಲ್‌ಡಿ ಬ್ಯಾಂಕ್‌ನ ಮಾಜಿ ನಿರ್ದೇಶಕ ರಾಮೇಗೌಡ, ಮೈಸೂರು ತಾಲೂಕು ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕೃಷ್ಣ, ಸಿದ್ದಲಿಂಗಪುರ ಗ್ರಾಪಂ ಸದಸ್ಯರಾದ ಸುಮಾ ಮರಿಸ್ವಾಮಿ, ಮುಖಂಡರಾದ ಡಿ.ಮರಿಸ್ವಾಮಿ, ಡಿ.ಯೋಗೇಶ್ ಇತರರು ಕಾಂಗ್ರೆಸ್ ತೊರೆದು ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಶುಕ್ರವಾರ ಜೆಡಿಎಸ್ ಸೇರ್ಪಡೆಯಾದರು. ಈ ವೇಳೆ ಮುಖಂಡರಾದ ವಿಜಯೇಂದ್ರ, ಗೋಪಾಲ್, ಮಾದೇಶ್, ನಾರಾಯಣಪ್ಪ, ರೇವಣ್ಣ, ರಮ್ಮನಹಳ್ಳಿ ಜವರಪ್ಪ ಇತರರು ಉಪಸ್ಥಿತರಿದ್ದರು.

ನಾಳೆ ಹಳೆ ಕನ್ನಡ, ಹಿಂದಿ ಗೀತೆಗಳ 'ಗೀತ ಸಂಗಮ'

ಮೈಸೂರು, ಮಾ.31–ಮೈಸೂರು ಮ್ಯೂಸಿಕಲ್ ಲವರ್ಸ್ ಗ್ರೂಪ್ಸ್ ವತಿಯಿಂದ ಶ್ರೀಮತಿ ಕವಿತಾ ಕಾಮತ್ ಅವರ ಮಾರ್ಗದರ್ಶನದಲ್ಲಿ ಏ.2ರ ಭಾನುವಾರ ಸಂಜೆ 5.30ಕ್ಕೆ ನಂಜುಮಳಿಗೆ ವೃತ್ತದ ಬಳಿಯ ನಾದಬ್ರಹ್ಮ ಸಂಗೀತ ಸಭಾ ಸಭಾಂಗಣದಲ್ಲಿ ಹಳೆ ಕನ್ನಡ ಹಾಗೂ ಹಿಂದಿ ಚಿತ್ರಗೀತೆಗಳ ಸಂಗೀತ ಕಾರ್ಯಕ್ರಮ 'ಗೀತ ಸಂಗಮ' ಏರ್ಪಡಿಸಲಾಗಿದೆ.

ಮ್ಯೂಸಿಕಲ್ ಲವರ್ಸ್ ತಂಡದಲ್ಲಿ ಮೈಸೂರಿನ ವೈದ್ಯರು ಚಾರ್ಟೆಡ್ ಅಕೌಂಟೆಂಟ್‌ಗಳು, ಉದ್ಯಮಿಗಳು ಹಾಗೂ ವಿವಿಧ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಗಾಯನ ಪ್ರವೃತ್ತಿ ಉಳ್ಳಂಥವರು ಇದ್ದಾರೆ. ಅಂದು ರಾತ್ರಿ 8.45ರವರೆಗೆ ಗಾಯನ ಕಾರ್ಯಕ್ರಮ ನಡೆಯಲಿದ್ದು, ನಿತ್ಯಾನಂದ ಕಾಮತ್, ಶ್ರೀಮತಿ ಕವಿತಾ ಕಾಮತ್, ಡಾ. ಭಾರತಿ, ಡಾ. ಸೀತಾಲಕ್ಷ್ಮಿ, ಡಾ. ಸೋಮನಾಥ್ ವಾಸುದೇವ, ಡಾ. ಮಂಜುನಾಥ್, ನಿಖಿಲ್ ಪ್ರಭು, ಶ್ರೀಮತಿ ಸುಮಾ ಪ್ರಕಾಶ್, ಸದಾಶಿವ ಶೆಣೈ, ನಾರಾಯಣ್ ಎಡತಲೆ, ಸಂಗೀತ ರಸದೌತಣ ನೀಡಲಿದ್ದಾರೆ. ಇಲ್ಲಿ ಯಾವುದೇ ವೇದಿಕೆ ಕಾರ್ಯಕ್ರಮ ಇರುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಯಾರಿಗಿದೆಯೋ ಚಾಮುಂಡೇಶ್ವರಿ ವರ ಪ್ರಸಾದ



–ಎಸ್.ಬಿ.ದೇವರಾಜ

2023 ಚುನಾವಣೆ; ಮತದಾರರ ವಿವರ

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಸದ್ಯ 1,60,925 ಪುರುಷರು, 1,61,468 ಮಹಿಳೆಯರು, 31 ಇತರೆ ಸೇರಿ ಒಟ್ಟು 3,22,424 ಮತದಾರರಿದ್ದಾರೆ. ಇವರಲ್ಲಿ 2,595 ವಿಶೇಷ ಚೇತನರು ಹಾಗೂ 80 ವರ್ಷ ಮೇಲ್ಪಟ್ಟಿರುವ 9767 ಮತದಾರರಿದ್ದಾರೆ ಎಂದು ಗುರುತಿಸಲಾಗಿದ್ದು, ಇವರ ಮತದಾನಕ್ಕೆ ಅಗತ್ಯ ಸೌಲಭ್ಯ ಕಲ್ಪಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಕ್ಷೇತ್ರದ 337 ಮತಗಟ್ಟೆ ಕೇಂದ್ರಗಳನ್ನು ಸಜ್ಜುಗೊಳಿಸಲಾಗುತ್ತಿದೆ. ಕಳೆದ 2018ರ ಚುನಾವಣೆಯಲ್ಲಿ ಒಟ್ಟು 2,95,816 ಮತದಾರರಲ್ಲಿ 2,24,968 (ಶೇ.76.05) ಮಂದಿ ಮತ ಚಲಾಯಿಸಿದ್ದರು.

ವರ್ಷ	ಗೆದ್ದವರು	ಪಕ್ಷ	ಪಡೆದ ಮತ
1967	ಕೆ.ಪುಟ್ಟಸ್ವಾಮಿ	ಕಾಂಗ್ರೆಸ್	15721
1972	ಕೆ.ಪುಟ್ಟಸ್ವಾಮಿ	ಕಾಂಗ್ರೆಸ್	20981
1978	ಜಯದೇವರಾಜ ಅರಸು	ಕಾಂಗ್ರೆಸ್ (ಐ)	20,529
1983	ಸಿದ್ದರಾಮಯ್ಯ	ಪಕ್ಷೇತರ	26,614
1985	ಸಿದ್ದರಾಮಯ್ಯ	ಜನತಾ	33,725
1989	ಎಂ.ರಾಜಶೇಖರಮೂರ್ತಿ	ಕಾಂಗ್ರೆಸ್	42,892
1994	ಸಿದ್ದರಾಮಯ್ಯ	ಜನತಾ	76,823
1999	ಎ.ಎಸ್.ಗುರುಸ್ವಾಮಿ	ಕಾಂಗ್ರೆಸ್	57,107
2004	ಸಿದ್ದರಾಮಯ್ಯ	ಜಾ.ದಳ	90,727
2006(ಉ.ಚು)	ಸಿದ್ದರಾಮಯ್ಯ	ಕಾಂಗ್ರೆಸ್	1,15,512
2008	ಎಂ.ಸತ್ಯನಾರಾಯಣ	ಕಾಂಗ್ರೆಸ್	55,828
2013	ಜಿ.ಟಿ.ದೇವೇಗೌಡ	ಜಾ.ದಳ	75,864
2018	ಜಿ.ಟಿ.ದೇವೇಗೌಡ	ಜಾ.ದಳ	1,21,325

ಅಧಿದೇವತೆ ಚಾಮುಂಡೇಶ್ವರಿ ಹೆಸರಿನ ವಿಧಾನಸಭಾ ಕ್ಷೇತ್ರ, ರೋಚಕ ರಾಜಕೀಯ ಇತಿಹಾಸ ಒಳಗೊಂಡಿದೆ. ಈ ಕ್ಷೇತ್ರದಲ್ಲಿ ಘಟಾನುಘಟಿ ನಾಯಕರು ಸ್ಪರ್ಧಿಸಿ ರಾಜ್ಯ ರಾಜಕೀಯದಲ್ಲಿ ಮಿಂಚಿದ್ದಾರೆ. ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಒಕ್ಕಲಿಗ ಸಮುದಾಯದ ಪ್ರಾಬಲ್ಯವಿದೆಯಾದರೂ ವೀರಶೈವ ಲಿಂಗಾಯತ, ಪರಿಶಿಷ್ಟ ಜಾತಿ/ಪಂಗಡ, ಬ್ರಾಹ್ಮಣರು, ವಿಶ್ವಕರ್ಮ, ಕೊಡವರು, ಮುಸ್ಲಿಮರು, ಕ್ರಿಶ್ಚಿಯನ್ನರು ಹೀಗೆ ಎಲ್ಲಾ ಸಮುದಾಯದ ಮತದಾರರೂ ಇದ್ದಾರೆ. ಹಾಗಾಗಿ ಈ ಕ್ಷೇತ್ರದಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಜಾತಿ ಲೆಕ್ಕಾಚಾರ ಮೀರಿ, ಎಲ್ಲಾ ಸಮುದಾಯದವರ ಬೆಂಬಲ ಪಡೆಯುವುದು ಅನಿವಾರ್ಯವಾಗಿದೆ. ಈ ಕ್ಷೇತ್ರ, ಮೈಸೂರು ನಗರ ಹಾಗೂ ಗ್ರಾಮಾಂತರ ಪ್ರದೇಶಗಳನ್ನು ಒಳಗೊಂಡಿದೆ. ಮೈಸೂರು ಸುತ್ತಲಿನ ಹೊರ ವಲಯ ಹಾಗೂ ನಗರದ ಕೆಲವು ಬಡಾವಣೆಗಳು ಕ್ಷೇತ್ರಕ್ಕೆ ಸೇರಿವೆ. ಪ್ರತಿ ಚುನಾವಣೆಯಲ್ಲೂ ಒಂದಿಲ್ಲೊಂದು ಕಾರಣಕ್ಕೆ ಈ ಕ್ಷೇತ್ರ ರಾಜ್ಯದ ಗಮನ ಸೆಳೆದಿರುವುದು ವಿಶೇಷ. ಇದೀಗ ಮತ್ತೆ ಚುನಾವಣೆ ಬಂದಿದ್ದು, ಚಾಮುಂಡೇಶ್ವರಿ ರಣಕಣ ಸಿದ್ಧವಾಗಿದೆ.

2018ರ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರ ದೇಶದ ಗಮನ ಸೆಳೆದಿತ್ತು. ಡಿ.ದೇವರಾಜ ಅರಸು ಅವರ ನಂತರ 5 ವರ್ಷ ಆಡಳಿತ ಪೂರೈಸಿದ್ದ ಸಿದ್ದರಾಮಯ್ಯನವರು ಈ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಇವರ ವಿರುದ್ಧ ಜೆಡಿಎಸ್‌ನ ಶಾಸಕ ಜಿ.ಟಿ.ದೇವೇಗೌಡರು ಕಣಕ್ಕಿಳಿದಿದ್ದರು. ಒಟ್ಟಿಗೆ ರಾಜಕೀಯದಲ್ಲಿ ಬೆಳೆದು ಬಂದಿದ್ದ ಈ ಆತ್ಮೀಯರು ಪ್ರತಿಸ್ಪರ್ಧಿಗಳಾಗಿ ರಣಾಂಗಣಕ್ಕಿಳಿದಿದ್ದು ಸಹಜವಾಗಿ ಕುತೂಹಲ ಕೆರಳಿಸಿತ್ತು. ಇಡೀ ಜೆಡಿಎಸ್ ಪಕ್ಷಕ್ಕೆ ಇದು ಪ್ರತಿಷ್ಠೆಯ ಕಣವಾಗಿದ್ದರಿಂದ ಎಲ್ಲರ ಚಿತ್ತ ಕ್ಷೇತ್ರದ ಮೇಲಿತ್ತು. ಅಂದಿನ ಚುನಾವಣೆಯಲ್ಲಿ ಜಿ.ಟಿ.ದೇವೇಗೌಡರು 36 ಸಾವಿರ ಮತಗಳ ಅಂತರದಲ್ಲಿ ಸಿದ್ದರಾಮಯ್ಯನವರನ್ನು ಮಣಿಸಿ ನಿಬ್ಬೆರಗಾಗಿಸಿದರು. ಜಿ.ಟಿ.ದೇವೇಗೌಡರು 1,21,325 ಮತ ಗಳಿಸಿದರೆ, ಸಿದ್ದರಾಮಯ್ಯನವರಿಗೆ 85,283 ಮತದಾರರು ಬೆಂಬಲಿಸಿದ್ದರು. ಹಾಲಿ ಮುಖ್ಯಮಂತ್ರಿಯನ್ನು ಮಣಿಸುವ ಮೂಲಕ ಜಿ.ಟಿ.ದೇವೇಗೌಡರು ಸತತವಾಗಿ 2ನೇ ಬಾರಿ ಚಾಮುಂಡೇಶ್ವರಿಯಿಂದ ವಿಧಾನಸಭೆಗೆ ಆಯ್ಕೆಯಾದರು.

ಸಿದ್ದರಾಮಯ್ಯಗೆ ಮರುಜನ್ಮ: ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋಲುಂಡ ಸಿದ್ದರಾಮಯ್ಯ, ಹಿಂದೆ ಇದೇ ಕ್ಷೇತ್ರದಿಂದ ರಾಜಕೀಯ ಮರುಜನ್ಮ ಪಡೆದಿದ್ದು ಗಮನಾರ್ಹ. 2004ರ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಗೆದ್ದಿದ್ದ ಸಿದ್ದರಾಮಯ್ಯನವರು ಪಕ್ಷ ತೊರೆದು ಕಾಂಗ್ರೆಸ್ ಸೇರಿದರು. ಪರಿಣಾಮ 2006ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಮತ್ತೆ ಸ್ಪರ್ಧಿಸಿದ್ದರು. ಆ ವೇಳೆ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಸರ್ಕಾರವೇ ಸಿದ್ದರಾಮಯ್ಯನವರ ವಿರುದ್ಧ ಅಖಾಡಕ್ಕಿಳಿದಿತ್ತು. ಜೆಡಿಎಸ್ ಅಭ್ಯರ್ಥಿಯಾಗಿ ಶಿವಬಸಪ್ಪನವರನ್ನು ಕಣಕ್ಕಿಳಿಸಿ ಸಿದ್ದರಾಮಯ್ಯನವರ ಮಣಿಸಲು ತಂತ್ರ ರೂಪಿಸಲಾಗಿತ್ತು. ತೀವ್ರ ಹಣಾಹಣಿಯಲ್ಲಿ ಸಿದ್ದರಾಮಯ್ಯ ಕೇವಲ 257 ಮತಗಳ ಅಂತರದಲ್ಲಿ ಪ್ರಯಾಸದ ಗೆಲುವು ಸಾಧಿಸಿದರು. ಇಡೀ ಸರ್ಕಾರವೇ ಕ್ಷೇತ್ರದಲ್ಲಿ ಠಿಕಾಣಿ ಹೂಡಿ, ಏನೆಲ್ಲಾ ತಂತ್ರಗಾರಿಕೆ ಮಾಡಿದರೂ ಕ್ಷೇತ್ರದ ಜನ ರಾಜಕೀಯ ಪುನರ್ಜನ್ಮ ನೀಡಿದರೆಂದು ಸಿದ್ದರಾಮಯ್ಯನವರೂ ಹಲವು ಬಾರಿ ಸ್ಮರಿಸಿ ಕೊಂಡಿದ್ದಾರೆ. ಈ ಕ್ಷೇತ್ರದಿಂದ ಉಪಚುನಾವಣೆ ಸೇರಿ 8 ಬಾರಿ ಸ್ಪರ್ಧಿಸಿರುವ ಸಿದ್ದರಾಮಯ್ಯನವರು 5 ಬಾರಿ ಗೆಲುವು ದಾಖಲಿಸಿ, ಮೂರು ಬಾರಿ ಪರಾಭವಗೊಂಡಿದ್ದಾರೆ.

ಕ್ಷೇತ್ರದ ಹಿನ್ನೋಟ: ಮೈಸೂರು ನಗರ, ಮೈಸೂರು ನಗರ ಉತ್ತರ ಹಾಗೂ ಬಿಳಿಗೆರೆ ವ್ಯಾಪ್ತಿಯ ಪ್ರದೇಶಗಳನ್ನು ಸೇರಿಸಿ 1967ರಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ರೂಪಿಸಲಾಯಿತು. ಮೈಸೂರು ಭಾಗದ ಅಂದಿನ ಕಾಂಗ್ರೆಸ್ ಪ್ರಭಾವಿ ನಾಯಕರಾಗಿದ್ದ ಕೆ.ಪುಟ್ಟಸ್ವಾಮಿ ಅವರು ಚಾಮುಂಡೇಶ್ವರಿ ಕ್ಷೇತ್ರದಿಂದ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿ ಎಸ್.ನಿಜಲಿಂಗಪ್ಪ ಸಂಪುಟದಲ್ಲಿ ಸಚಿವರಾದರು. 1972ರಲ್ಲಿ ಪುನರಾಯ್ಕೆಯಾಗಿ ವೀರೇಂದ್ರ ಪಾಟೀಲ್ ಅವರ ಸಂಪುಟದಲ್ಲಿ ಸ್ಥಾನ ಪಡೆದರು. 1978ರ ಚುನಾವಣೆಯಲ್ಲಿ ಡಿ.ಜಯದೇವರಾಜ ಅರಸು ಕಾಂಗ್ರೆಸ್(ಐ) ಅಭ್ಯರ್ಥಿಯಾಗಿ ಜನತಾ ಪಕ್ಷದಿಂದ ಸ್ಪರ್ಧಿಸಿದ್ದ ಪಭಾವಿ ನಾಯಕ ಎಂ.ರಾಜಶೇಖರಮೂರ್ತಿ ಅವರನ್ನು ಮಣಿಸಿದರು. ಡಿ.ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಜಯದೇವರಾಜ ಅರಸು ಅವರನ್ನು ಮೈಸೂರಿನ ಮುಖ್ಯಮಂತ್ರಿ ಎನ್ನಲಾಗುತ್ತಿತ್ತು. ಇವರನ್ನು 1983ರ ಚುನಾವಣೆಯಲ್ಲಿ ಭಾರತೀಯ ಲೋಕ ದಳದ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಸಿದ್ದರಾಮಯ್ಯ ಮಣಿಸಿದರು. 1985ರಲ್ಲಿ ಜನತಾ ಪಾರ್ಟಿ ಅಭ್ಯರ್ಥಿಯಾಗಿ ಪುನರಾಯ್ಕೆಯಾದರು. 1989ರಲ್ಲಿ ರಾಜಶೇಖರಮೂರ್ತಿ(ಕಾಂಗ್ರೆಸ್) ಸಿದ್ದರಾಮಯ್ಯರನ್ನು(ಜೆಡಿ) ಮಣಿಸಿದರು. 1994ರಲ್ಲಿ ಸಿದ್ದರಾಮಯ್ಯ ಮತ್ತೆ ಕಾಂಗ್ರೆಸ್ ಅಭ್ಯರ್ಥಿ ಗುರುಸ್ವಾಮಿ ವಿರುದ್ಧ ಗೆಲುವು ಸಾಧಿಸಿದರು. 1999ರಲ್ಲಿ ಗುರುಸ್ವಾಮಿ, ಸಿದ್ದರಾಮಯ್ಯರನ್ನು(ಜೆಡಿಎಸ್) ಸೋಲಿಸಿ ವಿಧಾನಸಭೆಗೆ ಆಯ್ಕೆಯಾದರು. 2004ರಲ್ಲಿ ರೇವಣ್ಣ ಸಿದ್ಧಯ್ಯ ವಿರುದ್ಧ ಸಿದ್ದರಾಮಯ್ಯ ಗೆದ್ದು ಬೀಗಿದರು. ಬಳಿಕ ಜೆಡಿಎಸ್ ತೊರೆದು 2006 ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದು ಜೆಡಿಎಸ್ ಅಭ್ಯರ್ಥಿ ಶಿವಬಸಪ್ಪ ವಿರುದ್ಧ ಸಿದ್ದರಾಮಯ್ಯ ಗೆದ್ದರು. 2008ರಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ಸಿ.ಎನ್.ಮಂಜೇಗೌಡ ವಿರುದ್ಧ ಕಾಂಗ್ರೆಸ್‌ನ ಸತ್ಯನಾರಾಯಣ ಗೆಲುವು ದಾಖಲಿಸಿದರು. 2013ರಲ್ಲಿ ಜೆಡಿಎಸ್‌ನ ಜಿ.ಟಿ.ದೇವೇಗೌಡರು ಸತ್ಯನಾರಾಯಣ ಅವರನ್ನು ಮಣಿಸಿದರು. ಕಳೆದ 2018ರಲ್ಲಿ ಸಿದ್ಧರಾಮಯ್ಯರ ವಿರುದ್ಧ ಅದ್ವಿತೀಯ ಗೆಲುವಿನೊಂದಿಗೆ 2ನೇ ಬಾರಿ ಶಾಸಕರಾಗಿ ಜಿಟಿಡಿ ಆಯ್ಕೆಯಾಗಿದ್ದರು.

ಈ ಬಾರಿಯೂ ಕುತೂಹಲ ಸ್ಪರ್ಧೆ

ಸತತ 2 ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಜಿ.ಟಿ.ದೇವೇಗೌಡರಿಗೆ ಈ ಬಾರಿಯೂ ಜೆಡಿಎಸ್ ಟಿಕೆಟ್ ಘೋಷಿಸಿದೆ. ಬಿಜೆಪಿ ಹಾಗೂ ಕಾಂಗ್ರೆಸ್‌ನಿಂದ ಇನ್ನೂ ಅಭ್ಯರ್ಥಿಗಳನ್ನು ಘೋಷಿಸಿಲ್ಲ. ಬಿಜೆಪಿಯಿಂದ ಅರುಣ್ ಕುಮಾರ್ ಗೌಡ, ಕವೀಶ್ ಗೌಡ, ಹೇಮಂತ್ ಕುಮಾರ್ ಗೌಡ ಮತ್ತಿತರರು ಆಕಾಂಕ್ಷಿಗಳಾಗಿದ್ದಾರೆ. ಇನ್ನು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿರುವ ಮಾವಿನಹಳ್ಳಿ ಸಿದ್ದೇಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಸೇರಿದಂತೆ ಅನೇಕರು ಕಾಂಗ್ರೆಸ್ ಟಿಕೆಟ್ ನಿರೀಕ್ಷೆಯಲ್ಲಿದ್ದಾರೆ. ಈ ಎರಡೂ ಪಕ್ಷಗಳು ಜಿಟಿಡಿ ವಿರುದ್ಧ ಯಾರನ್ನು ಕಣಕ್ಕಿಳಿಸಲಿವೆ ಎಂಬ ಕುತೂಹಲ ಜನರಲ್ಲಿದೆ.

ಬಿಜೆಪಿಯನ್ನು ರಾಜಕೀಯವಾಗಿ ಎದುರಿಸಲು ಕಾರ್ಯಕರ್ತರು ಸಜ್ಜಾಗಿ

● ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಕರೆ ● ಬಿಜೆಪಿ ಸುಳ್ಳುಗಳನ್ನು ಹೇಳಿ ಹೇಳಿ ಜನರ ಮೆಚ್ಚಿಸುವ ಕಾರ್ಯ ಮಾಡುತ್ತಿದೆ; ಇದರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಸಲಹೆ



ಮೈಸೂರು, ಮಾ.31(ಜಿಎ)–ಹಲವಾರು ಕ್ಷೇತ್ರಗಳಲ್ಲಿ ಎಸ್.ಸಿ, ಎಸ್.ಟಿ ಸಮುದಾಯದವರು ನಿರ್ಣಾಯಕ ಮತದಾರರಾಗಿದ್ದು, ಕಾಂಗ್ರೆಸ್ ಕಾರ್ಯಕರ್ತರು ಸಕ್ರಿಯರಾಗಿ ಚುನಾವಣೆಯನ್ನು ಸಮರ್ಥ ರೀತಿ ಎದುರಿಸಬೇಕು ಎಂದು ಕೆ.ಪಿ.ಸಿ.ಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಕರೆ ನೀಡಿದರು.

ಮೈಸೂರು ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿಯ ಎಸ್.ಟಿ ಘಟಕದ ವತಿಯಿಂದ ಕಾಂಗ್ರೆಸ್ ಭವನದಲ್ಲಿ ಚುನಾವಣಾ ಪೂರ್ವಸಿದ್ಧತಾ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಮುಂಬರುವ ಚುನಾವಣೆಯಲ್ಲಿ ಪಕ್ಷ ಗೆಲ್ಲಲು ಎಲ್ಲರೂ ಸಹಕರಿಸಬೇಕು. ಹಾಗೆಯೇ ಎಸ್.ಟಿ. ಸಮಾಜದ ಸಾಮಾಜಿಕ ರಕ್ಷಣೆ ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ ಎಂದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಗ್ರಾಮಾಂತರ ಭಾಗದ 16 ಬ್ಲಾಕ್ ಸಮಿತಿ ಹಾಗೂ ನಗರದ 6 ಬ್ಲಾಕ್ ಸಮಿತಿಯ ಎಲ್ಲಾ ಮುಂಚೂಣಿ ಘಟಕಗಳು ಬಹಳ ಚುರುಕಿನಿಂದ ಚುನಾವಣೆಯಲ್ಲಿ ಭಾಗ ವಹಿಸಬೇಕು. ಮುಂದಿನ 40 ದಿನಗಳು ಸಂಪೂರ್ಣ ಚುನಾವಣಾ ಮಯವಾಗಿರುತ್ತದೆ. ಯಾವ ಒತ್ತಡಕ್ಕೂ ಹಾಗೂ ಆಮಿಷಗಳಿಗೂ ಬಲಿಯಾಗದೆ ನಮ್ಮ ಕಾರ್ಯಕರ್ತರು ನಿಷ್ಠೆ ಪ್ರಾಮಾಣಿಕತೆಯಿಂದ ಚುನಾವಣೆ ಮಾಡಬೇಕು ಎಂದರು.

ಮೀಸಲಾತಿಯನ್ನು ಅನುಷ್ಠಾನ ಮಾಡುವುದರ ಬಗ್ಗೆ ಬಿಜೆಪಿ ಶಾಸಕರಿಗೇ ಇನ್ನೂ ಗೊತ್ತಾಗುತ್ತಿಲ್ಲ. ಬಿಜೆಪಿ ಸುಳ್ಳುಗಳನ್ನು ಹೇಳಿ ಚುನಾವಣೆಗಳನ್ನು ಗೆಲ್ಲುವ ಕೀಳು ಮಟ್ಟಕ್ಕೆ ಹೋಗಿದೆ. ಅವರನ್ನು ಸಮರ್ಥವಾಗಿ ಎದುರಿಸಲು ನಮ್ಮ ಪಕ್ಷದ ಕಾರ್ಯಕರ್ತರು ಸೈನಿಕರಂತೆ ಹೋರಾಡಿ ಚುನಾವಣೆ ಗೆಲ್ಲಲು ಸನ್ನದ್ಧರಾಗಬೇಕು ಎಂದು ಸಲಹೆ ನೀಡಿದರು.

ಕೇಂದ್ರದ ಯು.ಪಿ.ಎ ಸರಕಾರದ ಅವಧಿಯಲ್ಲಿ ಎಸ್.ಸಿ, ಎಸ್.ಟಿ ಸಮುದಾಯಕ್ಕೆ ಸಾಕಷ್ಟು ಯೋಜನೆಗಳನ್ನು ನೀಡಿತ್ತು. ಸಿದ್ದರಾಮಯ್ಯನವರ ಅವಧಿಯಲ್ಲಿ ಅವರು ವಿದೇಶಕ್ಕೆ ಹೋಗುವ ಅವಕಾಶ ಕೊಟ್ಟಿದ್ದರು. ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ವಿದ್ಯಾರ್ಥಿವೇತನ ಕೊಟ್ಟು ಅವರ ವಿದ್ಯಾಭ್ಯಾಸಕ್ಕೆ ನೆರವು ನೀಡಲಾಗಿತ್ತು. ಆದರೆ ಎಸ್.ಸಿ ಎಸ್.ಟಿಗಳಿಗೆ ಕಾಂಗ್ರೆಸ್ ನೀಡಿದ್ದ ಸವಲತ್ತುಗಳನ್ನು ಇಂದು ಜನರಿಗೆ ಹೇಳಬೇಕಿದೆ. ಮನೆ ಮನೆಗೆ ಹೋಗಿ ಜನರಿಗೆ ತಿಳಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ ಸಾಮಾನ್ಯ ಜನರ ಜೀವನವನ್ನು ಕಟ್ಟಿಕೊಡುತ್ತೇವೆ ಎಂದು ವಿಶ್ವಾಸ ಹುಟ್ಟಿಸುವ ಕೆಲಸ ಮಾಡಬೇಕು ಎಂದರು.

ಸಮಯ ಬಹಳ ಕಡಿಮೆ ಇದೆ. ಈ ಭಾಗದಲ್ಲಿ ಒಂದು ಟ್ರೈನಿಂಗ್ ಕ್ಯಾಂಪ್ ಮಾಡಿ ಉತ್ತಮ ಕಾಂಗ್ರೆಸ್ ಕಾರ್ಯಕರ್ತರನ್ನು ಸಮಾಜಕ್ಕೆ ನೀಡಬೇಕಿದೆ. ನಮ್ಮ ಸರ್ಕಾರದ ಸಾಧನೆಗಳನ್ನು ಹೇಳಲು ಮೊದಲು ನಾವು ಸುಶಿಕ್ಷಿತರಾಗಬೇಕು. ನಮ್ಮ ಪ್ರಣಾಳಿಕೆಯಲ್ಲಿ 165 ಭರವಸೆ ಇದೆ ಅದರಲ್ಲಿ 4 ಘೋಷಣೆ ಮಾಡಿದ್ದೇವೆ ಮುಂದೆ ಹಲವು ಘೋಷಣೆಗಳನ್ನು ಮಾಡುತ್ತೇವೆ. ಆದರೆ, ಬಿ.ಜೆ.ಪಿ ಸುಳ್ಳುಗಳನ್ನು ಹೇಳಿ ಜನರಿಗೆ ಮೋಸ ಮಾಡುವ ಮೂಲಕ ಸಮಾಜವನ್ನು ದಾರಿ ತಪ್ಪಿಸುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಪಾರ್ಲಿಮೆಂಟರಿ ಉಸ್ತುವಾರಿ ಎಂ.ಕೆ ರಾಘವನ್ ಮಾತನಾಡಿ, ಬಿಜೆಪಿಯ ಸುಳ್ಳು ಅಪಪ್ರಚಾರಕ್ಕೆ ಕಾಂಗ್ರೆಸ್ ಬಲಿಯಾಗುತ್ತಿದೆ. ಸುಗ್ರೀವಾಜ್ಞೆಗಳ ಮೂಲಕ ಸಮಾಜಕ್ಕೆ ಮಾರಕವಾದ ಕಾನೂನುಗಳನ್ನು ಜಾರಿ ಮಾಡಿ ವಿರೋಧ ಪಕ್ಷಗಳನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ. ಈ ದೇಶವನ್ನು ಸುಭದ್ರವಾಗಿ ಇಡಲು ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ ಎಂದರು.

ಬಿಜೆಪಿ ಎಸ್.ಸಿ ಎಸ್.ಟಿ ಸಮುದಾಯಗಳಿಗೆ ಏನು ಮಾಡಿಲ್ಲ. ಒಂದು ಸರ್ಕಾರ ಎಂದರೆ ಸಾಮಾನ್ಯ ಜನರಿಗೂ ಬದುಕನ್ನು ಕಟ್ಟಿಕೊಡಬೇಕು. ಅದು ಸಿದ್ದರಾಮಯ್ಯನವರ ಸರ್ಕಾರ ಕೊಟ್ಟಿತ್ತು. ಈಗಾಗಲೇ ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಗೆದ್ದೇ ಗೆಲ್ಲುತ್ತದೆ ಎಂಬ ಮಾತುಗಳು ಕೇಳಿಬರುತ್ತಿವೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಶಾಸಕರಾದ ಹೆಚ್.ಪಿ ಮಂಜುನಾಥ್, ಅನಿಲ್ ಚಿಕ್ಕಮಾದು, ಯತೀಂದ್ರ ಸಿದ್ದರಾಮಯ್ಯ, ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಗ್ರಾಮಾಂತರ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್ ಕುಮಾರ್, ನಗರ ಅಧ್ಯಕ್ಷ ಆರ್.ಮೂರ್ತಿ, ಕೆ.ಆರ್.ನಗರ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿ ಶಂಕರ್, ಮಾಜಿ ಶಾಸಕ ಎಂ.ಕೆ ಸೋಮಶೇಖರ್, ರಾಜ್ಯ ಎಸ್.ಟಿ. ಘಟಕದ ಅಧ್ಯಕ್ಷ ಪಾಲಯ್ಯ, ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್, ಕೆ.ಹರೀಶ್‌ಗೌಡ, ಮಾವಿನಹಳ್ಳಿ ಸಿದ್ದೇಗೌಡ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಎಸ್.ಸಿ. ಬಸವರಾಜ್, ನಗರ ಎಸ್.ಟಿ. ಘಟಕ ಅಧ್ಯಕ್ಷ ರೋಹಿತ್, ಜಿಲ್ಲಾ ಘಟಕ ಅಧ್ಯಕ್ಷ ನಾರಾಯಣ ಸೇರಿದಂತೆ ಮತ್ತಿತರರು ಭಾಗಿಯಾಗಿದ್ದರು.

ನಕ್ಕರೆ ಅದೇ ಸ್ವರ್ಗ

ಗಂಡ : ಹೊಸ ರುಚಿ ಅಂತ ಏನ್ಮಾಡಿದೆಯೇನೆ?
ಬರೀ ಉಪ್ಪುಪ್ಪು

ಹೆಂಡತಿ : ನಾನೇನ್ಮಾಡ್ಲಿರೀ ಪ್ರಿಂಟ್ ಮಿಸ್ಟೇಕ್ ಆಗಿತ್ತು. 10 ಗ್ರಾಂ ಅಂತ ಇರೋ ಕಡೆ 100 ಗ್ರಾಂ ಅಂತ ಇತ್ತು. ಅದಕ್ಕೆ ಹೀಗಾಯ್ತು!

ಮೈಸೂರು ಮಿತ್ರ
ಶನಿವಾರ, 1 ಏಪ್ರಿಲ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........
ಒಳ್ಳೆಯ ಮಿತ್ರರನ್ನು ಹುಡುಕುವ ಮೊದಲು ನಾವು ಒಳ್ಳೆಯ ಮಿತ್ರರಾಗುವುದು ಅಗತ್ಯ –ಜಗ್ಗಿ ವಾಸುದೇವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅತ್ತೆಯ ಮನೆಗೆ ಮಜ್ಜಿಗೆ ನೀರು, ತೌರು ಮನೆಗೆ ಹಾಲು, ಮೊಸರು

ನಿಮ್ಮ ಪತ್ರಗಳು

■ ಪಾರ್ಕಿನ ಪಾದಚಾರಿ ಮಾರ್ಗ ಮಧ್ಯೆ ಮರದ ಕಾಂಡ



ಮಾನ್ಯರೆ,

ಮೈಸೂರಿನ ವಾಗ್ದೇವಿ ನಗರದ ಪಾರ್ಕಿನಲ್ಲಿ ಎರಡು ಮೂರು ತಿಂಗಳ ಹಿಂದೆ ಪಾರ್ಕಿನ ಪಾದಚಾರಿ ಮಾರ್ಗದಲ್ಲಿದ್ದ ಮರವೊಂದನ್ನು ಕಡಿದು ತೆರವುಗೊಳಿಸಲಾಗಿದೆ. ಆದರೆ ಮರದ ಕಾಂಡವನ್ನು ತೆರವುಗೊಳಿಸಿಲ್ಲ. ದಿನನಿತ್ಯ, ಮಕ್ಕಳು, ವಯೋವೃದ್ಧರು, ವಯಸ್ಕರು ಸೇರಿದಂತೆ ನೂರಾರು ಜನರು ಈ ಪಾರ್ಕಿನಲ್ಲಿ ವಾಕಿಂಗ್ ಹಾಗೂ ಇನ್ನಿತರ ವ್ಯಾಯಾಮ ಮಾಡಲು ಬರುತ್ತಾರೆ. ಮರದ ಕಾಂಡವು ವಾಕಿಂಗ್ ಮಾಡುವ ಪಾದಚಾರಿ ಮಾರ್ಗದ ಮಧ್ಯದಲ್ಲಿ ಇರುವುದರಿಂದ ನಡೆದುಕೊಂಡು ಹೋಗುವಾಗ, ಓಡಾಡುವಾಗ ಎಡವಿ ಬಿದ್ದು ಅನಾಹುತ ಸಂಭವಿಸುವ ಸಾಧ್ಯತೆವುಂಟು. ರಾತ್ರಿ ವೇಳೆ ಈ ಮರದ ಕಾಂಡ ಕಾಣುವುದಿಲ್ಲ. ಆದ್ದರಿಂದ ಸಂಬಂಧಪಟ್ಟವರು ಕೂಡಲೇ ಈ ಮರದ ಕಾಂಡವನ್ನು ತೆರವುಗೊಳಿಸಿ ಪಾರ್ಕಿಗೆ ಬರುವಂತಹ ಜನರಿಗೆ ನೆಮ್ಮದಿ ನೀಡಬೇಕಾಗಿ ಮನವಿ.

–ಸಂತೋಷ, ಜನತಾ ನಗರ, ಮೈಸೂರು

■ ನೀತಿ ಸಂಹಿತೆ ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಿ

ಮಾನ್ಯರೆ,

ಕರ್ನಾಟಕದ ಸಾರ್ವತ್ರಿಕ ವಿಧಾನಸಭಾ ಚುನಾವಣೆ ಘೋಷಣೆಯಾಗಿ ಚುನಾವಣೆ ನೀತಿ ಸಂಹಿತೆ ಜಾರಿಯಾದ ಬೆನ್ನಲ್ಲೇ, ರಾಜ್ಯಾದ್ಯಂತ ಚುನಾವಣಾ ಅಕ್ರಮಗಳ ಮೇಲೆ ಚುನಾವಣಾ ಆಯೋಗ ಹದ್ದಿನ ಕಣ್ಣಿಟ್ಟಿದೆ. ಅಧಿಕೃತವಾಗಿ ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದ್ದು, ಎಲ್ಲೆಡೆ ತಪಾಸಣೆ ಬಿಗಿಗೊಳಿಸಲಾಗಿದೆ. ಆದರೆ ರಾಜಕೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್, ಜನತಾದಳ ಇತ್ಯಾದಿ ಪಕ್ಷಗಳು ಚುನಾವಣೆಯಲ್ಲಿ ಗೆಲ್ಲಲು, ಮತದಾರರನ್ನು ಸೆಳೆಯಲು ಹಣ–ವಸ್ತುಗಳ ಆಮಿಷವನ್ನು ಒಡ್ಡುತ್ತಿವೆ. ಹಾಲಿ ಹಾಗೂ ಮಾಜಿ ಶಾಸಕರು ತಮ್ಮ ಭಾವಚಿತ್ರ ಇರುವ ಕುಕ್ಕರ್, ತವಾ ಸೆಟ್, ಮಿಕ್ಸಿ, ಟಿವಿ ಇತ್ಯಾದಿ ವಸ್ತುಗಳನ್ನು ಮತದಾರರಿಗೆ ಕಳ್ಳ ಮಾರ್ಗದಲ್ಲಿ ಹಂಚಲು ಮುಂದಾಗಿದ್ದಾರೆ. ಈ ರೀತಿಯಾಗಿ ಸಿಕ್ಕಿ ಬಿದ್ದಂತಹ ಕಾರ್ಯಕರ್ತರು, ಶಾಸಕರು, ಸಂಸದರು ಯಾರೇ ಆಗಿರಲಿ ಅಂತಹವರ ವಿರುದ್ಧ ಸರ್ಕಾರ ಅಥವಾ ಪೊಲೀಸ್ ಇಲಾಖೆ ಕಠಿಣ ಕ್ರಮವನ್ನು ತೆಗೆದುಕೊಳ್ಳಬೇಕು.

–ಎನ್. ಅಂಕರಾಜು, ಗ್ರಂಥಪಾಲಕ, ಮೈಸೂರು

■ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯಿರಿ


ಮಾನ್ಯರೆ,

ರಾಜ್ಯ ವಿಧಾನಸಭೆಗೆ ಚುನಾವಣೆ ಘೋಷಣೆಯಾಗುವುದರೊಂದಿಗೆ ರಾಜ್ಯದಲ್ಲಿ ಚುನಾವಣಾ ಚಟುವಟಿಕೆಗಳು ಗರಿಗೆದರಿವೆ. ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ಈಗಾಗಲೇ 124 ಅಭ್ಯರ್ಥಿಗಳ ಪ್ರಥಮ ಪಟ್ಟಿ ಬಿಡುಗಡೆ ಮಾಡಿದೆ. ಅತ್ತ ಮತ್ತೊಂದು ವಿರೋಧ ಪಕ್ಷವಾದ ಜಾತ್ಯಾತೀತ ಜನತಾದಳ ಕೆಲವು ಕ್ಷೇತ್ರಗಳ ಅಭ್ಯರ್ಥಿಗಳನ್ನು ಘೋಷಿಸಿದೆ. ಆದರೆ ಆಡಳಿತಾರೂಢ ಬಿಜೆಪಿ ಮಾತ್ರ ತನ್ನ ಅಭ್ಯರ್ಥಿಗಳ ಪಟ್ಟಿ ಘೋಷಿಸದೇ, 'ವೆಯಿಟ್ ಅಂಡ್ ಸೀ' ಪಾಲಿಸಿಗೆ ಶರಣಾಗಿದೆ. ಅದೇನೇ ಇರಲಿ ರಾಜ್ಯದಾದ್ಯಂತ ಚುನಾವಣಾ ಕಾವು ಏರ ತೊಡಗಿದ್ದು, ಟಿಕೆಟ್ ಆಕಾಂಕ್ಷಿತರು ಟಿಕೆಟ್ ಪಡೆಯಲು ಇನ್ನಿಲ್ಲದ ಸರ್ಕಸ್ ಮಾಡುತ್ತಿದ್ದಾರೆ. ಒಂದೇ ಕ್ಷೇತ್ರದಲ್ಲಿ ಹಲವಾರು ಅಭ್ಯರ್ಥಿಗಳು ಟಿಕೆಟ್ ಪಡೆಯಲು ಪೈಪೋಟಿಗಿಳಿದಿರುವುದರಿಂದ, ಪ್ರಮುಖ ರಾಜಕೀಯ ಪಕ್ಷಗಳಿಗೆ ಟಿಕೆಟ್ ಹಂಚಿಕೆ ಕಬ್ಬಿಣದ ಕಡಲೆಯಾಗಿದೆ. ಉದಾಹರಣೆಗೆ, ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ ಮೂವರು ಅಭ್ಯರ್ಥಿಗಳು ಶತಾಯ ಗತಾಯ ಕಾಂಗ್ರೆಸ್ ಟಿಕೆಟ್ ಪಡೆಯಲು ಪ್ರಯತ್ನಿಸುತ್ತಿದ್ದಾರೆ.

ರಾಜ್ಯಕ್ಕೆ ಈಗಾಗಲೇ ಪ್ರಧಾನಿ ನರೇಂದ್ರ ಮೋದಿಯವರು ಸೇರಿದಂತೆ ಬಿಜೆಪಿಯ ಹಿರಿಯ ನಾಯಕರು ಲಗ್ಗೆ ಹಾಕಿದ್ದಾರೆ. ಒಟ್ಟಿನಲ್ಲಿ ಈ ಬಾರಿಯ ಚುನಾವಣೆ ಸಾಕಷ್ಟು ಕುತೂಹಲ ಕೆರಳಿಸಿದೆ. ಕೆಲವು ಚುನಾವಣಾ ಸಮೀಕ್ಷೆಗಳ ಪ್ರಕಾರ, ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ ಎಂದು ಹೇಳಲಾಗುತ್ತಿದೆ. ಮತ್ತೊಂದು ಸಮೀಕ್ಷೆಯ ಪ್ರಕಾರ, ಈ ಬಾರಿಯೂ ಅತಂತ್ರ ವಿಧಾನಸಭೆ ಅಸ್ತಿತ್ವಕ್ಕೆ ಬರುತ್ತದೆಂದು ನಿರೀಕ್ಷಿಸಲಾಗಿದೆ. ಆಡಳಿತ ವಿರೋಧಿ ಅಲೆ ಮತ್ತು ಭ್ರಷ್ಟಾಚಾರ ಪ್ರಕರಣಗಳು ಆಡಳಿತರೂಢ ಬಿಜೆಪಿಗೆ ಮುಳುವಾಗಬಹುದು. ಅನೇಕ ಬಾರಿ ಎಲ್ಲಾ ಚುನಾವಣಾ ಸಮೀಕ್ಷೆಗಳು ಬುಡಮೇಲಾಗಿ ಅಚ್ಚರಿಯ ಫಲಿತಾಂಶ ಹೊರಬಿದ್ದಿರುವುದನ್ನು ಸಹಾ ಮತದಾರರು ಮರೆತಿಲ್ಲ.

ರಾಜ್ಯದಲ್ಲಿ ಚುನಾವಣಾ ಅಕ್ರಮಗಳನ್ನು ತಡೆಯಲು ಬಿಗಿ ಬಂದೋಬಸ್ತ್ ಮಾಡಲಾಗುತ್ತಿದೆ. ಅಕ್ರಮವಾಗಿ ಸಾಗಿಸಲಾಗುವ ಹಣ. ಮದ್ಯ, ಆಭರಣ, ವಸ್ತ್ರ ಮುಂತಾದವುಗಳನ್ನು ವಶಕ್ಕೆ ಪಡೆದು, ಆರೋಪಿಗಳನ್ನು ದಸ್ತಗಿರಿ ಮಾಡಲಾಗುತ್ತಿದೆ. 80 ವರ್ಷಕ್ಕೆ ಮೇಲ್ಪಟ್ಟ ಮತದಾರರಿಗೆ ಮತ ಚಲಾಯಿಸಲು ಅನುಕೂಲವಾಗುವ ಹಾಗೆ, ಅಂತಹವರ ಮನೆಗೆ ಚುನಾವಣಾ ಆಯೋಗದ ಸಿಬ್ಬಂದಿ ತೆರಳಿ, ಮತ ಚಲಾಯಿಸಲು ವ್ಯವಸ್ಥೆ ಮಾಡುವ ವಿಧಾನವೂ ಇದೇ ಪ್ರಥಮವಾಗಿ ಜಾರಿಗೆ ಬರಲಿದೆ. ಒಟ್ಟಿನಲ್ಲಿ ರಾಜ್ಯದಲ್ಲಿ ಚುನಾವಣಾ ಅಲೆ ಎದ್ದಿದ್ದು ಯಾವ ಪಕ್ಷ ಮುಳುಗುತ್ತೋ, ಯಾವ ಪಕ್ಷ ದಡ ಸೇರುತ್ತೋ ಎಂಬುದು ಕುತೂಹಲಕಾರಿಯಾಗಿದೆ. ಆದರೆ ಮತದಾರರು ಮಾತ್ರ ಜಾಗೃತರಾಗಿ, ತಮ್ಮ ಮತವನ್ನು ಹಣ, ಹೆಂಡ ಮುಂತಾದ ಆಮಿಷಗಳಿಗೆ ಮಾರಿಕೊಳ್ಳದೇ ತಮ್ಮ ಆತ್ಮಸಾಕ್ಷಿ ಒಪ್ಪುವ ಅಭ್ಯರ್ಥಿಯ ಪರ ಚಲಾಯಿಸಿ, ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಕೆಬಿಜೆಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಸಿದ್ದರಾಮಯ್ಯನವರು ವರುಣಾ ಕ್ಷೇತ್ರಕ್ಕೆ ಬರುತ್ತಿದ್ದಾರೆ ದಾರಿ ಬಿಡಿ...

ಭಲೇ! ಕರ್ನಾಟಕ ವಿಧಾನ ಸಭಾ ಚುನಾವಣೆ ಇದೋ ಬಂದೇ ಬಿಟ್ಟಿದೆ. ಚುನಾವಣಾ ಕಣಕ್ಕಿಳಿಯುವ ಎಲ್ಲಾ ಹಿರಿಯ, ಕಿರಿಯ ನಾಯಕರು ಅವರವರ ರಾಜಕೀಯ ಪಕ್ಷದಿಂದ ಟಿಕೆಟ್ ಆಕಾಂಕ್ಷಿಗಳಾಗಿ ಪೈಪೋಟಿಗಿಳಿದಿದ್ದಾರೆ. ಇರುವ 224 ಸ್ಥಾನಗಳಿಗೆ ಪ್ರಮುಖ ಮೂರು ರಾಜಕೀಯ ಪಕ್ಷಗಳು, ಅಂದರೆ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿ(ಎಸ್) ಸೆಣಸಾಡ ಬೇಕಾಗುತ್ತದೆ. ಇವುಗಳ ಜೊತೆಗೆ ಇನ್ನಿತರೆ ಪಕ್ಷಗಳ ಅಭ್ಯರ್ಥಿಗಳು, ಪಕ್ಷೇತರರೂ ಇದ್ದಾರೆ ಅನ್ನಿ. ಇದರಲ್ಲಿ ಎಲ್ಲಾ ಅಭ್ಯರ್ಥಿಗಳ ಬಗ್ಗೆ ವಿಶ್ಲೇಷಣೆ ಮಾಡಿ ಬರೆಯಲು ಸಾಧ್ಯವಿಲ್ಲ, ಅದರ ಅಗತ್ಯವೂ ಇಲ್ಲ.

ಆದರೆ ಕೆಲವು ಅಭ್ಯರ್ಥಿಗಳು ರಾಜಕೀಯ ಸಾಧನೆಯ ಮೂಲಕ ವಿಶೇಷ ವರ್ಚಸ್ಸು, ವ್ಯಕ್ತಿತ್ವ ಹೊಂದಿದಂತಹವರು. ಹಿರಿಯ ನಾಯಕರು, ರಾಜಕೀಯ ಮುತ್ಸದ್ಧಿಗಳು, ಅಸಾಮಾನ್ಯರು. ಇಡೀ ರಾಜ್ಯದಲ್ಲಿ ನಾಯಕರೆಂದು ಗುರುತಿಸಿಕೊಂಡವರು ಕೂಡ. ಇಂತಹವರು ಚುನಾವಣಾ ಕಣಕ್ಕಿಳಿದರೆ ಅವರ ಬಗ್ಗೆ ಇಡೀ ರಾಜ್ಯದ ಜನರಿಗೆ ಕುತೂಹಲವಿರುತ್ತದೆ. ಯಾರವನು? ಎಂದು ಕೇಳುವುದೇ ಇಲ್ಲ. ಆದರೆ ಅವನೇಕೆ? ಎಂದು ಕೇಳಬಹುದು. ಒಬ್ಬ ವ್ಯಕ್ತಿ ರಾಜಕೀಯದಲ್ಲಿ ಯಶಸ್ಸು ಕಂಡು, ಯಶಸ್ವಿ ರಾಜಕಾರಣಿಯಾದರೆ ಆ ಯಶಸ್ಸು ಅವರಿಗೆ ಅಭಿಮಾನಿಗಳನ್ನಷ್ಟೇ ಅಲ್ಲ, ಶತ್ರುಗಳನ್ನು ಸಹ ತಂದುಕೊಡುತ್ತದೆ. ಆ ಕಾರಣಕ್ಕಾಗಿಯೇ ಎಲ್ಲರಿಗೂ ನಮ್ಮ ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ, ಹಾಲಿ ವಿಧಾನಸಭೆಯ ಪ್ರತಿಪಕ್ಷದ ನಾಯಕ **ಸಿದ್ದರಾಮಯ್ಯ**ನವರ ಸ್ಪರ್ಧೆಯ ಬಗ್ಗೆ ತುಂಬಾ ಕುತೂಹಲ ಹಾಗೂ ನಿರೀಕ್ಷೆ.

ಸಿದ್ದರಾಮಯ್ಯನವರು ಚುನಾವಣಾ ಚತುರ ಎಂಬುದರಲ್ಲಿ ಎರಡು ಮಾತಿಲ್ಲ. ಅವರು ರಾಜಕೀಯದಲ್ಲಿ ಮೊದಲಿಗೆ ಬಿದ್ದು ನಂತರ ಎದ್ದು, ನಡೆದು, ಓಡಾಡಿ, ಪಟ್ಟಿಗೆ ಪ್ರತಿಪಟ್ಟು ಹಾಕಿ ಎದುರಾಳಿಗಳನ್ನು ಮಣಿಸಿ, ಗೆದ್ದಂತಹ ವ್ಯಕ್ತಿಯಾಗಿದ್ದಾರೆ. ರಾಜಕೀಯ ಅದಾಗಿಯೇ ಅವರನ್ನು ಅರಸಿಕೊಂಡು ಬಂತು ಎಂದು ಅವರು ಒಂದು ಕಡೇ ಹೇಳಿಕೊಂಡಿದ್ದನ್ನು ಕೇಳಿದ್ದೇನೆ. ಒಬ್ಬ ಪತ್ರಕರ್ತನಾಗಿ ಅವರ ರಾಜಕೀಯ ಬೆಳವಣಿಗೆಯನ್ನು ನಾನು ಅವರು ರಾಜಕೀಯಕ್ಕೆ ಕಾಲಿಟ್ಟ ದಿನದಿಂದಲೇ ನೋಡಿದ್ದೇನೆ. 1980ರ ಜನತಾದಳದ ಆರಂಭಿಕ ದಿನಗಳಲ್ಲಿ ನಮ್ಮಲ್ಲಿ ಉಪ ಸಂಪಾದಕರಾಗಿದ್ದ ಶಿವಣ್ಣ ಎಂಬುವರು ಸಿದ್ದರಾಮಯ್ಯನವರು ಒಬ್ಬ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕಿಳಿದಾಗ ಅವರ ರಾಜ್ಯ ರಾಜಕೀಯದ ಮೊದಲ ಹೆಜ್ಜೆಗೆ ತಾನೂ ಹೆಜ್ಜೆ ಹಾಕಿದ್ದಾರೆ. ಅದು ಸಮಾಜವಾದಿಗಳ ಸಮೂಹ. ಹಾಗೆಯೇ ಕಾಂಗ್ರೆಸ್ ವಿರೋಧಿ.



ಸಿದ್ದರಾಮಯ್ಯ

ಕಾಲ ಕೂಡಿ ಬಂದರೆ ಲೇಸಿನ ಮೇಲೆ ಲೇಸು ಎಂಬಂತೆ ನಂತರದ ವರ್ಷಗಳಲ್ಲಿ ಅವರು ರಾಜಕೀಯದಲ್ಲಿ ತೆಗೆದುಕೊಂಡ ನಿರ್ಣಯವೆಲ್ಲವೂ ಬುದ್ಧಿವಂತಿಕೆಯಿಂದಿದ್ದು, ಸಮಯೋಚಿತ ವಾಗಿಯೂ ಇದ್ದು ಅವರಿಗೆ ರಾಜ್ಯದ ಮುಖ್ಯಮಂತ್ರಿಯಾಗುವ ಮಟ್ಟಕ್ಕೆ ಜಯವನ್ನು ತಂದುಕೊಟ್ಟಿದೆ.


ಈಗ ಅವರು ತಮ್ಮ ಸ್ಪರ್ಧಾ ಕ್ಷೇತ್ರದ ಬಗ್ಗೆ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿ ಹಾಕಿಕೊಂಡ ಹಾಗೆ ಕಾಣುತ್ತಿದೆ. ವರುಣಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ಅವರ ಮಗ ಡಾ.ಯತೀಂದ್ರ ಅವರು ತಮ್ಮ ಕ್ಷೇತ್ರವನ್ನು ಬಿಟ್ಟುಕೊಟ್ಟರೂ, ಅವರೇಕೆ ಇನ್ನೊಂದು ಕ್ಷೇತ್ರದಿಂದಲೂ ಕಣಕ್ಕಿಳಿಯಲು ಯೋಚಿಸುತ್ತಿದ್ದಾರೆ? ಮಗ ಗೆದ್ದ ಕ್ಷೇತ್ರದಿಂದ ತಂದೆ ಗೆಲ್ಲುವುದು ಅಸಾಧ್ಯವಾ? ಈ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದರೂ, ಮೂಲ ಪ್ರಶ್ನೆ ಏನೆಂದರೆ: ಪ್ರತಿಪಕ್ಷದ ನಾಯಕ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ವರುಣಾದಲ್ಲಿ ಹಾಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ, ಮಾಜಿ ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪನವರ ಮಗ ಬಿ.ವೈ. ವಿಜಯೇಂದ್ರ ಕಣಕ್ಕಿಳಿದರೆ ಏನಾಗಬಹುದು?

ರಾಜ್ಯದ ಚುನಾವಣಾ ಫಲಿತಾಂಶ ಏನೇ ಇರಲಿ, ಬಿಜೆಪಿಗೆ ಸಿದ್ದರಾಮಯ್ಯನವರನ್ನು ಸೋಲಿಸುವುದು ಕಾಂಗ್ರೆಸ್ ಅನ್ನು ಸೋಲಿಸಿದಷ್ಟೇ ಅವಶ್ಯವಾಗಿದೆ. ಏಕೆಂದರೆ ಕಾಂಗ್ರೆಸ್‌ಗೆ ಸರಳ ಬಹುಮತ ಬಂದರೂ ಸಿದ್ದರಾಮಯ್ಯನಂತಹ ನಾಯಕರಿಲ್ಲದೆ ಅದು ಅಧಿಕಾರ ಹಿಡಿಯುವುದು, ಅದನ್ನು ಉಳಿಸಿಕೊಳ್ಳುವುದು ಕಷ್ಟವಾಗಬಹುದು. ಹೇಗೆ, 2019ರಲ್ಲಿ ಬಿಜೆಪಿ ಅಪರೇಷನ್ ಕಮಲದ ದಾರಿ ಹಿಡಿದು ಅಧಿಕಾರ ಹಿಡಿದ ಹಾಗೆ, ಪುನಃ ಅಡ್ಡದಾರಿಯ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿಯಬಹುದು ಎಂಬ ಆಶಯ ಬಿಜೆಪಿಯವರಲ್ಲಿ ಇರಬಹುದೇನೋ.



ಈ ಕಾರಣಕ್ಕಾಗಿಯೋ ಏನೋ ಬಿಜೆಪಿ ಸಿದ್ದರಾಮಯ್ಯನವರನ್ನು ಎದುರಿಸುವ ತಾಕತ್ತಿರುವ ಅಭ್ಯರ್ಥಿಯನ್ನು ಇಲ್ಲೆಲ್ಲೂ ಕಾಣದೆ, ಶಿಕಾರಿಪುರದ ಬಿ.ವೈ. ವಿಜಯೇಂದ್ರರನ್ನು ವರುಣಾದಲ್ಲಿ ಕಣಕ್ಕಿಳಿಸಲು ಯೋಚಿಸುತ್ತಿದೆ ಎಂದು ಮಾಧ್ಯಮಗಳಲ್ಲಿ ವರದಿ ಆಗಿರುವುದನ್ನು ಓದಿದ್ದೆ, ನೋಡಿದ್ದೆ. ಆದರೆ ಬದಲಾದ ಬಿಜೆಪಿ ರಾಜಕೀಯ ಬೆಳವಣಿಗೆಯಲ್ಲಿ ವಿಜಯೇಂದ್ರ ಅವರು ವರುಣಾದಲ್ಲಿ ಕಣಕ್ಕಿಳಿಯಲು ಒಪ್ಪುತ್ತಾರಾ? ಅವರ ತಂದೆ ಯಡಿಯೂರಪ್ಪನವರು ಒಪ್ಪುತ್ತಾರಾ? ಹೇಳಿ–ಕೇಳಿ ಶಿಕಾರಿಪುರ ಯಡಿಯೂರಪ್ಪನವರ ಕೈವಶದಲ್ಲಿರುವ ಕ್ಷೇತ್ರ (pocket borough). ಇಲ್ಲಿ ವರುಣಾದಲ್ಲಿ ಹೇಗೆ ಮಗ ತಂದೆಗೆ ಕ್ಷೇತ್ರ ಬಿಟ್ಟುಕೊಟ್ಟನೋ (ಕೊಡುತ್ತಾನೋ) ಅದೇ ರೀತಿ ಅಲ್ಲಿ ಶಿಕಾರಿಪುರದಲ್ಲಿ ತಂದೆ ಮಗನಿಗೆ ಕ್ಷೇತ್ರವನ್ನು ಬಿಟ್ಟು ಕೊಟ್ಟಿದ್ದಾರೆ (ಕೊಡುತ್ತಾರೆ).

ಒಂದು ವರದಿಯ ಪ್ರಕಾರ ವರುಣಾದಲ್ಲಿರುವ 70 ಸಾವಿರಕ್ಕೂ ಹೆಚ್ಚು ಸಂಖ್ಯೆಯ ವೀರಶೈವ ಲಿಂಗಾಯತ ಮತಗಳ ಜೊತೆಗೆ ಯುವ ಮತದಾರರು (ಏಕೆಂದರೆ ವಿಜಯೇಂದ್ರ ಅವರೂ ಕೂಡ ಯುವಕರು) ಹಾಗೂ ಇದರೊಂದಿಗೆ ಜೆಡಿಎಸ್‌ನ ಅಭ್ಯರ್ಥಿ ಸಿದ್ದರಾಮಯ್ಯನವರ ಮತಗಳಿಗೆ ಕೈ ಹಾಕಿದರೆ, ಸಿದ್ದರಾಮಯ್ಯನವರನ್ನು ಸೋಲಿಸುವುದು ಸಾಧ್ಯ ಎನ್ನುವುದು ಬಿಜೆಪಿ ಹೈಕಮಾಂಡಿನ ಲೆಕ್ಕಾಚಾರ. ಆದರೆ ಇಂತಹ ಲೆಕ್ಕಾಚಾರ ತಲೆಕೆಳಗಾಗಲೂಬಹುದಲ್ಲವೇ?



ಬಿ.ವೈ.ವಿಜಯೇಂದ್ರ

ಕಳೆದ ಬಾರಿ, 2018ರಲ್ಲಿ ವಿಜಯೇಂದ್ರ ವರುಣಾದಲ್ಲಿ ಸ್ಪರ್ಧೆಗೆ ಪೂರ್ವ ಸಿದ್ಧತೆ ನಡೆಸಿದ್ದರು. ನಾನೂ ಕೂಡ ಅವರು ಅನೇಕ ಗ್ರಾಮಗಳಿಗೆ ಭೇಟಿ ಮಾಡಿ, ಸಭೆಗಳ ನಡೆಸಿದ್ದನ್ನು ನೋಡಿದ್ದೇನೆ. ಜನರ ಸ್ಪಂದನೆ ಉತ್ಸಾಹದಾಯಕವಾಗಿತ್ತು. ಅವರು ನಾಮಪತ್ರ ಸಲ್ಲಿಸುವ ದಿನ ನಂಜನಗೂಡಿನಲ್ಲಿ ಬೃಹತ್ ಬಹಿರಂಗ ಸಭೆ ಕರೆಯಲಾಗಿತ್ತು. ಯಡಿಯೂರಪ್ಪನವರೇ ಸ್ವತಃ ಬಂದು ಅವರನ್ನು ಅಭ್ಯರ್ಥಿಯೆಂದು ಇನ್ನೇನು ಘೋಷಿಸಬೇಕಿತ್ತು. ಆದರೆ ಬಿಜೆಪಿ ಹೈಕಮಾಂಡ್ ದೆಹಲಿಯಿಂದ ದೂರವಾಣಿ ಕರೆ ಮೂಲಕ ಅದನ್ನು ತಡೆದರು. ಇದಕ್ಕೆ ಕಾರಣ ಇನ್ನೂ ನಿಗೂಢವಾಗಿಯೇ ಇದೆ. ಹೌದು ಯಡಿಯೂರಪ್ಪನವರಿಗೂ, ವಿಜಯೇಂದ್ರನಿಗೂ ಅದು ಮುಖಭಂಗವೆಂದೇ ಹೇಳಬೇಕು. ಅಂದು ವಿಜಯೇಂದ್ರ ಸ್ಪರ್ಧಿಸಿದ್ದರೆ, ಬಹುಶಃ ಗೆಲ್ಲುತ್ತಿದ್ದರು. ಅವರೊಂದಿಗೆ ಬಿಜೆಪಿಗೆ ಬೇಕಿದ್ದ ಸರಳ ಬಹುಮತವೂ ಸಿಕ್ಕುತ್ತಿತ್ತೇನೋ!

ಆದರೆ ಈಗ ಬದಲಾದ ಮತದಾರರ **ಸಾಮಾಜಿಕ ಸಮೀಕರಣ** (social equation) ಹಾಗೂ **ಜಾತಿ ಸಮೀಕರಣ** (caste equation) ನೋಡಿದರೆ ಗೆಲ್ಲಬೇಕಾದರೆ ಅಲ್ಲಿರುವ ಎಲ್ಲಾ ಐದು ಪ್ರಮುಖ ಜನಾಂಗಗಳ ಮತದಾರರಿಂದ ಕೆಲವು ಶೇಕಡ ವಾರು ಮತ ಬದಲಾಗಲೇಬೇಕಿದೆ. ಈ ರೀತಿಯ ಸಂಕೀರ್ಣಮಯ ಮತದಾರರು ವರುಣಾದಲ್ಲಿದ್ದಾರೆ. ಆದುದರಿಂದ, ಎಲ್ಲಾದರೂ ಬಿಜೆಪಿ ಹೈಕಮಾಂಡ್ (ಅಮಿತ್ ಷಾ) ವಿಜಯೇಂದ್ರ ಅವರು ವರುಣಾದಲ್ಲಿ ನಿಲ್ಲಲೇಬೇಕೆಂದರೆ, ಆಗ ಅವರು ತಮಗೆ ಶಿಕಾರಿಪುರದಲ್ಲಿಯೂ ಸ್ಪರ್ಧಿಸಲು ಅವಕಾಶ ಕೊಡಬೇಕೆಂದು ಕೇಳಬಹುದು. ಹಾಗೇನಾದರೂ ಆದರೆ ವರುಣಾ ಚುನಾವಣಾ ಕ್ಷೇತ್ರ ಕುರುಕ್ಷೇತ್ರವಾಗುವುದರಲ್ಲಿ ಸಂಶಯವೇ ಇಲ್ಲ.

ಒಂದು ವೇಳೆ ವಿಜಯೇಂದ್ರ ವರುಣಾದಲ್ಲಿ ನಿಲ್ಲುವುದಿಲ್ಲ ಎಂದಾದರೂ ಇತ್ತ ಸಿದ್ದರಾಮಯ್ಯನವರ ಗೆಲುವಿನ ದಾರಿ ಸುಲಭವಾಗುವುದು ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಕಳೆದ ಬಾರಿ ಜೆಡಿಎಸ್‌ನ ಅಭಿಷೇಕ್ ಎಸ್. ಮನೆಗಾರ್ ಎಂಬ ಅಭ್ಯರ್ಥಿ (ಡೆಮ್ಮಿ ಅಂದರೂ) 28,123 ಮತ ಪಡೆದಿದ್ದರು. ಅದೆಲ್ಲಾ ಖಂಡಿತವಾಗಿ ಬಿಜೆಪಿ ಮತವಲ್ಲ. ಅವು ಕಾಂಗ್ರೆಸ್ ಮತಗಳು. ಈ ಬಾರಿ ಯಾರು ಜೆಡಿಎಸ್ ಅಭ್ಯರ್ಥಿ ಎಂದು ನೋಡಬೇಕು. ಬಹುಶಃ ಜೆಡಿಎಸ್ ವರುಣಾದಲ್ಲಿ ಮಾತ್ರ ಬಿಜೆಪಿಗೆ ಸಾಥ್ ಕೊಡಬಹುದು. ಏಕೆಂದರೆ ಇಬ್ಬರಿಗೂ (ಬಿಜೆಪಿ, ಜೆಡಿಎಸ್) ಸಿದ್ದರಾಮಯ್ಯನವರ ಸೋಲು ಅವಶ್ಯ. ಹಾಗಾದರೆ ಬಿಜೆಪಿ ಮತ್ತೊಬ್ಬ ಪ್ರಬಲ ಅಭ್ಯರ್ಥಿಯನ್ನು ಹುಡುಕಬೇಕಾಗುತ್ತದೆ. ಯಾರವನು? ಕಳೆದ ಬಾರಿ (2018) ಡಾ.ಯತೀಂದ್ರರ ವಿರುದ್ಧ ತೋಟದಪ್ಪ ಬಸವರಾಜು ವೀರಶೈವ ಲಿಂಗಾಯತ ಅಭ್ಯರ್ಥಿ ಸ್ಪರ್ಧಿಸಿ, ಸೋತರೂ 37,819 ಮತ ಪಡೆದಿದ್ದರು. ಆದರೆ ಕಾಂಗ್ರೆಸ್‌ನ ಡಾ. ಯತೀಂದ್ರ ಸಿದ್ದರಾಮಯ್ಯ ಅವರು 96,435 ಮತ ಪಡೆದು ಬಾರಿ ಬಹುಮತದಿಂದಲೇ ಗೆದ್ದಿದ್ದರು.

ಮುಂದೇನು? ದಾರಿ ಬಿಡಿ. ನಮ್ಮ ಸಿದ್ದರಾಮಯ್ಯನವರು ಬರುತ್ತಿದ್ದಾರೆ ಎನ್ನಬಹುದೇ!? ಗೊತ್ತಿಲ್ಲ. ನನಗೆ ಕೇಳಿ ಬಂದ ಹಾಗೆ ಬಿಜೆಪಿಯಲ್ಲಿ ಈಗಾಗಲೇ ಆರು ಮಂದಿ ಆಕಾಂಕ್ಷಿಗಳು ಕಣಕ್ಕಿಳಿಯಲು ಸಿದ್ಧರಿದ್ದಾರೆ. ತೋಟದಪ್ಪ ಬಸವರಾಜು ಅವರನ್ನು ಸೇರಿಸಿ. ಆದರೆ ಇವರಲ್ಲಿ ವೀರಶೈವ ಲಿಂಗಾಯತ ಸಮುದಾಯಕ್ಕೆ ಸೇರಿದ ಮೈಸೂರು ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷರೂ ಆದ **ಬಿ.ಎನ್.ಸದಾನಂದ** ಅವರೂ ಒಬ್ಬರು. ಇವರು ಸಹಕಾರಿ ಕ್ಷೇತ್ರ ಸೇರಿದಂತೆ ಬೇರೆ ಬೇರೆ ಅನೇಕ ಸಂಘ ಸಂಸ್ಥೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರೂ ಕೂಡ ಓರ್ವ ಮುಂಚೂಣಿಯಲ್ಲಿರುವ ಆಕಾಂಕ್ಷಿ. ಮುಂದಿನ ಬೆಳವಣಿಗೆಯನ್ನು ಕಾದು ನೋಡೋಣ.

Email: voice@starofmysore.com

* * *

ಅಹಮದಾಬಾದ್‌ನಲ್ಲಿ ಐಪಿಎಲ್‌ಗೆ ವರ್ಣರಂಜಿತ ಚಾಲನೆ

ಉದ್ಘಾಟನಾ ಪಂದ್ಯದಲ್ಲಿ ಸಿಎಸ್‌ಕೆ ಮಣಿಸಿ ಗುಜರಾತ್ ಶುಭಾರಂಭ

▶ ಕ್ರೀಡಾಭಿಮಾನಿಗಳ ರಂಜಿಸಿದ ಉದ್ಘಾಟನಾ ಸಮಾರಂಭ ▶ ರಶೀದ್ ಖಾನ್ ಪಂದ್ಯಶ್ರೇಷ್ಠ



ಅಹಮದಾಬಾದ್, ಮಾ.31– ಶುಭ್‌ಮನ್ ಗಿಲ್ ಅವರ ಭರ್ಜರಿ ಅರ್ಧ ಶತಕ ಹಾಗೂ ಇನ್ನಿಂಗ್ಸ್ ಅಂತ್ಯದಲ್ಲಿ ರಶೀದ್ ಖಾನ್ ರಾಹುಲ್ ತೆವಾಟಿಯಾ ಅವರ ಬಿರುಸಿನ ಆಟದ ನೆರವಿನಿಂದ ಗುಜರಾತ್ ಟೈಟಾನ್ಸ್ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 5 ವಿಕೆಟ್‌ಗಳ ಭರ್ಜರಿ ಅಮೋಘ ಜಯ ಸಾಧಿಸಿದೆ.

ಆ ಮೂಲಕ ಗುಜರಾತ್ ಟೈಟಾನ್ಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರೇ, ಚೆನ್ನೈ ಸೂಪರ್ ಕಿಂಗ್ಸ್ ಸೋಲಿನೊಂದಿಗೆ ಪ್ರಸಕ್ತ ಸಾಲಿನ ಐಪಿಎಲ್ ಟೂರ್ನಿ ಆರಂಭಿಸಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಉದ್ಘಾಟನಾ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 178 ರನ್ ಗಳಿಸಿತು. ತಂಡದ ಮೊತ್ತ 70 ರನ್ ಆಗುವಷ್ಟರಲ್ಲಿ ಡಿವೋನ್ ಕಾನ್ವೆ 1, ಮೊಯಿನ್ ಅಲಿ 23, ಬೆನ್ ಸ್ಟೋಕ್ಸ್ 7 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆದರೆ ಮತ್ತೊಂದೆಡೆ ಬಿರುಸಿನ ಬ್ಯಾಟಿಂಗ್ ಮಾಡಿದ ಋತುರಾಜ್ ಗಾಯಕ್ವಾಡ್ ಕೇವಲ 23 ಎಸೆತಗಳಲ್ಲಿ ಅರ್ಧ ಶತಕ ಬಾರಿಸಿ ಸಂಭ್ರಮಿಸಿದರು. ಅಲ್ಲದೇ 50 ಎಸೆತಗಳಲ್ಲಿ 9 ಸಿಕ್ಸರ್, 4 ಬೌಂಡರಿ ಒಳಗೊಂಡ 92 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಅಂಬಟಿ ರಾಯುಡು 12, ಶಿವಂ ದುಬೆ 19, ನಾಯಕ ಧೋನಿ 14 ರನ್ ಗಳಿಸಿದರು. ಗುಜರಾತ್ ಟೈಟಾನ್ಸ್ ಪರ ಮೊಹಮ್ಮದ್ ಶಮಿ, ರಶೀದ್ ಖಾನ್, ಅಲ್ಜರಿ ಜೋಸೆಫ್ ತಲಾ 2 ವಿಕೆಟ್ ಪಡೆದರೆ, ಜೋಶ್ ಲಿಟಲ್ 1 ವಿಕೆಟ್ ಕಿತ್ತರು.

179 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಜರಾತ್ ಟೈಟಾನ್ಸ್ ಉತ್ತಮ ಆರಂಭ ಪಡೆಯಿತಾದರೂ ಆರಂಭಿಕ ವೃದ್ಧಿಮಾನ್ ಸಹ 25 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಒಂದಾದ ಶುಭ್‌ಮನ್ ಗಿಲ್ ಮತ್ತು ಸಾಯಿ ಸುದರ್ಶನ್ 2ನೇ ವಿಕೆಟ್‌ಗೆ 53 ರನ್ ಜೊತೆಯಾಟವಾಡಿ ಚೇತರಿಕೆ ನೀಡಿದರು. ಆದರೆ 22 ರನ್ ಗಳಿಸಿದ್ದ ಸಾಯಿ ಸುದ ರ್ಶನ್ ನಿರ್ಗಮಿಸಿದರು. ಬಳಿಕ ಬಂದ ನಾಯಕ ಹಾರ್ದಿಕ್ ಪಾಂಡ್ಯ 8 ರನ್ ಗಳಿಸಲಷ್ಟೇ ಶಕ್ತರಾದರು. ಅಂತಿಮವಾಗಿ ದಿಟ್ಟ ಆಟವಾಡಿದ ಗಿಲ್ 36 ಎಸೆತದಲ್ಲಿ 6 ಬೌಂಡರಿ ಹಾಗೂ 3 ಸಿಕ್ಸರ್ ಒಳ ಗೊಂಡ 63 ರನ್ ಸಿಡಿಸಿ ಔಟಾದರು. ಉಳಿ ದಂತೆ ವಿಜಯ ಶಂಕರ್ 27 ಗಳಿಸಿದರು. ಕೊನೆಯ 2 ಓವರ್‌ಗಳಲ್ಲಿ 25 ರನ್ ಬೇಕಿದ್ದಾಗ ರಾಹುಲ್ ತೆವಾಟಿಯಾ (15), ರಶೀದ್ ಖಾನ್(10) ಭರ್ಜರಿ ಸಿಕ್ಸರ್, ಬೌಂಡರಿ ಸಿಡಿಸಿ ತಂಡದ ಗೆಲುವಿಗೆ ಕಾರಣರಾದರು. ಅಂತಿಮವಾಗಿ ಗುಜರಾತ್ 19.2 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 180 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಸಿಎಸ್‌ಕೆ ಪರ ರಾಜವರ್ಧನ್ ಹಂಗರಗೇಕರ್ 3, ತುಷಾರ್ ದೇಶ್ ಪಾಂಡೆ, ರವೀಂದ್ರ ಜಡೇಜಾ ತಲಾ ಒಂದೊಂದು ವಿಕೆಟ್ ಪಡೆದರು. ಗುಜರಾತ್ ಪರ ರಶೀದ್ ಖಾನ್ ಪಂದ್ಯಶೇಷ್ಠ ಪ್ರಶಸ್ತಿ ಪಡೆದರು.

ಐಪಿಎಲ್‌ಗೆ ವರ್ಣರಂಜಿತ ಚಾಲನೆ: ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ಪ್ರಸಕ್ತ ಸಾಲಿನ 16ನೇ ಆವೃತಿಯ ಐಪಿಎಲ್‌ಗೆ ವರ್ಣರಂಜಿತ ಚಾಲನೆ ದೊರೆ ಯಿತು. ಉದ್ಘಾಟನಾ ಸಮಾರಂಭ'ದಲ್ಲಿ ಬಾಲಿವುಡ್ ಗಾಯಕ ಅರ್ಜಿತ್ ಸಿಂಗ್ ತಮ್ಮ ಹಾಡುಗಳ ಮೂಲಕ ಅಭಿಮಾನಿಗಳನ್ನು ರಂಜಿಸಿದರು. ಬಳಿಕ ದಕ್ಷಿಣ ಭಾರತದ ಪ್ರಖ್ಯಾತ ನಟಿಯರಾದ ತಮನ್ನಾ ಭಾಟಿಯಾ ಹಾಗೂ ರಶ್ಮಿಕ ಮಂದಣ್ಣ ಅವರು ತಮ್ಮ ನೃತ್ಯದ ಮೂಲಕ ನೆರೆದಿದ್ದ ಲಕ್ಷಾಂತರ ಅಭಿಮಾನಿಗಳನ್ನು ರಂಜಿಸಿದರು. ಸಾಂಸ್ಕೃತಿಕ ಕಾರ್ಯಕ್ರಮ ಮುಗಿದ ಬಳಿಕ, ಉದ್ಘಾಟನಾ ಪಂದ್ಯದಲ್ಲಿ ಸೆಣಸಲಿರುವ ಚೆನ್ನೈ ಹಾಗೂ ಗುಜರಾತ್ ತಂಡಗಳ ನಾಯಕರು ವೇದಿಕೆಗೆ ಆಗಮಿಸಿ ದರು. ಈ ವೇಳೆ ವೇದಿಕೆ ಮೇಲೆ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ, ಕಾರ್ಯದರ್ಶಿ ಜಯ ಶಾ, ಐಪಿಎಲ್ ಮುಖ್ಯಸ್ಥ ಅರುಣ್ ಧುಮಾಲ್ ಉಪಸ್ಥಿತರಿದ್ದರು.



ಇಂದಿನ ಪಂದ್ಯ

ಪಂಜಾಬ್ ಕಿಂಗ್ಸ್ V/s ಕೋಲ್ಕತ್ತಾ ನೈಟ್ ರೈಡರ್ಸ್
ಮಧ್ಯಾಹ್ನ: 3.30ಕ್ಕೆ, **ಸ್ಥಳ:** ಪಿಸಿಎ ಕ್ರೀಡಾಂಗಣ ಮೊಹಾಲಿ.

ಲಕ್ನೋ ಸೂಪರ್ ಜೈಂಟ್ಸ್ V/s ಡೆಲ್ಲಿ ಕ್ಯಾಪಿಟಲ್ಸ್
ಸಂಜೆ: 7.30ಕ್ಕೆ, **ಸ್ಥಳ:** ಲಕ್ನೋ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ವೈರಮುಡಿ ವೈಭವ



ಇಂದು (ಶನಿವಾರ) ಮೇಲುಕೋಟೆ ಶ್ರೀ ಚೆಲುವನಾರಾಯಣ ಸ್ವಾಮಿಯ ವೈರಮುಡಿ ಬ್ರಹ್ಮೋತ್ಸವ ನಿಮಿತ್ತ ಈ ಲೇಖನ



ಕರ್ನಾಟಕದ ಸಾಂಸ್ಕೃತಿಕ ಮತ್ತು ಧಾರ್ಮಿಕ ವೈಭವಕ್ಕೆ ವಿಶಿಷ್ಟಾದ್ವೈತ ಸಿದ್ಧಾಂತವೂ ಸಹ ವಿಶಿಷ್ಟವಾದ ಕೊಡುಗೆಯನ್ನು ಕೊಟ್ಟಿದೆ. ಪರಮಾಚಾರ್ಯರಾದ ಭಗವದ್ ಶ್ರೀರಾಮಾನುಜಾಚಾರ್ಯರು ಕ್ರಿ.ಶ. 1017ರಲ್ಲಿ ತಮಿಳುನಾಡಿನಲ್ಲಿ ಜನಿಸಿ ಅದ್ವೈತ ಮತ ವಿಸ್ತಾರಕರಾಗಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುತ್ತಾ ಕ್ರಿ.ಶ. 1096 ರಲ್ಲಿ ಕನ್ನಡನಾಡಿಗೆ ಆಗಮಿಸಿ ಜನರ ಮನಸ್ಸನ್ನು ತಮ್ಮೆಡೆಗೆ ಸೆಳೆದುಕೊಂಡು ಸನಾತನ ವೈದಿಕ ಧರ್ಮವನ್ನು ಪುನಃ ಪ್ರತಿಷ್ಠಾಪಿಸಿದರು. ಆಚಾರ್ಯ ರಾಮಾನುಜರ ಸಿದ್ಧಾಂತಕ್ಕೆ ಹರಿದಾಸ ಶ್ರೇಷ್ಠರಾದ ಆಳ್ವಾರ್‌ರವರುಗಳ ಭಕ್ತಿ ರೂಪಾಪನ್ನವಾದ ಹಾಡುಗಳೇ ಭದ್ರಬುನಾದಿಯಾಗಿದೆ. ವಿಶಿಷ್ಟಾದ್ವೈತಿಗಳಿಗೆ ಉಭಯ ವೇದಾಂತ ಪ್ರವರ್ತಕರು ಎಂಬ ಬಿರುದುಂಟು. ಇವರ ಮತ್ತೊಂದು ವಿಶಿಷ್ಟವೆಂದರೆ ಉಪನಿಷತ್‌ಗಳು, ಬ್ರಹ್ಮಸೂತ್ರ, ಭಗವದ್ಗೀತಾದಿ ಪ್ರಧಾನ ಗ್ರಂಥಗಳ ಜೊತೆಗೆ ಅದಕ್ಕೆ ಸರಿಸಮಾನವಾದ ಪ್ರಾಧಾನ್ಯ, ಪ್ರಾಶಸ್ತ್ಯಗಳನ್ನು ಆಳ್ವಾರ್‌ರವರುಗಳು ತಮಿಳು ಭಾಷೆಯಲ್ಲಿ ರಚಿತವಾದ ಪಾಶುರಗಳಿಗೂ ಕೊಟ್ಟು ಪುರಸ್ಕರಿಸಿದ್ದಾರೆ. ಶ್ರೀ ರಾಮಾನುಜರು ಕಾವೇರಿ ನದಿಯ ಜಾಡನ್ನೇ ಹಿಡಿದು ಕರ್ನಾಟಕಕ್ಕೆ ಸತ್ಯಮಂಗಲದ ಮೂಲಕ ಪ್ರವೇಶಿಸಿದರು. ಅಲ್ಲಿಂದ ಒಳದಾರಿಯಲ್ಲಿ ಕಾವೇರಿ ತೀರದ ರಾಮನಾಥಪುರಕ್ಕೆ ಬಂದು ಅಲ್ಲಿಂದ ಮಿರ್ಲೆ, ಸಾಲಿಗ್ರಾಮಗಳ ಮೂಲಕ ಮೇಲುಕೋಟೆಯ ಮಾರ್ಗದಲ್ಲಿದ್ದ ತೊಂಡನೂರಿಗೆ ಆಗಮಿಸಿ ನೆಲೆಸಿದರು. ಇದು ಹೊಯಿಸಳ ರಾಜರ ಉತ್ತರ ಗಡಿಯ ರಾಜಧಾನಿಯಾಗಿತ್ತು. ಅಲ್ಲಿ ಅವರು ಜೈನ ಧರ್ಮೀಯನಾದ ರಾಜ ಬಿಟ್ಟಿದೇವನನ್ನು ಸಂಧಿಸಿ, ಆತನ ಮಗಳ ಮನೋವ್ಯಾಧಿಯನ್ನು ಪರಿಹರಿಸಿ ಆತನನ್ನು ಶಿಷ್ಯನನ್ನಾಗಿ ಪರಿಗ್ರಹಿಸಿ ವಿಷ್ಣುವರ್ಧನ ಎಂಬ ನಾಮಾಂಕಿತವನ್ನು ಅನುಗ್ರಹಿಸಿದರು. ಸಮರ್ಥನಾದ ಈ ಅರಸನ ನೆರವು ಶ್ರೀ ರಾಮಾನುಜರಿಗೆ ಅಯಾಚಿತವಾಗಿ ದೊರೆಯಿತು.

ರಾಜ ವಿಷ್ಣುವರ್ಧನನು ಶ್ರೀ ರಾಮಾನುಜರನ್ನು ಗುರುವಾಗಿ ಸ್ವೀಕರಿಸಿ ಶ್ರೀವೈಷ್ಣವ ಧರ್ಮದ ಪ್ರಸಾರಕ್ಕೆ ಅನುಪಮ ಸಹಕಾರ ನೀಡಿದನು. ನಂತರ ಮೇಲುಕೋಟೆಗೆ ತೆರಳಿ ಸುಮಾರು ಹನ್ನೆರಡು ವರ್ಷಗಳ ಕಾಲ ವಾಸ್ತವ್ಯ ಮಾಡಿ ಅಲ್ಲಿ ಹುತ್ತದಲ್ಲಿದ್ದ ಶ್ರೀಕೃಷ್ಣನಿಂದ ಪೂಜಿಸಲ್ಪಡುತ್ತಿದ್ದ ಯದುಗಿರಿ ಶ್ರೀ ತಿರುನಾರಾಯಣಸ್ವಾಮಿಯನ್ನು ಪುನರ್ವಸು ನಕ್ಷತ್ರದಂದು ಪುನಃ ಲೋಕಕ್ಕೆ ಸಮರ್ಪಿಸಿ ಸ್ಥಳೀಯರ ಸಹಾಯದಿಂದ ದೇವಸ್ಥಾನವನ್ನು ನಿರ್ಮಿಸಿದರು. ಅಂದಿನಿಂದ ಶ್ರೀವೈಷ್ಣವರಿಗೆ ಮೇಲುಕೋಟೆಯು (ಯದುಶೈಲ) ದಕ್ಷಿಣ ಭಾರತದ ನಾಲ್ಕು ಶ್ರೀವೈಷ್ಣವ ಕ್ಷೇತ್ರಗಳಾದ ಶ್ರೀರಂಗ, ತಿರುಪತಿ ಮತ್ತು ಕಾಂಚೀಪುರದ ಜೊತೆಗೆ ನಿತ್ಯ ಸ್ಮರಣೀಯವಾದ ದಿವ್ಯ ಕ್ಷೇತ್ರವಾಗಿ ಪರಿಣಮಿಸಿದೆ. ಭಗವದ್ ಶ್ರೀ ರಾಮಾನುಜರು ಹೊಯಿಸಳರ ರಾಜ್ಯದಲ್ಲಿ ಸುಮಾರು ಇಪ್ಪತ್ತು ವರ್ಷಗಳ ಕಾಲ ಸಂಚರಿಸಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು.

ಶ್ರೀರಂಗವು ಅನ್ಯಧರ್ಮೀಯರ ದಾಳಿಗೆ ಈಡಾಗಿದ್ದ ಕಾಲದಲ್ಲಿ ಶ್ರೀವೈಷ್ಣವ ಧರ್ಮದ ಪ್ರಮುಖ ಆಚಾರ್ಯರಾಗಿದ್ದ ಕವಿತಾರ್ಕಿಕ ಸಿಂಹರೆಂದು ಬಿರುದಾಂಕಿತರಾದ ಶ್ರೀ ವೇದಾಂತ ದೇಶಿಕರು ಕರ್ನಾಟಕಕ್ಕೆ ಬಂದು ಮೇಲುಕೋಟೆಯಲ್ಲಿ ನೆಮ್ಮದಿಯನ್ನು ಕಂಡು ಅದರ ಐಶ್ವರ್ಯ ಎಂದಿಗೂ ಕುಂದದಿರಲೆಂದು ಶಾಸನವನ್ನು ಮಾಡಿದ್ದಾರೆ. ಕನ್ನಡನಾಡಿನಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಬೆಳೆಸಿ ಪ್ರೋತ್ಸಾಹಿಸಿದ ಕೀರ್ತಿ ಹೊಯಿಸಳ ರಾಜ ವಿಷ್ಣುವರ್ಧನನಿಗೆ (1104–1141) ಸಲ್ಲುತ್ತದೆ.

ವಿಜಯನಗರ ಸಾಮ್ರಾಜ್ಯದ ಪ್ರಸಿದ್ಧ ಚಕ್ರವರ್ತಿಯೂ ಆಗಿದ್ದ ಶ್ರೀ ಕೃಷ್ಣದೇವರಾಯನು (ಕ್ರಿ.ಶ. 1509–1530) ತನ್ನ ರಾಜ್ಯದಲ್ಲಿನ ವಿದ್ವಾಂಸರಾದ ತಾತಾಚಾರ್ಯರನ್ನು ಶ್ರೀವೈಷ್ಣವ ಧರ್ಮದ ಪೀಠಾಧಿಪತಿಯಾಗಿ ಪ್ರತಿಷ್ಠಾಪಿಸಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಅಧಿಕವಾಗಿ ಪೋಷಿಸಿದನು. ವಿಜಯನಗರ ಸಾಮ್ರಾಜ್ಯದ ಶ್ರೀವೈಷ್ಣವ ಕೇಂದ್ರವಾಗಿದ್ದ ಮೇಲುಕೋಟೆಯನ್ನು ತುಂಬಾ ಅಭಿವೃದ್ಧಿಗೊಳಿಸಿದನು. ನಂತರ ಶ್ರೀವೈಷ್ಣವ ಧರ್ಮಕ್ಕೆ ಮೈಸೂರು ಸಂಸ್ಥಾನ ನೀಡಿದ ನೆರವು ಅಸಾಧಾರಣವಾದದ್ದು. ಸಾಮಂತರಾಗಿದ್ದ ರಾಜ ಒಡೆಯರ್ (ಕ್ರಿ.ಶ. 1576–1617) ರವರು ಶ್ರೀರಂಗಪಟ್ಟಣದಲ್ಲಿ ತಮ್ಮ ಸ್ವತಂತ್ರ ಸಂಸ್ಥಾನವನ್ನು ಸ್ಥಾಪಿಸಿ ತಮ್ಮ ಆಡಳಿತದಲ್ಲಿ ಮೇಲುಕೋಟೆಯಲ್ಲಿ ದೊಡ್ಡ ದೊಡ್ಡ ಮಂಟಪಗಳನ್ನು ಕಟ್ಟಿಸಿದರು. ಯದುಗಿರಿ ಶ್ರೀ ಚೆಲುವನಾರಾಯಣಸ್ವಾಮಿಗೆ ರಾಜಮುಡಿ ಹಾಗೂ ಅನರ್ಘ್ಯ ಆಭರಣಗಳನ್ನಿತ್ತು ರಾಜಮುಡಿ ಬ್ರಹ್ಮೋತ್ಸವವನ್ನು ಏರ್ಪಡಿಸಿದರು. ದೇವಾಲಯದ ನವರಂಗದ ಕಂಬವೊಂದರಲ್ಲಿ ಕೆತ್ತಿರುವ ರಾಜ ಒಡೆಯರ್ ವಿಗ್ರಹಕ್ಕೆ ಈಗಲೂ ಪ್ರತಿದಿನವೂ ರಾಜ ಮರ್ಯಾದೆ ಸಲ್ಲುತ್ತದೆ.

ರಾಜ ಪರಂಪರೆಯಿಂದ ಸತತವಾಗಿ ಪೋಷಣೆಗೊಂಡ ಶ್ರೀವೈಷ್ಣವ ಧರ್ಮವು ರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ತಮ್ಮ ಕಾಲದಲ್ಲಿ (ಕ್ರಿ.ಶ. 1799–1868) ಶ್ರೀವೈಷ್ಣವ ಕ್ಷೇತ್ರ ಮೇಲುಕೋಟೆಯನ್ನು ಹೆಚ್ಚಿನ ಅಭಿವೃದ್ಧಿಗೊಳಿಸಿದರು. ಕೃಷ್ಣರಾಜಮುಡಿ ಎಂಬ ರತ್ನ ಕಿರೀಟ, ಪಚ್ಚೆಯ ಹಾರಾದಿಗಳಲ್ಲದೆ ಅನೇಕ ಆಭರಣಗಳನ್ನು ದೇವರಿಗೆ ಸಮರ್ಪಿಸಿ ತಮ್ಮ ಜನ್ಮದಿನದ ಅಂಕಿತದಲ್ಲಿ ಕೃಷ್ಣರಾಜಮುಡಿ ಬ್ರಹ್ಮೋತ್ಸವವನ್ನು ಅಯೋಜಿಸಿದರು. ಇಂದಿಗೂ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ತಮ್ಮ ನಾಲ್ವರು ಅರಸಿಯರೊಂದಿಗೆ ದೇವಸ್ಥಾನದಲ್ಲಿ ನಿತ್ಯವೂ ಮರ್ಯಾದೆಗೊಳ್ಳುತ್ತಿದ್ದಾರೆ. ಮೈಸೂರು ಸಂಸ್ಥಾನಕ್ಕೆ ರಾಜ ಗುರುಗಳಾದ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠದ ಯತಿಗಳು ಮೇಲುಕೋಟೆಯ ಅಭಿವೃದ್ಧಿಗೂ ಸಹ ಕಾರಣರಾಗಿದ್ದಾರೆ. ಹಾಗೆಯೇ ಶ್ರೀ ರಾಮಾನುಜಾಚಾರ್ಯರಿಂದ ಸ್ಥಾಪಿತವಾದ ಶ್ರೀವೈಷ್ಣವ ಪ್ರಮುಖ ಮಠವಾದ ಯದುಗಿರಿ ಯತಿರಾಜ ಮಠಾಧಿಪತಿಗಳೂ ಎಲ್ಲೆಡೆ ಸಂಚರಿಸುತ್ತಾ ಧರ್ಮ ರಕ್ಷಣೆಯೊಂದಿಗೆ ಆಸ್ತಿಕರಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಕನ್ನಡ ನಾಡಿನ ಧಾರ್ಮಿಕ ಪುಣ್ಯ ಕ್ಷೇತ್ರದಲ್ಲಿ ಮೇಲುಕೋಟೆಯನ್ನು ಭೂವೈಕುಂಠ (ದಕ್ಷಿಣ ಬದರಿ) ಎಂದು ಪುರಾಣದಲ್ಲಿ ಹೆಸರಿಸಲಾಗಿದೆ. ಅಂತೆಯೇ ತಿರುನಾರಾಯಣಪುರಂ, ಯಾದವಾದ್ರಿ, ನಾರಾಯಣಾದ್ರಿ, ಯದುಗಿರಿ ಹೀಗೆ ಹಲವಾರು ಹೆಸರುಗಳಿಂದಲೂ ಶ್ರೀಕ್ಷೇತ್ರವು ಪ್ರಸಿದ್ಧವಾಗಿದೆ.

ವೈರಮುಡಿಯ ಹಿನ್ನಲೆ:


ದ್ವಾಪರ ಯುಗದಲ್ಲಿ ಭಕ್ತ ಪ್ರಹ್ಲಾದನ ಮಗನಾದ ವಿರೋಚನನು ಕ್ಷೀರಾಬ್ಧಿಶಾಯಿಯಾದ ಅನಿರುದ್ಧ ಭಗವಂತನ ಸೇವೆಗೆ ತಾನೂ ನಿತ್ಯಸೂರಿಗಳಂತೆ ಪ್ರವೇಶ ಮಾಡಿ ಸ್ವಾಮಿಯ ಕೈಂಕರ್ಯಗಳಿಂದ ಆನಂದಗೊಳ್ಳುತ್ತಿದ್ದನು. ಆದರೂ ಹುಟ್ಟುಬುದ್ಧಿಯು ಮರುಕಳಿಸಿ ಸಮಯ ಸಾಧಿಸಿ ಭಗವಂತನು ಶಯನಿಸುವ ಸಮಯದಲ್ಲಿ ಅವನ ಕಿರೀಟವನ್ನು ಅಪಹರಿಸಿ ಭೂಲೋಕಕ್ಕೆ ಬಂದು ಅಲ್ಲಿಂದ ಪಾತಾಳದಲ್ಲಿ ಅಡಗಿದನು. ಇದನ್ನು ತಿಳಿದ ಭಕ್ತರು ವೈನತೇಯನಿಗೆ ಹೇಳಿ ವಿರೋಚನನಿಂದ ಕಿರೀಟವನ್ನು ಮರಳಿ ತರುವಂತೆ ಪ್ರಾರ್ಥಿಸಿದರು. ಗರುಡನು ಮನೋವೇಗದಲ್ಲಿ ಪಾತಾಳಕ್ಕೆ ತೆರಳಿ ರಾಕ್ಷಸನಾದ ವಿರೋಚನನ್ನನು ಯುದ್ದದಲ್ಲಿ ಜಯಿಸಿ ಕಿರೀಟವನ್ನು ತರುತ್ತಿರುವಲ್ಲಿ ಮಧುರಾನಗರದಲ್ಲಿ (ಮಧುರೈ) ಶ್ರೀಕೃಷ್ಣನು ಗೋವುಗಳ ಜೊತೆ ಆನಂದದಿಂದ ಇರುವುದನ್ನು ಕಂಡು ಕೆಳಗಿಳಿದು ನೋಡಲು ಶ್ರೀಕೃಷ್ಣವತಾರವು ಗೋಚರಿಸಿತು. ತಾನು ತಂದ ಕಿರೀಟವನ್ನು ಇಲ್ಲಿಯೇ ಇರುವ ಶ್ರೀಕೃಷ್ಣ ರೂಪದ ನಾರಾಯಣನಿಗೆ ಅರ್ಪಿಸಲಾಗಿ ಧರಿಸಲು ಅದು ಸರಿಯಾಗಲಿಲ್ಲ. ಆಗ ಗರುಡನು ಮೇಲುಕೋಟೆಗೆ ಶ್ರೀಕೃಷ್ಣನೊಡನೆ ಹೋಗಿ ಆತನ ಆರಾಧ್ಯ ದೇವರಾದ ಶ್ರೀ ಚೆಲುವನಾರಾಯಣಸ್ವಾಮಿಗೆ ಧರಿಸಲು ಕಿರೀಟವು ಸರಿಯಾಗಿ ತಲೆಗೆ ಹೊಂದಿಕೊಂಡಿತು. ಭೂಲೋಕದ ಜನರಿಗೆ ಭಗವಂತನ ಸಂಕಲ್ಪದಿಂದ ಲಭ್ಯವಾಯಿತೆಂದು ಹೇಳಿ ಶ್ರೀ ಚೆಲುವನಾರಾಯಣ ಸ್ವಾಮಿಯನ್ನು ತನ್ನ ಹೆಗಲ ಮೇಲೆ ಹೊತ್ತು ಉತ್ಸವ ಮಾಡಿದ ಕಾರಣ ಇಂದಿಗೂ ವೈರಮುಡಿ ಉತ್ಸವ ಗರುಡವಾಹನದ ಮೇಲೆ ಜರುಗುತ್ತದೆ.

ವೈನತೇಯನು ತಂದ ಕಿರೀಟವು ವಜ್ರಗಳಿಂದ ಕೂಡಿದ್ದರಿಂದ ಇದಕ್ಕೆ ವೈರಮುಡಿ ಎಂಬ ಹೆಸರು ಶಾಶ್ವತವಾಯಿತು. ನಂತರದಲ್ಲಿ ಕಲಿಯುಗ ಪ್ರಾಪ್ತವಾಗಿ, ಮೇಲುಕೋಟೆಯಲ್ಲಿ ಮೂಲ ಮೂರ್ತಿಯಾದ ಶ್ರೀ ತಿರುನಾರಾಯಣಸ್ವಾಮಿಯವರನ್ನು ಪುನರ್ವಸು ನಕ್ಷತ್ರದಂದು ಪುನಃ ಪ್ರತಿಷ್ಠಾಪಿಸಿ, ಉತ್ಸವಮೂರ್ತಿ ಇಲ್ಲದ್ದನ್ನು ಮನಗಂಡು ಆಚಾರ್ಯ ಶ್ರೀ ರಾಮಾನುಜರು ದೆಹಲಿಯ ಬಾದಶಾನ ಅರಮನೆಯಲ್ಲಿ ಅವನ ಮಗಳ ಬಳಿ ಇದ್ದ ಶ್ರೀ ಚೆಲುವನಾರಾಯಣಸ್ವಾಮಿ ಮೂರ್ತಿಯನ್ನು ದೆಹಲಿಯಿಂದ ತಂದು ಮೇಲುಕೋಟೆಯಲ್ಲಿ ಉತ್ಸವ ಮೂರ್ತಿಯಾಗಿ ಸ್ಥಾಪಿಸಿದರು. ಈ ಶ್ರೀ ಚೆಲುವನಾರಾಯಣಸ್ವಾಮಿಗೆ ಎಲ್ಲಾ ಬಗೆಯ ಉತ್ಸವಗಳು ಜರುಗುತ್ತವೆ. ಶ್ರೀ ಚೆಲುವನಾರಾಯಣ ಸ್ವಾಮಿಗೆ ಬ್ರಹ್ಮೋತ್ಸವವನ್ನು ಪಾಲ್ಗುಣ ಮಾಸ/ಮೀನಮಾಸದಲ್ಲಿ ಒಂಬತ್ತು ದಿನಗಳ ಕಾಲ ಆಚರಿಸಲಾಗುವುದು. ಈ ನವಾನ್ವಿತ ಬ್ರಹ್ಮೋತ್ಸವದಲ್ಲಿ ನಾಲ್ಕನೇ ದಿನದಂದು ವೈರಮುಡಿ ಕೀರಿಟಧಾರಣೆಯಾಗಿ ಗರುಡವಾಹನ ರೂಢನಾಗಿ ಚೆಲುವನಾರಾಯಣ ಸ್ವಾಮಿಯು ಕಂಗೊಳಿಸುತ್ತಾನೆ.

ಈ ನಾಲ್ಕನೇ ತಿರುನಾಳ್ ಅಂದು ಕಿರೀಟಧಾರಣೆಗೆ ಐತಿಹಾಸಿಕ ಕಾರಣವೇ ತ್ರೇತಾಯುಗದಲ್ಲಿ ಶ್ರೀರಾಮನಿಗೆ ಪಟ್ಟಭಿಷೇಕಕ್ಕೆ ಗೊತ್ತು ಮಾಡಿದ ಪುಷ್ಯಾನಕ್ಷತ್ರದ ಶುಭದಿನವಾಗಿದೆ. ಅಂದು ಶ್ರೀ ಚೆಲುವನಾರಾಯಣ ವೈರಮುಡಿ, ಅರಳೆಲೆ ಪದಕ, ಮುತ್ತುರತ್ನಗಳ ಕರ್ಣಕುಂಡಲಗಳು, ಗಂಡಭೇರುಂಡದ ವಜ್ರಹಾರ, ಶಂಖ, ಚಕ್ರ, ಗದೆ ಸೇರಿದಂತೆ ಅಮೂಲ್ಯ ಆಭರಣಗಳಿಂದ ಶ್ರೀ ಚೆಲುವನಾರಾಯಣ ಸ್ವಾಮಿಯು ಅಲಂಕೃತನಾಗಿ ಗರುಡ ವಾಹನದ ಮೇಲೆ ವಿಜೃಂಭಿಸುತ್ತಾನೆ. ಇದೇ ವೈಭವದ ವೈರಮುಡಿ ಬ್ರಹ್ಮೋತ್ಸವ. ಶ್ರೀ ರಾಮಾನುಜಾಚಾರ್ಯರು ಮೇಲುಕೋಟೆ ಬಿಡುವ ಸಂದರ್ಭದಲ್ಲಿ ಭಕ್ತರ ಕೋರಿಕೆ ಮೇರೆಗೆ ತಾವು ನಡೆಸುತ್ತಿದ್ದ ಪೂಜಾಕೈಂಕರ್ಯಗಳ ಪರಿಕರಗಳಿಂದ ವಿಗ್ರಹವನ್ನು ನಿರ್ಮಿಸಿ ಆ ವಿಗ್ರಹದಲ್ಲಿ ಶ್ರೀರಾಮಾನುಜಾಚಾರ್ಯರನ್ನು ಆವಾಹನೆ ಮಾಡಿ ಭಕ್ತರಿಗೆ ಪೂಜೆ ಮಾಡಲು ಅನುಗ್ರಹಿಸಿದರು. ಅದೇ ಶ್ರೀ ರಾಮಾನುಜಾಚಾರ್ಯರ ವಿಗ್ರಹವು ಇಂದಿಗೂ ಮೇಲುಕೋಟೆಯಲ್ಲಿ ಪೂಜಿಸಲ್ಪಡುತ್ತಿದೆ. ಅಲ್ಲದೆ ಮೇಲುಕೋಟೆಯಲ್ಲಿ ಶ್ರೀ ರಾಮಾನುಜಾಚಾರ್ಯರಿಂದ ನಿರ್ಮಿಸಲ್ಪಟ್ಟ ಸುಮಾರು 45ಕ್ಕೂ ಹೆಚ್ಚು ದೇವಸ್ಥಾನಗಳು, ತೊಣ್ಣೂರು ಕೆರೆಯನ್ನು ಸೇರಿದಂತೆ 34 ಪ್ರಮುಖ ಕೊಳ ಮತ್ತು ಕೆರೆಗಳು, 20ಕ್ಕೂ ಹೆಚ್ಚಿನ ಮಂಟಪಗಳೂ ಹಾಗೂ ಹಲವಾರು ವಿವಿಧ ಮಠಗಳಿಂದ ಕೂಡಿದ್ದು ಮಂಡ್ಯ ಜಿಲ್ಲೆಯ ಪ್ರಮುಖ ಪ್ರೇಕ್ಷಣೀಯ ಸ್ಥಳವೂ ಆಗಿದೆ.

■ ನಂ ಶ್ರೀಕಂಠ ಕುಮಾರ್
ಮೊ: 9481067333

ಮೈಸೂರು ಅರಮನೆಯ ನೆರೆಮನೆಯಾಗಿರುವ ಪ್ರತಿಷ್ಠಿತ ಕೃಷ್ಣ'ರಾಜ' ಕ್ಷೇತ್ರ



ಹೊಸದಾಗಿ ನೊಂದಣಿಯಾದ ಯುವ ಮತದಾರರು **2940**

80 ವರ್ಷ ಮೇಲ್ಪಟ್ಟವರು **12174**

ಮೋಹನ್ ಕಾಯಕ

ಮೈಸೂರು, ಮಾ.31– ಮೈಸೂರು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಪ್ರಬಲ ಪೈಪೋಟಿ ನಿರೀಕ್ಷೆ ಇರುವ ಕೃಷ್ಣರಾಜ(ಕೆ.ಆರ್ ಕ್ಷೇತ್ರ) ಕ್ಷೇತ್ರದಲ್ಲಿ ಮುಂದಿನ ಐದು ವರ್ಷ ಕ್ಷೇತ್ರದ ಅಧಿಪತಿ ಯಾರಾಗಲಿದ್ದಾರೆ ಎಂಬ ಕುತೂಹಲ ಮೂಡಿದೆ.

2008ರ ಕ್ಷೇತ್ರ ಪುನರ್ ವಿಂಗಡಣೆಯ ನಂತರ ಕ್ಷೇತ್ರದ ವಿಸ್ತೀರ್ಣದ ಜೊತೆಗೆ ಮತದಾರರ ಸಂಖ್ಯೆಯೂ ಹೆಚ್ಚಾಯಿತು. ಅದರಲ್ಲಿ ಬ್ರಾಹ್ಮಣ ಮತದಾರರು ಅಧಿಕ ಸಂಖ್ಯೆಯಲ್ಲಿದ್ದರೆ, ನಂತರದ ಸ್ಥಾನದಲ್ಲಿ ದಲಿತರು, ಲಿಂಗಾಯಿತರು, ಕುರುಬರು ಹಾಗೂ ಮುಸ್ಲಿಂ ಸಮುದಾಯದ ಮತದಾರರಿದ್ದಾರೆ.

ಉತ್ತರ ಮತ್ತು ದಕ್ಷಿಣ ಕ್ಷೇತ್ರ ಎಂದಿದ್ದ ಮೈಸೂರು ನಗರದಲ್ಲಿ ಕೆ.ಆರ್ ಕ್ಷೇತ್ರ ದಕ್ಷಿಣ ಕ್ಷೇತ್ರದ ವ್ಯಾಪ್ತಿಯಲ್ಲಿತ್ತು. 1952ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಬಿ.ನಾರಾಯಣಸ್ವಾಮಿ, 1957 ಮತ್ತು 1962ರಲ್ಲಿ ಕಾಂಗ್ರೆಸ್‌ನ ಕೆ.ಎಸ್.ಸೂರ್ಯನಾರಾಯಣ ರಾವ್, 1967 ಪಕ್ಷೇತರ ಅಭ್ಯರ್ಥಿಯಾಗಿ ಸಾಹುಕಾರ್ ಚನ್ನಯ್ಯ, 1972ರಲ್ಲಿ ಕಾಂಗ್ರೆಸ್‌ನ ಡಿ.ಸೂರ್ಯನಾರಾಯಣ, 1974ರಲ್ಲಿ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ವೆಂಕಟಲಿಂಗಯ್ಯ, 1978ರಲ್ಲಿ ಜನತಾ ಪಕ್ಷದಿಂದ ಸ್ಪರ್ಧಿಸಿ ಜಯಗಳಿಸಿದ್ದ ಹೆಚ್.ಗಂಗಾಧರನ್ ನಂತರ ಬಿಜೆಪಿ ಸೇರ್ಪಡೆಯಾಗಿ 1983ರಲ್ಲಿಯೂ 2ನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದರು.

ಹಾಗೆಯೇ 1985ರಲ್ಲಿ ಜನತಾ ಪಕ್ಷದಿಂದ ವೇದಾಂತ ಹೆಮ್ಮಿಗೆ, 1989ರಲ್ಲಿ ಕಾಂಗ್ರೆಸ್‌ನ ಕೆಎನ್. ಸೋಮಸುಂದರಂ, 1994 ಮತ್ತು 1999ರಲ್ಲಿ ಬಿಜೆಪಿಯ ಎಸ್.ಎ.ರಾಮದಾಸ್, 2004ರಲ್ಲಿ ಜೆಡಿಎಸ್‌ನಿಂದ ಎಂ.ಕೆ.ಸೋಮಶೇಖರ್, 2008ರಲ್ಲಿ ಬಿಜೆಪಿಯ ಎಸ್.ಎ.ರಾಮದಾಸ್, 2013ರಲ್ಲಿ ಕಾಂಗ್ರೆಸ್‌ನಿಂದ ಎಂ.ಕೆ.ಸೋಮಶೇಖರ್ ಹಾಗೂ 2018ರಲ್ಲಿ ಮತ್ತೆ ಬಿಜೆಪಿಯಿಂದ ಎಸ್.ಎ.ರಾಮದಾಸ್ ಶಾಸಕರಾಗಿ ಆಯ್ಕೆಯಾಗಿದ್ದು, 2023ರ ವಿಧಾನಸಭಾ ಚುನಾವಣೆಯಲ್ಲಿ ಕೆ.ಆರ್.ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗುವವರ್ಯಾರು ಎಂಬ ಪ್ರಶ್ನೆಗೆ ಇನ್ನೂ ಒಂದು ತಿಂಗಳು ಕಾಯಬೇಕಾಗಿದೆ.

ಕೆ.ಆರ್ ಕ್ಷೇತ್ರದಲ್ಲಿ ಕಾಂಗ್ರೆಸ್ 7 ಬಾರಿ ಗೆದ್ದಿದ್ದರೆ, ಬಿಜೆಪಿ 5, ಜನತಾ ಪಕ್ಷ 2, ಜೆಡಿಎಸ್ ಹಾಗೂ ಪಕ್ಷೇತರ ಅಭ್ಯರ್ಥಿಗಳು ತಲಾ 1 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಬಿಜೆಪಿ ಹಾಗೂ ಕಾಂಗ್ರೆಸ್‌ನ ನಡುವೆ ನೇರ ಹಣಾಹಣಿ ನಡೆಯುವ ಕ್ಷೇತ್ರವೆಂದೇ ಕರೆಯಲ್ಪಡುವ ಕೃಷ್ಣರಾಜ ಕ್ಷೇತ್ರದಲ್ಲಿ ಇನ್ನೂ ಅಭ್ಯರ್ಥಿಗಳ ಹೆಸರು ಘೋಷಣೆಯಾಗದಿರುವುದು ಹಲವು ಚರ್ಚೆಗಳಿಗೂ ಕಾರಣವಾಗಿದೆ.

ಒಳಪಡುವ ಪ್ರದೇಶಗಳು: ಕೆ.ಆರ್ ಕ್ಷೇತ್ರ ವ್ಯಾಪ್ತಿಗೆ ವಾರ್ಡ್ ನಂ. 47, 48, 49, 50, 51, 53, 57, 59, 60, 61, 62, 63, 64, 65 ಸೇರಿ 19 ವಾರ್ಡ್‌ಗಳು ಸೇರಲಿವೆ ಅಗ್ರಹಾರ, ಲಕ್ಷ್ಮಿಪುರಂ, ಸುಣ್ಣದಕೇರಿ, ಗುಂಡೂರಾವ್ ನಗರ, ಸಿದ್ಧಾರ್ಥನಗರ, ಆಲನಹಳ್ಳಿ ಬಡಾವಣೆ, ಚಾಮುಂಡಿಪುರಂ, ಕೃಷ್ಣಮೂರ್ತಿ ಪುರಂ, ವಿದ್ಯಾರಣ್ಯಪುರಂ, ಜಯನಗರ, ಅಶೋಕಪುರಂ, ವಿಶ್ವೇಶ್ವರನಗರ, ಜೆ.ಪಿ.ನಗರ, ಶ್ರೀರಾಂಪುರ, ಅರವಿಂದನಗರ, ವಿವೇಕಾನಂದನಗರ, ರಾಮಕೃಷ್ಣನಗರ, ಕುವೆಂಪುನಗರ, ಕುರುಬಾರಹಳ್ಳಿ ಇತ್ಯಾದಿ ಪ್ರದೇಶಗಳು ಒಳಪಡುತ್ತವೆ.

ಶೇ.50 ರಿಂದ 60 ರಷ್ಟು ಮತದಾನ: ಮೈಸೂರು ನಗರ ವ್ಯಾಪ್ತಿಯ ಇತರೆ ಕ್ಷೇತ್ರಗಳಿಗೆ ಹೋಲಿಕೆ ಮಾಡಿದರೆ, ಕೆ.ಆರ್ ಕ್ಷೇತ್ರದಲ್ಲಿ ಮತದಾನ ಪ್ರಮಾಣ ಕಡಿಮೆ. ಶೇ.50 ರಿಂದ 60 ರಷ್ಟು ಮತದಾನವಾಗುತ್ತಿದ್ದು, 2018ರ ಚುನಾವಣೆಯಲ್ಲಿ 2,47,084 ಮತದಾರರ ಪೈಕಿ 1,45,196 ಮಂದಿಯಷ್ಟೇ(ಶೇ.58.76) ಮತ ಚಲಾಯಿಸಿದ್ದಾರೆ.

ಬಲಾಬಲ: ಕಳೆದ ಎರಡು(2013 ಮತ್ತು 2018) ವಿಧಾನ ಸಭಾ ಚುನಾವಣೆಯ ಬಲಾಬಲ ಗಮನಿಸಿದರೆ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ನೇರ ಪೈಪೋಟಿ ನಡೆದಿದೆ. 2013ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಅಭ್ಯರ್ಥಿ ಎಂ.ಕೆ.ಸೋಮಶೇಖರ್ 52,611 ಮತಗಳನ್ನು ಪಡೆದರೆ, ಬಿಜೆಪಿ ಅಭ್ಯರ್ಥಿ ಎಸ್.ರಾಮದಾಸ್ 46,546 ಮತಗಳನ್ನು ಪಡೆದಿದ್ದರು. ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ 6,065 ಮತಗಳ ಅಂತರದಿಂದ ಜಯಗಳಿಸಿದ್ದರು. ಅದರಂತೆ 2018ರ ಚುನಾವಣೆಯಲ್ಲಿ ಎಂ.ಕೆ.ಸೋಮಶೇಖರ್ 52,226 ಮತಗಳನ್ನು ಪಡೆದರೆ, ಎಸ್.ಎ.ರಾಮದಾಸ್ 78,573 ಮತಗಳನ್ನು ಪಡೆದು 26347 ಮತಗಳ ಅಂತರದಲ್ಲಿ ಜಯಗಳಿಸಿದ್ದರು.

ನಾನಾ ಪಕ್ಷದ ಟಿಕೆಟ್ ಆಕಾಂಕ್ಷಿಗಳು

ಬಿಜೆಪಿ
ಎಸ್.ಎ.ರಾಮದಾಸ್
ಹೆಚ್.ವಿ.ರಾಜೀವ್
ಟಿ.ಎಸ್.ಶ್ರೀವತ್ಸ

ಕಾಂಗ್ರೆಸ್
ಎಂ.ಕೆ.ಸೋಮಶೇಖರ್
ಎಂ.ಪ್ರದೀಪ್ ಕುಮಾರ್
ಎನ್.ಎಂ.ನವೀನ್ ಕುಮಾರ್

ಜೆಡಿಎಸ್
ಕೆ.ವಿ.ಮಲ್ಲೇಶ್
(ಟಿಕೆಟ್ ಘೋಷಣೆಯಾಗಿದೆ)

ವಿಕಲಚೇತನ ಮತದಾರರು **1436**

ಮತಗಟ್ಟೆ **265**

ಇದುವರೆಗೆ ಕೆ.ಆರ್.ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದವರು...

1952– ಬಿ.ನಾರಾಯಣಸ್ವಾಮಿ(ಕಾಂಗ್ರೆಸ್)
1957– ಕೆ.ಎಸ್.ಸೂರ್ಯನಾರಾಯಣ ರಾವ್(ಕಾಂಗ್ರೆಸ್)
1962– ಕೆ.ಎಸ್.ಸೂರ್ಯನಾರಾಯಣ ರಾವ್(ಕಾಂಗ್ರೆಸ್)
1967– ಸಾಹುಕಾರ್ ಚನ್ನಯ್ಯ(ಪಕ್ಷೇತ್ರರ)
1972– ಡಿ.ಸೂರ್ಯನಾರಾಯಣ(ಕಾಂಗ್ರೆಸ್)
1974– (ಉಪಚುನಾವಣೆ) ವೆಂಕಟಲಿಂಗಯ್ಯ(ಕಾಂಗ್ರೆಸ್)
1978– ಹೆಚ್.ಗಂಗಾಧರನ್(ಜನತಾ ಪಕ್ಷ)
1983– ಹೆಚ್.ಗಂಗಾಧರನ್(ಬಿಜೆಪಿ)
1985– ವೇದಾಂತ ಹೆಮ್ಮಿಗೆ(ಜನತಾ ಪಕ್ಷ)
1989– ಕೆ.ಎನ್.ಸೋಮಸುಂದರಂ(ಕಾಂಗ್ರೆಸ್)
1994– ಎಸ್.ಎ.ರಾಮದಾಸ್(ಬಿಜೆಪಿ)
1999– ಎಸ್.ಎ.ರಾಮದಾಸ್(ಬಿಜೆಪಿ)
2004– ಎಂ.ಕೆ.ಸೋಮಶೇಖರ್(ಜೆಡಿಎಸ್)
2008– ಎಸ್.ಎ.ರಾಮದಾಸ್(ಬಿಜೆಪಿ)
2013– ಎಂ.ಕೆ.ಸೋಮಶೇಖರ್(ಕಾಂಗ್ರೆಸ್)
2018– ಎಸ್.ಎ.ರಾಮದಾಸ್(ಬಿಜೆಪಿ)
2023– ?

ಕೆ.ಆರ್.ಕ್ಷೇತ್ರ(ಕ್ಷೇತ್ರದ ಸಂಖ್ಯೆ 216)ದ ಮತದಾರರು(ಮಾರ್ಚ್ 29, 2023ರವರೆಗೆ)...

ಪುರುಷರು	ಮಹಿಳೆಯರು	ಇತರೆ	ಒಟ್ಟು
1,20,910	1,26,222	25	2,47,157

ಮಾಜಿ ಕ್ರಿಕೆಟಿಗ, ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ನಾಳೆ ಜೈಲಿನಿಂದ ಬಿಡುಗಡೆ ಸಾಧ್ಯತೆ

ಚಂಡೀಗಢ: ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಅವರು ನಾಳೆ ಏಪ್ರಿಲ್ 1 ರಂದು ಪಾಟಿಯಾಲಾ ಜೈಲಿನಿಂದ ಬಿಡುಗಡೆಯಾಗುವ ಸಾಧ್ಯತೆಯಿದೆ ಎಂದು ಅವರ ವಕೀಲ ಎಚ್‌ಪಿಎಸ್ ವರ್ಮಾ ಶುಕ್ರವಾರ ಹೇಳಿದ್ದಾರೆ.

59 ವರ್ಷದ ಅವರು 1988 ರ ರೋಡ್ ರೇಜ್ ಪ್ರಕರಣದಲ್ಲಿ ಒಂದು ವರ್ಷ ಜೈಲು ಶಿಕ್ಷೆ ಅನುಭವಿಸುತ್ತಿದ್ದರು. ಕಳೆದ ವರ್ಷ ಮೇ 20 ರಂದು, ಪಂಜಾಬ್ ಕಾಂಗ್ರೆಸ್‌ನ ಮಾಜಿ ಮುಖ್ಯಸ್ಥ ಸಿಧು ಅವರು ಸುಪ್ರೀಂ ಕೋರ್ಟ್‌ನಿಂದ ಒಂದು ವರ್ಷ ಕಠಿಣ ಜೈಲು ಶಿಕ್ಷೆಗೆ ಗುರಿಯಾದ ನಂತರ ಪಾಟಿಯಾಲದ ನ್ಯಾಯಾಲಯದ ಮುಂದೆ ಶರಣಾಗಿ ಜೈಲು ಪಾಲಾದರು. ಅಸಮರ್ಪಕ ಶಿಕ್ಷೆಯನ್ನು ವಿಧಿಸುವಲ್ಲಿ ಯಾವುದೇ ಸಹಾನುಭೂತಿಯು ನ್ಯಾಯ ವ್ಯವಸ್ಥೆಗೆ ಹೆಚ್ಚು ಹಾನಿ ಮಾಡುತ್ತದೆ ಮತ್ತು ಕಾನೂನಿನ ಪರಿಣಾಮಕಾರಿತ್ವದಲ್ಲಿ ಸಾರ್ವಜನಿಕ ವಿಶ್ವಾಸವನ್ನು ದುರ್ಬಲಗೊಳಿಸುತ್ತದೆ ಎಂದು ಸುಪ್ರೀಂಕೋರ್ಟ್ ತನ್ನ ಆದೇಶದಲ್ಲಿ ಹೇಳಿದೆ.

ಒಂದನೇ ಪುಟದಿಂದ

ಇಂದಿನಿಂದ ಟೋಲ್ ದರ ಹೆಚ್ಚಳ

ಹಾಗೂ 7 ಆಕ್ಸೆಲ್ ಅಥವಾ ಅದಕ್ಕಿಂತ ಹೆಚ್ಚಿನ ಆಕ್ಸೆಲ್ ವಾಹನಗಳಿಗೆ 1,080 ರೂ. (200 ರೂ. ಹೆಚ್ಚಳ), ದ್ವಿಮುಖ ಸಂಚಾರಕ್ಕೆ 1,620 ರೂ. (305 ರೂ. ಹೆಚ್ಚಳ)ಗಳಿಗೆ ಟೋಲ್ ದರ ಹೆಚ್ಚಿಸಲಾಗಿದೆ. ಹೆದ್ದಾರಿಗೆ ಟೋಲ್ ಸಂಗ್ರಹ ಮಾಡುತ್ತಿರುವುದಕ್ಕೆ ಈಗಾಗಲೇ ಸಾರ್ವಜನಿಕರು ತೀವ್ರ ವಿರೋಧ ಮಾಡುತ್ತಿರುವ ಬೆನ್ನಲ್ಲೇ ಪ್ರಾಧಿಕಾರವು ಮತ್ತೆ ದರ ಏರಿಕೆ ಮಾಡಿರುವುದರಿಂದ ಈ ರಸ್ತೆಯಲ್ಲಿ ಸಂಚಾರ ಮತ್ತಷ್ಟು ದುಬಾರಿಯಾಗಿದ್ದು, ವಾಹನ ಸವಾರರ ಜೇಬಿಗೆ ಕತ್ತರಿ ಬಿದ್ದಂತಾಗಿದೆ.

ದಶಪಥ ರಸ್ತೆ ನಿರ್ಮಾಣ ಕಾಮಗಾರಿ ಸಂಪೂರ್ಣವಾಗದಿದ್ದರೂ ಮಾರ್ಚ್ 14ರಿಂದ ಟೋಲ್ ಸಂಗ್ರಹ ಮಾಡಲಾಗುತ್ತಿದ್ದು, ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿ, ಆಗಾಗ ಪ್ರತಿಭಟನೆ ಮಾಡುತ್ತಿದ್ದುದನ್ನು ಇಲ್ಲಿ ಸ್ಮರಿಸಬಹುದು.

ಮೈಸೂರು ಉದ್ಯಮಿ ಆತ್ಮಹತ್ಯೆ

ನೋಡಿದಾಗ ದೇವೇಂದ್ರಪ್ಪ ಫ್ಯಾನ್‌ಗೆ ನೇಣು ಬಿಗಿದುಕೊಂಡಿರುವುದು ಕಂಡು ಬಂದಿದೆ. ತಕ್ಷಣವೇ ಬಂದರು ಠಾಣೆ ಪೊಲೀಸರಿಗೆ ಹೋಟೆಲ್ ಸಿಬ್ಬಂದಿ ಮಾಹಿತಿ ನೀಡಿದ್ದು, ಮಂಗಳೂರು ಪೊಲೀಸ್ ಆಯುಕ್ತ ಕುಲದೀಪ್ ಕುಮಾರ್ ಜೈನ್ ಹಾಗೂ ಬಂದರು ಠಾಣೆ ಇನ್ಸ್‌ಪೆಕ್ಟರ್ ರಾಘವೇಂದ್ರ ಮತ್ತು ಸಿಬ್ಬಂದಿ ಹೋಟೆಲ್‌ಗೆ ಧಾವಿಸಿ ಮಾಸ್ಟರ್ ಕೀಯಿಂದ ರೂಂ ಬಾಗಿಲು ತೆರೆಸಿ ನೋಡಿದಾಗ ನಾಲ್ವರ ಮೃತ ದೇಹಗಳು ಕಂಡು ಬಂದಿವೆ. ಅಲ್ಲದೇ ದೇವೇಂದ್ರಪ್ಪ ಬರೆದಿರುವ ಡೆತ್‌ನೋಟ್ ಕೂಡ ಪತ್ತೆಯಾಗಿದೆ.

ತಾವೆಲ್ಲಾ ಸಾಯಲಿದ್ದೇವೆ ಎಂಬುದು ಬಹುಶಃ ದೇವೇಂದ್ರಪ್ಪನವರ ಪತ್ನಿ ಹಾಗೂ ಮಕ್ಕಳಿಗೆ ಗೊತ್ತಿರಲಿಲ್ಲ ಎಂದು ಅನ್ನಿಸುತ್ತಿದೆ. ಹೋಟೆಲ್ ಸಿಬ್ಬಂದಿಯ ಪ್ರಕಾರ ಮೂರು ದಿನ ಇಡೀ ಕುಟುಂಬದವರು ಸಂತಸದಿಂದಲೇ ಕಂಡು ಬಂದಿದ್ದಾರೆ. ದೇವೇಂದ್ರಪ್ಪ ಮಾ.30ರಂದು ರಾತ್ರಿ ಪತ್ನಿ ಹಾಗೂ ಮಕ್ಕಳಿಗೆ ಆಹಾರದಲ್ಲಿ ಯಾವುದೋ ಔಷಧಿ ಬೆರೆಸಿ ಕೊಟ್ಟು ಅವರು ಪ್ರಜ್ಞಾಹೀನರಾದ ನಂತರ ಉಸಿರುಗಟ್ಟಿಸಿ ಹತ್ಯೆ ಮಾಡಿ, ಡೆತ್‌ನೋಟ್ ಬರೆದಿಟ್ಟು ನೇಣಿಗೆ ಶರಣಾಗಿರಬಹುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಸಾಲದ ಬಾಧೆ ಹಾಗೂ ಮಾಟ–ಮಂತ್ರದಿಂದ ಜಿಗುಪ್ಸೆಗೊಂಡು ಕುಟುಂಬ ಸಮೇತ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ದೇವೇಂದ್ರಪ್ಪ ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ. ತಮ್ಮ ಬಳಿ ಇರುವ 2 ಕಾರುಗಳು ಬೇರೆಯವರ ಹೆಸರಲ್ಲಿದ್ದು, ಅದು ಅವರಿಗೇ ಸೇರಬೇಕು ಹಾಗೂ ತನ್ನ ಕಾರ್ಖಾನೆಯನ್ನು ಕಿರಿಯ ಸಹೋದರ ನಿರ್ವಹಿಸಿಕೊಂಡು ಹೋಗಬೇಕು ಎಂದು ಡೆತ್‌ನೋಟ್‌ನಲ್ಲಿ ದೇವೇಂದ್ರಪ್ಪ ಉಲ್ಲೇಖಿಸಿದ್ದಾರೆ ಎಂದು ಬಂದರು ಠಾಣೆ ಇನ್ಸ್‌ಪೆಕ್ಟರ್ ರಾಘವೇಂದ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಈ ಸಂಬಂಧ ಬಂದರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿಷಯ ತಿಳಿಯುತ್ತಿದ್ದಂತೆಯೇ ಮೈಸೂರಿನಿಂದ ದೇವೇಂದ್ರಪ್ಪನ ಸಹೋದರ ಹಾಗೂ ದಾವಣಗೆರೆಯಿಂದ ಸಂಬಂಧಿಕರು ಮಂಗಳೂರಿಗೆ ತೆರಳಿ ಮರಣೋತ್ತರ ಪರೀಕ್ಷೆ ನಂತರ ನಾಲ್ವರ ದೇಹಗಳನ್ನು ಪಡೆದು ಸ್ವಗ್ರಾಮಕ್ಕೆ ಕೊಂಡೊಯ್ದಿದ್ದಾರೆ.

ಬಂಡೀಪುರಕ್ಕೆ ಪ್ರಧಾನಿ ಮೋದಿ ಭೇಟಿ

ಮದುಮಲೈಗೂ ಭೇಟಿ: ಬಂಡೀಪುರ ಕಾರ್ಯಕ್ರಮದ ಬಳಿಕ ತಮಿಳುನಾಡಿದ ಮದುಮಲೇ ಹುಲಿ ಸಂರಕ್ಷಿತ ಪ್ರದೇಶಕ್ಕೆ ಭೇಟಿ ನೀಡಲಿರುವ ಪ್ರಧಾನಿ ಮೋದಿ, ಅಲ್ಲಿ ಇತ್ತೀಚೆಗೆ ಆಸ್ಕರ್ ಪ್ರಶಸ್ತಿಗೆ ಪಾತ್ರವಾಗಿರುವ ಕಿರುಚಿತ್ರದಲ್ಲಿ ನಟಿಸಿರುವ ಆನೆ ಮರಿಯ ಪಾಲಕರಾದ ಬೊಮ್ಮ ಹಾಗೂ ಬೆಳ್ಳಿ ದಂಪತಿಯನ್ನು ಗೌರವಿಸಲು ನಿರ್ಧರಿಸಿದ್ದಾರೆ. ಬಳಿಕ ಮತ್ತೆ ಬಂಡೀಪುರ ಮಾರ್ಗವಾಗಿ ಹೆಲಿಪ್ಯಾಡ್‌ಗೆ ಬಂದು ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಮಾಹಿತಿ ಅನುಸಾರ ಮೈಸೂರಿನ ಖಾಸಗಿ ಹೋಟೆಲ್‌ಗೆ ಆಗಮಿಸಿ ಕೆಲಕಾಲ ವಿಶ್ರಾಂತಿ ಪಡೆದು ಮತ್ತೆ ವಿಮಾನ ನಿಲ್ದಾಣಕ್ಕೆ ತೆರಳಿ, ಅಲ್ಲಿಂದ ವಿಶೇಷ ವಿಮಾನದಲ್ಲಿ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ. ಪ್ರಧಾನಿ ಮೋದಿ ಆಗಮನದ ಹಿನ್ನೆಲೆಯಲ್ಲಿ ಇನ್ನೆರಡು ದಿನದಲ್ಲಿ ದೆಹಲಿಯಿಂದ ವಿಶೇಷ ಭದ್ರತಾ ಸಿಬ್ಬಂದಿ (ಎಸ್‌ಪಿಜಿ) ಆಗಮಿಸಿ ಸ್ಥಳ ಪರಿಶೀಲಿಸಲಿದೆ. ಅಲ್ಲದೆ, ಕೈಗೊಳ್ಳಬೇಕಾದ ಸಿದ್ಧತೆ ಬಗ್ಗೆ ಮೈಸೂರು ಹಾಗೂ ಚಾಮರಾಜನಗರದ ಜಿಲ್ಲಾಡಳಿತಕ್ಕೆ ಸೂಚನೆ ನೀಡಲಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಮುನ್ಸೂಚನೆ

ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ವಿಶ್ವಾಸ



ಮಳವಳ್ಳಿ, ಮಾ.31– ಬೆಲೆ ಏರಿಕೆ, ಅವೈಜ್ಞಾನಿಕ ಮೀಸಲಾತಿ ಜಾರಿ ಹಾಗೂ ಜನ ವಿರೋಧಿ ನೀತಿಗಳಿಂದ ಬೇಸತ್ತಿರುವ ರಾಜ್ಯದ ಮತದಾರರು ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬೆಂಬಲಿಸಲಿದ್ದಾರೆ. ಹೀಗಾಗಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಮುನ್ಸೂಚನೆ ಗಾಳಿ ಬೀಸಲಾರಂಭಿಸಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಟಿಎಪಿಸಿಎಂಎಸ್ ಆವರಣದಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಹಿಂದುಳಿದ ವರ್ಗದ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, 70 ವರ್ಷಗಳ ಕಾಲ ರಾಜ್ಯ ಹಾಗೂ ಕೇಂದ್ರದಲ್ಲಿ ಆಳ್ವಿಕೆ ನಡೆಸಿರುವ ಕಾಂಗ್ರೆಸ್ ಪಕ್ಷ ಶೋಷಿತ ಸಮಾಜವನ್ನು ಗುರುತಿಸಿ ಉದ್ಯೋಗ, ನೀರಾವರಿ ಸೇರಿದಂತೆ ಹಲವು ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದು, ಸರ್ವರಿಗೂ ಸಾಮಾಜಿಕ ನ್ಯಾಯ ಕಲ್ಪಿಸಿದೆ ಎಂದು ತಿಳಿಸಿದರು.

ಬಿಜೆಪಿ ಸರ್ಕಾರದಲ್ಲಿ 700 ರೂ. ಇದ್ದ ರಾಸಾಯನಿಕ ಗೊಬ್ಬರ 1800ಕ್ಕೆ ಏರಿಕೆಯಾಗಿದೆ. ಗ್ಯಾಸ್ ಬೆಲೆ ದುಪ್ಪಟ್ಟಾಗಿದೆ. ಕುಡಿಯುವ ನೀರಿಗೆ ಮೀಟರ್ ಅಳವಡಿಕೆ, ಆಧಾರ್ ಲಿಂಕ್‌ಗೆ ಒಂದು ಸಾವಿರ ರೂ. ಪಾವತಿಸಬೇಕಾದ ಅನಿವಾರ್ಯತೆ ಬಂದಿದೆ. ಇಂತಹ ಸರ್ಕಾರವನ್ನು ರಾಜ್ಯದ ಜನತೆ ಕಿತ್ತೊಗೆಯಬೇಕೆಂದು ಸಲಹೆ ನೀಡಿದರು.

ಕಾಂಗ್ರೆಸ್ ಆಳ್ವಿಕೆಯಲ್ಲಿ ಸ್ಥಾಪಿಸಿದ ಸಾರ್ವಜನಿಕ ಉದ್ದಿಮೆಗಳನ್ನು ಮೋದಿ ಸರ್ಕಾರ ಖಾಸಗೀಕರಣ ಮಾಡಿದೆ. ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ, ಶಿವಮೊಗ್ಗ ಮತ್ತು ವಿಜಯಪುರ ವಿಮಾನ ನಿಲ್ದಾಣಗಳು ನಮ್ಮ ಸರ್ಕಾರದ ಕೊಡುಗೆಗಳಾಗಿದ್ದು, ಇವುಗಳನ್ನು ತಮ್ಮ ದೆಂದು ಬಿಂಬಿಸಿಕೊಳ್ಳಲು ಬಿಜೆಪಿ ಮುಖಂಡರು ಮುಂದಾಗಿದ್ದಾರೆ ಎಂದು ಲೇವಡಿ ಮಾಡಿದರು. ಗಂಗಾಮತ ಜನಾಂಗವನ್ನು ಎಸ್‌ಟಿಗೆ ಸೇರಿಸುವ ಕುರಿತು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಬಳಿಕ ಜನಾಂಗದ ಶ್ರೀಗಳ ಜೊತೆ ಚರ್ಚಿಸಿ ಅನ್ಯಾಯ ಸರಿಪಡಿಸಲು ಮುಂದಾಗುತ್ತೇನೆಂದು ಭರವಸೆ ನೀಡಿದರು.

ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಕಳೆದ 5 ವರ್ಷಗಳಲ್ಲಿ ತಾಲೂಕಿನಲ್ಲಿ ಅಭಿವೃದ್ಧಿ ಮರೀಚಿಕೆಯಾಗಿದ್ದು, ಸಂಕಷ್ಟಕ್ಕೊಳಗಾದವರ ಕಷ್ಟ ಕೇಳುವವರಿಲ್ಲದಂತಾಗಿದೆ. ಶೋಷಿತರ ಬದುಕು ದುಸ್ಥರವಾಗಿದೆ. ಇದನ್ನು ಮೆಟ್ಟಿ ಜನ ಸಾಮಾನ್ಯರಿಗೆ ನ್ಯಾಯ ಒದಗಿಸಲು ಕಾಂಗ್ರೆಸ್ ಬೆಂಬಲಿಸಬೇಕೆಂದು ಮನವಿ ಮಾಡಿದರು.

> ❝ಕೇಂದ್ರದ ಮೋದಿ ಹಾಗೂ ರಾಜ್ಯದ ಬೊಮ್ಮಾಯಿ ಸರ್ಕಾರದ ಆಳ್ವಿಕೆಯಲ್ಲಿ ದಿನನಿತ್ಯದ ಬದುಕು ದುಸ್ತರವಾಗಿದ್ದು, ಬೆಲೆ ಏರಿಕೆ ಮೂಲಕ ಜನಸಾಮಾನ್ಯರ ಲೂಟಿಗೆ ಮುಂದಾಗಿರುವ ಬಿಜೆಪಿ ಸರ್ಕಾರವನ್ನು ಪತನಗೊಳಿಸಲು ರಾಜ್ಯದ ಮತದಾರರು ನಿರ್ಧರಿಸಿದ್ದಾರೆ. ರಾಜ್ಯದಲ್ಲಿ 5 ವರ್ಷ ಅಧಿಕಾರ ನಡೆಸಿದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ರೈತರ ಏಳಿಗೆಗೆ ಹಲವು ಯೋಜನೆ ಸಾಕಾರಗೊಳಿಸಿತು. ಅದೇ ರೀತಿ ಇಂದಿರಾ ಗಾಂಧಿ, ದೇವರಾಜ ಅರಸು, ಬಂಗಾರಪ್ಪ, ಗುಂಡೂರಾವ್ ಮತ್ತು ಸಿದ್ದರಾಮಯ್ಯ ಅವರ ಕಾಲದ ಯೋಜನೆಗಳು ಜಾರಿಗೊಳ್ಳಲು ರಾಜ್ಯದಲ್ಲಿ ಮತ್ತೇ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಬೇಕು.
>
> – ಸತೀಶ್ ಜಾರಕಿಹೊಳಿ, ಕೆಪಿಸಿಸಿ ಕಾರ್ಯಾಧ್ಯಕ್ಷ.

ಬಡವರ ಹಸಿವು ನೀಗಿಸಲು ಸಿದ್ದರಾಮಯ್ಯ ಜಾರಿಗೊಳಿಸಿದ ಅನ್ನಭಾಗ್ಯ ಯೋಜನೆ ಕಡಿತಗೊಳಿಸಿ 10 ಕೆಜಿಯಿಂದ 5 ಕೆಜಿಗೆ ಇಳಿಕೆ ಮಾಡಲಾಗಿದೆ. ಬಡವರ ಭಾಗ್ಯ ಜ್ಯೋತಿ ವಿದ್ಯುತ್ ಅನ್ನು ಸ್ಥಗಿತಗೊಳಿಸಲಾಗಿದೆ. ಕಳೆದ 5 ವರ್ಷಗಳ ಅವಧಿಯಲ್ಲಿ ಒಂದು ಮನೆ ನಿರ್ಮಾಣಕ್ಕೆ ಅನುಮೋದನೆ ನೀಡಿಲ್ಲ ಎಂದರು.

ಪಟ್ಟಣದ ಶಾಂತಿ ಕಾಲೇಜು ಮುಂಭಾಗದ 33.5 ಎಕರೆ ಜಮೀನಿನಲ್ಲಿ 1130 ನಿವೇಶನಗಳ ಹಂಚಿಕೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿತ್ತು. ಹಾಲಿ ಶಾಸಕರು ಭೂ ಮಾಲೀಕರೊಬ್ಬರಿಂದ ತಡೆಯಾಜ್ಞೆ ತಂದು ನಿವೇಶನ ಹಂಚಿಕೆಗೆ ಅಡ್ಡಿ ಪಡಿಸಿದರು. ಆದರೆ ಕಳೆದ 5 ವರ್ಷಗಳ ಅವಧಿಯಲ್ಲಿ ತಡೆಯಾಜ್ಞೆ ತೆರವುಗೊಳಿಸಿ ಏಕೆ ನಿವೇಶನ ಹಂಚಿಲ್ಲ ಎಂದು ಪ್ರಶ್ನಿಸಿದ ಅವರು ನಾನು ಶಾಸಕನಾಗಿ ಆಯ್ಕೆ ಯಾದರೇ ಒಂದು ತಿಂಗಳ ಅವಧಿಯಲ್ಲಿ ತಡೆಯಾಜ್ಞೆ ತೆರವುಗೊಳಿಸಿ ನಿವೇಶನ ಹಂಚಿಕೆಗೆ ಕ್ರಮ ವಹಿಸುತ್ತೇನೆಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಪುರಸಭೆ ಮಾಜಿ ಅಧ್ಯಕ್ಷ ದೊಡ್ಡಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದೇವರಾಜು, ರಾಜ್ಯ ಕಾಂಗ್ರೆಸ್ ಘಟಕದ ಹಿಂದುಳಿದ ವರ್ಗಗಳ ಅಧ್ಯಕ್ಷ ಬಾಲಯ್ಯ, ಮುಖಂಡರಾದ ಹೊನ್ನನಾಯಕ, ಬಸವಣ್ಣ, ಮಹದೇವು, ಯಶೋಧಮ್ಮ, ಮಾದನಾಯಕ, ಗಂಗರಾಜೇಅರಸ್, ಪ್ರಕಾಶ್, ಶಿವರಾಜ್ ಸೇರಿದಂತೆ ಇತರರಿದ್ದರು.

ಎಲೆಕ್ಟ್ರಿಕ್ ಸ್ಕೂಟರ್ ಸ್ಫೋಟ: ಪಕ್ಕದಲ್ಲಿದ್ದ 4 ಬೈಕ್‌ಗಳು ಬೆಂಕಿಗಾಹುತಿ



ಮಳವಳ್ಳಿ, ಮಾ.31– ಎಲೆಕ್ಟ್ರಿಕ್ ಸ್ಕೂಟರ್ ಸ್ಫೋಟಗೊಂಡ ಪರಿಣಾಮ ಅಕ್ಕಪಕ್ಕದಲ್ಲಿದ್ದ 4 ಬೈಕ್‌ಗಳು ಬೆಂಕಿಗಾಹುತಿಯಾಗಿರುವ ಘಟನೆ ತಾಲೂಕಿನ ಕಿರುಗಾವಲು ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಶುಕ್ರವಾರ ನಡೆದಿದೆ.

ಹಿಟ್ಟನಹಳ್ಳಿ ಕೊಪ್ಪಲು ಗ್ರಾಮದ ವಿವೇಕಾನಂದ ಪ್ರೌಢಶಾಲೆ ಶಿಕ್ಷಕ ಪ್ರಕಾಶ್ ಎಂಬುವರಿಗೆ ಸೇರಿದ ಎಲೆಕ್ಟ್ರಿಕ್ ಸ್ಕೂಟರ್ ಸ್ಫೋಟಗೊಂಡಿರುವುದು.

ವಿವರ: ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿತ್ತು. ಹಿಟ್ಟನಹಳ್ಳಿ ಕೊಪ್ಪಲು ಗ್ರಾಮದ ವಿವೇಕಾನಂದ ಪ್ರೌಢಶಾಲೆ ಶಿಕ್ಷಕ ಪ್ರಕಾಶ್ ಎಲೆಕ್ಟ್ರಿಕ್ ಸ್ಕೂಟರ್ ನಲ್ಲಿ ಆಗಮಿಸಿ ಪರೀಕ್ಷಾ ಸಿಬ್ಬಂದಿಯಾಗಿ ಕೆಲಸ ನಿರ್ವಹಿಸುತ್ತಿದ್ದರು. ಶಿಕ್ಷಕರು, ಪರೀಕ್ಷಾ ಸಿಬ್ಬಂದಿ ಸಾಲಾಗಿ ಬೈಕ್ ನಿಲ್ಲಿಸಿದ್ದರು. ಈ ವೇಳೆ ಶಿಕ್ಷಕ ಪ್ರಕಾಶ್ ಅವರ ಎಲೆಕ್ಟ್ರಿಕ್ ಸ್ಕೂಟರ್ ಇದ್ದಕ್ಕಿದ್ದಂತೆ ಸ್ಫೋಟಗೊಂಡು ಬೆಂಕಿ ಹೊತ್ತಿಕೊಂಡು ಉರಿಯಲಾರಂಭಿಸಿತು. ನೋಡ ನೋಡುತ್ತಿದ್ದಂತೆಯೇ ಅಕ್ಕಪಕ್ಕದ 3 ಬೈಕ್‌ಗಳಿಗೂ ಬೆಂಕಿ ಜ್ವಾಲೆ ಹರಡಿತು. ನಂತರ ಒಂದೊಂದೇ ಸ್ಫೋಟಗೊಂಡು ಮತ್ತೆ ಇನ್ನೊಂದು ಬೈಕ್‌ಗೂ ಬೆಂಕಿ ಹೊತ್ತಿಕೊಂಡಿತು. ಅಷ್ಟರಲ್ಲಿ ಶಿಕ್ಷಕರು, ಸಿಬ್ಬಂದಿಗಳು ಸ್ಥಳಕ್ಕೆ ಧಾವಿಸಿ ಅಕ್ಕಪಕ್ಕದಲ್ಲಿದ್ದ ಬೈಕ್‌ಗಳನ್ನು ದೂರಕ್ಕೆ ಸಾಗಿಸಿದರು. ಬೆಂಕಿ ಕೆನ್ನಾಲೆಗೆ ಒಟ್ಟು 4 ಬೈಕ್‌ಗಳು ಸುಟ್ಟು ಕರಕಲಾದವು. ಈ ವೇಳೆ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದರು. ಈ ಸಂಬಂಧ ಕಿರುಗಾವಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಚಿನಕುರಳಿಯಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ ಭೇಟಿ ನೀಡಿ ಪರೀಶಿಲನೆ ನಡೆಸಿದರು.

ಹೊಳೆ ಆಂಜನೇಯಸ್ವಾಮಿ ದೇವಸ್ಥಾನದ ಹುಂಡಿಯಲ್ಲಿ 5.93 ಲಕ್ಷ ರೂ. ಸಂಗ್ರಹ

ಮದ್ದೂರು, ಮಾ.31– ಪಟ್ಟಣದ ಪುರಾಣ ಪ್ರಸಿದ್ಧ ಶ್ರೀ ಹೊಳೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಕಾಣಿಕೆ ಹಾಗೂ ಹರಕೆಯ ರೂಪದಲ್ಲಿ ಹುಂಡಿಗೆ ಸಮರ್ಪಿಸಿದ ಹಣವನ್ನು ಮುಜರಾಯಿ ಇಲಾಖೆಯ ಅಧಿಕಾರಿಗಳು ಎಣಿಕೆ ಮಾಡಿದರು.

6 ತಿಂಗಳಲ್ಲಿ 5,93,100 ರೂ. ಸಂಗ್ರಹಿಸಿದ್ದು ಹಣವನ್ನು ಬ್ಯಾಂಕ್‌ಗೆ ಜಮಾ ಮಾಡಲಾಯಿತು. ಎಣಿಕೆ ಕಾರ್ಯ ತಾಲೂಕು ಮುಜರಾಯಿ ಅಧಿಕಾರಿಗಳು ಹಾಗೂ ದಂಡಾಧಿಕಾರಿ ಟಿ.ಎನ್. ನರಸಿಂಹಮೂರ್ತಿ ನೇತೃತ್ವದಲ್ಲಿ ನಡೆಯಿತು.

ಕಂದಾಯ ಅಧಿಕಾರಿಗಳಾದ ಜಗದೀಶ್, ರವಿಶಂಕರ್, ಮುಜರಾಯಿ ವಿಷಯ ನಿರ್ವಾಹಕ ಜಿ.ವಿ. ಮಹೇಶ್, ದೇವಸ್ಥಾನದ ಪ್ರಧಾನ ಅರ್ಚಕರಾದ ಪ್ರದೀಪ್ ಆಚಾರ್ಯ, ಪಾರು ಪತ್ತೆದಾರ ರಘು, ಗ್ರಾಮ ಸಹಾಯಕರು ಹಾಗೂ ತಾಲೂಕು ಆಡಳಿತ ಸಿಬ್ಬಂದಿಗಳು ಏಣಿಕೆ ಕಾರ್ಯದಲ್ಲಿ ಭಾಗವಹಿಸಿದ್ದರು.

ಡಾ.ಮ.ರಾಮಕೃಷ್ಣರ ನಿವೃತ್ತ ಜೀವನ ಸುಖಕರವಾಗಿರಲಿ

ಭಾರತೀ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ, ಎಂಎಲ್‌ಸಿ ಮಧು ಜಿ.ಮಾದೇಗೌಡ



ಭಾರತೀನಗರ, ಮಾ.31– ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಎಲ್ಲರ ಮನಸ್ಸು ಗೆದ್ದಿರುವ ಸಾಹಿತಿ ಡಾ.ಮ.ರಾಮಕೃಷ್ಣ ಅವರ ನಿವೃತ್ತ ಜೀವನ ಸುಖಕರ ವಾಗಿರಲಿ ಎಂದು ಭಾರತೀ ಎಜುಕೇಷನ್ ಟ್ರಸ್ಟ್ ಅಧ್ಯಕ್ಷರೂ ಆದ ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಆಶಿಸಿದರು.

ಇಲ್ಲಿನ ಭಾರತೀ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಭಾರತಿ ಎಜುಕೇಷನ್ ಟ್ರಸ್ಟ್ ಅಧ್ಯಾಪಕ ಸಂಘ, ಡಾ.ಮ.ಕೃಷ್ಣ ಅಭಿನಂದನಾ ಗ್ರಂಥ ಸಮಿತಿ ಸಂಯುಕ್ತಾಶ್ರಯದಲ್ಲಿ ನಡೆದ ಮರಾ 60ರ ಸಂಭ್ರಮಾಚರಣೆ ಹಾಗೂ ಮಾಮರ ಗ್ರಂಥ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಮ್ಮ ಸಂಸ್ಥೆಯಲ್ಲಿ ಪ್ರಾಂಶುಪಾಲರಾಗಿ ಉತ್ತಮ ಆಡಳಿತ ನಡೆಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಇವರು ನಿವೃತ್ತಿಗೊಳ್ಳುತ್ತಿರುವುದು ನಮಗೂ ಬೇಸರ ತಂದಿದೆ ಎಂದರು.

ನಮ್ಮ ತಂದೆ ದಿ.ಜಿ.ಮಾದೇಗೌಡರಾಗಲಿ ಅಥವಾ ನಾನಾಗಲಿ ಹಣ ಮಾಡಲು ವಿದ್ಯಾಸಂಸ್ಥೆ ನಡೆಸಿಲ್ಲ. ನಡೆಸುವುದೂ ಇಲ್ಲ. ಗ್ರಾಮೀಣ ಮಕ್ಕಳ ಅನುಕೂಲಕ್ಕಾಗಿ ನಡೆಸುತ್ತಿದ್ದೇವೆ. ನಾನು 2004ರಲ್ಲಿ ಭಾರತೀ ಕಾಲೇಜಿಗೆ ಸಿಇಓ ಆಗಿ ಬಂದಾಗ ಮ.ರಾಮಕೃಷ್ಣ ಅವರನ್ನು ಪರಿಚಯ ಮಾಡಿಕೊಂಡೆ. ಅವರಲ್ಲಿ ವಿದ್ಯಾಸಂಸ್ಥೆ ಬಗ್ಗೆ ಇದ್ದ ಕಾಳಜಿ ಗುರುತಿಸಿದೆ. ಅವರು ನಮಗೆ ಈ ಕುವೆಂಪು ಸಭಾಂಗಣ ಮಾಡುವಂತೆ ಸಲಹೆ ನೀಡಿದ್ದರು. ಅದರಂತೆ ನಾನು ಈ ಕುವೆಂಪು ಸಭಾಂಗಣ ಮಾಡಿದ್ದೇನೆ ಎಂದರು.

ನಾನು ಕಾಲೇಜಿನ ದೊಡ್ಡ ಕಟ್ಟಡ ಕಟ್ಟಿದ್ದೇವೆ ಹೊರತು ವಿದ್ಯಾಸಂಸ್ಥೆ ನಡೆಸುತ್ತಿರುವವರು ನಿವೃತ್ತಿಗೊಂಡಂತಹ ಮಾಯೀಗೌಡರು, ಪುಟ್ಟಲಿಂಗಯ್ಯ, ಎಸ್.ನಾಗರಾಜು, ಶಿವಸ್ವಾಮಿ, ನಾಗೇಂದ್ರ ಸೇರಿದಂತೆ ಇನ್ನಿತರೆ ಅನೇಕ ನುರಿತ ಅಧ್ಯಾಪಕರಿಂದ ವಿದ್ಯಾಸಂಸ್ಥೆ ಇಂದು ಪ್ರಚಲಿತಗೊಂಡಿದೆ ಎಂದರು. ಮೈಸೂರಿನ ಪ್ರಸಿದ್ಧ ಸಾಹಿತಿ ಡಾ.ರಾಗೌ ಅವರು ಮಾಮರ ಅಭಿನಂದನಾ ಗ್ರಂಥ ಬಿಡುಗಡೆ ಗೊಳಿಸಿ ಮಾತನಾಡಿ, ಸಾಹಿತಿ ಮ.ರಾಮಕೃಷ್ಣ ಅವರನ್ನು ನನ್ನ ಶಿಷ್ಯನಾಗಿ ಪಡೆದಿದ್ದು ಬಹಳ ಹೆಮ್ಮೆ ತಂದಿದೆ. ಅವರ ಚಿಂತನೆ, ಆಲೋಚನೆಗಳು, ಸಮಾಜಕ್ಕೆ ಒಳಿತು ಉಂಟುಮಾಡುವಂತಹ ಬೆಳವಣಿಗೆ ಎಂದರು.

ಸಂಸ್ಕೃತಿ ಚಿಂತಕ ಮತ್ತು ಪ್ರಾಧ್ಯಾಪಕ ಮೈಸೂರು ಕೃಷ್ಣಮೂರ್ತಿ ಮಾತನಾಡಿ, ಮ.ರಾಮಕೃಷ್ಣ ಅವರು ತಮ್ಮ ವಿದ್ಯಾಭ್ಯಾಸದ ಜೀವನದಿಂದಲೂ ಸರಳ ವ್ಯಕ್ತಿಯಾಗಿ ಬೆಳೆದು ಬಂದಿದ್ದಾರೆಂದು ಬಣ್ಣಿಸಿದರು. ನಿವೃತ್ತ ಪ್ರಾಂಶುಪಾಲ ಮ.ರಾಮಕೃಷ್ಣ ದಂಪತಿ ಅಭಿನಂದನೆ ಸ್ವೀಕರಿಸಿ ಮಾತನಾಡಿ, ದಿ.ಜಿ.ಮಾದೇಗೌಡರು ಈ ವಿದ್ಯಾಸಂಸ್ಥೆಯಲ್ಲಿ ಕೆಲಸ ಮಾಡಲು ಅವಕಾಶ ಕೊಟ್ಟಿದ್ದು ನನ್ನ ಪುಣ್ಯ ಎಂದರು. ತನ್ನ ಸ್ನೇಹಿತ ಧನರಾಜ್ ಅವರನ್ನು ನೆನೆದು ಭಾವುಕರಾದರು.

ನಿವೃತ್ತಿಗೊಂಡ ಹಿನ್ನೆಲೆಯಲ್ಲಿ ಮ.ರಾಮಕೃಷ್ಣ ಅವರನ್ನು ಅಧ್ಯಾಪಕ, ಅಧ್ಯಾಪಕೇತರರು, ಸಿಬ್ಬಂದಿಗಳು, ವಿದ್ಯಾರ್ಥಿಗಳು ಅಭಿನಂದಿಸಿ ಗೌರವಿಸಿದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ 625 ಕ್ಕೆ 620 ಅಂಕ ಪಡೆದ ಮಾದರಹಳ್ಳಿ ಪಲ್ಲವಿ ಅವರಿಗೆ ಮಾ.ರಾಮಕೃಷ್ಣ ಅವರು 10 ಸಾವಿರ ಪ್ರೋತ್ಸಾಹಧನ ನೀಡಿ ಅಭಿನಂದಿಸಿದರು. ವೇದಿಕೆಯಲ್ಲಿ ಕರ್ನಾಟಕ ಸಂಘದ ಜಿಲ್ಲಾಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ, ಸಾಹಿತಿ ವೆಂಕಟಪ್ಪ ಬಿಇಟಿ ಕಾರ್ಯದರ್ಶಿ ಬಿ.ಎಂ.ನಂಜೇಗೌಡ, ಸಿದ್ದೇಗೌಡ, ಪಾಪಣ್ಣ, ಜಯರಾಮು, ಮುದ್ದೇಗೌಡ ಹಲವರಿದ್ದರು.

ಇಂದು ಮೇಲುಕೋಟೆ ಚೆಲುವನಿಗೆ ವೈರಮುಡಿ ಕಿರೀಟಧಾರಣೆ



ಮೇಲುಕೋಟೆ, ಮಾ.31– ಇಲ್ಲಿನ ಶ್ರೀ ಚೆಲುವನಾರಾಯಣಸ್ವಾಮಿ ವೈರಮುಡಿ ಕಿರೀಟಧಾರಣಾ ಮಹೋತ್ಸವ ಏ.1ರಂದು ರಾತ್ರಿ 8.30ಕ್ಕೆ ಅದ್ದೂರಿಯಾಗಿ ನಡೆಯಲಿದೆ. ವೈರಮುಡಿ ಉತ್ಸವಕ್ಕೆ ಸುಮಾರು 3 ಲಕ್ಷ ಭಕ್ತರು ಆಗಮಿಸುವ ನಿರೀಕ್ಷೆ ಇದ್ದು, ಇದಕ್ಕಾಗಿ ಮೇಲುಕೋಟೆ ನವ ವಧುವಿನಂತೆ ಸಿಂಗಾರಗೊಂಡಿದೆ. ಅಲ್ಲದೇ ಜಿಲ್ಲಾಧಿಕಾರಿ ಡಾ.ಹೆಚ್.ಎನ್ ಗೋಪಾಲಕೃಷ್ಣ ಮತ್ತು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎನ್.ನಾಗರಾಜು ಮಾರ್ಗದರ್ಶನದಲ್ಲಿ ಜಿಲ್ಲಾಡಳಿತ ಭಕ್ತರಿಗೆ ಬೇಕಾದ ಎಲ್ಲಾ ರೀತಿಯ ವ್ಯವಸ್ಥೆ ಮಾಡಿದೆ.

ವಿಧಾನಸಭಾ ಚುನಾವಣೆಗೆ ಅಗತ್ಯ ಮುಂಜಾಗ್ರತಾ ಕ್ರಮ



ಪಿರಿಯಾಪಟ್ಟಣ, ಮಾ.31– ಈ ಬಾರಿಯ ವಿಧಾನಸಭಾ ಚುನಾವಣೆ ಯಶಸ್ವಿಗೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸಹಕಾರದೊಂದಿಗೆ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ಎಂದು ಸಹಾಯಕ ಚುನಾವಣಾಧಿಕಾರಿಯೂ ಆದ ತಹಸೀಲ್ದಾರ್ ಕುಂಞ ಅಹಮದ್ ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಸಾರ್ವತ್ರಿಕ ವಿಧಾನಸಭಾ ಚುನಾವಣೆ ಘೋಷಿಸಲಾಗಿದೆ. ಹೀಗಾಗಿ ತಾಲೂಕಿನಲ್ಲಿ ಪಾರದರ್ಶಕ, ಶಾಂತಿಯುತ ಹಾಗೂ ನ್ಯಾಯ ಸಮ್ಮತವಾಗಿ ಚುನಾವಣೆ ನಡೆಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ತಾಲೂಕು ವ್ಯಾಪ್ತಿಯಲ್ಲಿ ಯಾವುದೇ ರಾಜಕೀಯ ಪಕ್ಷಗಳ ಸಭೆ, ಸಮಾರಂಭ, ಖಾಸಗಿ, ಧಾರ್ಮಿಕ ಕಾರ್ಯಕ್ರಮ, ಜಾತ್ರೆ, ಮದುವೆ ಸೇರಿದಂತೆ ಇನ್ನಿತರ ಯಾವುದೇ ಕಾರ್ಯಕ್ರಮ ನಡೆಸಲು ಚುನಾವಣಾಧಿಕಾರಿಗಳ ಅನುಮತಿ ಕಡ್ಡಾಯವಾಗಿ ಪಡೆಯಬೇಕು. ಚುನಾವಣಾ ನೀತಿ ಸಂಹಿತೆ ಜಾರಿಯಾಗಿರುವುದರಿಂದ ಅಭ್ಯರ್ಥಿ ಪರ ಮಾಧ್ಯಮಗಳಲ್ಲಿ ಯಾವುದೇ ಜಾಹೀರಾತು ಪ್ರಕಟಿಸುವ ಮುನ್ನ ಸದರಿ ಜಾಹೀರಾತು ವಿವರವನ್ನು ಚುನಾವಣಾ ತಂಡದ ಗಮನಕ್ಕೆ ತಂದು ಪ್ರಮಾಣ ಪತ್ರ ಪಡೆಯಬೇಕು. ನಮ್ಮ ಮತ್ತು ಸಂಬಂಧಪಟ್ಟ ಇಲಾಖೆ ಗಮನಕ್ಕೆ ತರದೆ ಯಾವುದೇ ಸಾರ್ವಜನಿಕ ಕಾರ್ಯಕ್ರಮ ಮಾಡಿದರೂ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದ ಅವರು ತಾಲೂಕಿನ ವಿವಿಧೆಡೆ ಗಡಿ ಭಾಗಗಳಲ್ಲಿ ಚೆಕ್‌ಪೋಸ್ಟ್ ತೆರೆದು ವಿವಿಧ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿ ನೇಮಿಸಿ ವಾಹನ ಸಂಚಾರದ ಮೇಲೆ ನಿಗವಹಿಸಲಾಗಿದೆ. ದೇವಸ್ಥಾನ, ಮಸೀದಿ, ಚರ್ಚ್‌ಗಳಲ್ಲಿ ಯಾವುದೇ ಚುನಾವಣಾ ಪ್ರಚಾರ ಮಾಡಬಾರದು ಎಂದು ಸೂಚಿಸಿದರು.

ತಾಲೂಕಿನಲ್ಲಿ ಒಟ್ಟು 1,93,173 ಮತದಾರರಿದ್ದು, ಈ ಪೈಕಿ 96,930 ಪುರುಷರು, 96,236 ಮಹಿಳೆಯರು ಮತ್ತು 7 ಇತರೆ ಮತದಾರರಿದ್ದಾರೆ. 5266 ಮಂದಿ 80 ವರ್ಷ ಮೇಲ್ಪಟ್ಟ ಮತದಾರರನ್ನು ಗುರುತಿಸಲಾಗಿದೆ. ಹೊಸದಾಗಿ 18 ವರ್ಷ ಮೇಲ್ಪಟ್ಟ 4395 ಮತದಾರರು ಮತಪಟ್ಟಿಗೆ ಹೆಸರು ನೋಂದಾಯಿಸಿದ್ದಾರೆ. ತಾಲೂಕಿನಾದ್ಯಂತ 235 ಮತಗಟ್ಟೆ ತೆರೆಯಲಾಗಿದ್ದು ಚುನಾವಣಾ ಆಯೋಗದ ಸೂಚನೆಯಂತೆ ಪಿಂಕ್ ಮತ್ತು ಯತ್ನಿಕ್ ವಿಶೇಷ ಮತಗಟ್ಟೆಗಳನ್ನು ತೆರೆಯಲಾಗುವುದು. ಮತ ಕೇಂದ್ರಗಳಿಗೆ ಮೂಲ ಸೌಕರ್ಯ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದರು.

ಚುನಾವಣೆ ನೀತಿ ಸಂಹಿತೆ ಉಲ್ಲಂಘನೆ ಸಂಬಂಧ ಸಾರ್ವಜನಿಕರು ದೂರು ನೀಡಲು ಕಂಟ್ರೋಲ್ ರೂಂ ದೂ: 08233–274175 ಅಥವಾ ಚುನಾವಣಾಧಿಕಾರಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಕುಸುಮ ಕುಮಾರಿ ಮೊ: 9845073568, ಸಹಾಯಕ ಚುನಾವಣಾಧಿಕಾರಿ ತಹಸೀಲ್ದಾರ್ ಕುಂಞ ಅಹಮದ್ ಮೊ: 9740125662 ಸಂಪರ್ಕಿಸಬಹುದು. ಸುದ್ದಿಗೋಷ್ಠಿಯಲ್ಲಿ ಪ್ರೊಬೆಷನರಿತಹಸೀಲ್ದಾರ್ ಭೀಮರಾಯ, ಶಿರಸ್ತೇದಾರ್‌ಗಳಾದ ನಂದ ಕುಮಾರ್, ದಾಕ್ಷಾಯಿಣಿ, ಸಿಬ್ಬಂದಿ ರಾಕೇಶ್ ಇದ್ದರು.

ವಿದ್ಯಾವಂತರನ್ನು ಪಕ್ಷ ಸಂಘಟನೆಗೆ ಬಳಸಿಕೊಳ್ಳಿ

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಕರೆ



ತಿ.ನರಸೀಪುರ, ಮಾ.31– ಕಾಂಗ್ರೆಸ್ ಆಡಳಿತದಲ್ಲಿ ಶಿಕ್ಷಣ, ವೈಜ್ಞಾನಿಕತೆ ಹಾಗೂ ವೈಚಾರಿಕತೆಗೆ ಹೆಚ್ಚು ಒತ್ತು ನೀಡಿ ಸಾಕ್ಷರತಾ ಪ್ರಮಾಣ ಹೆಚ್ಚಿಸಲಾಗಿದೆ. ಹೀಗಾಗಿ ಪಕ್ಷದ ಸಾಧನೆ ಹಾಗೂ ಯೋಜನೆಗಳನ್ನು ತಿಳಿಸಿ ವಿದ್ಯಾವಂತರನ್ನು ಪಕ್ಷ ಸಂಘಟನೆಗೆ ಬಳಸಿಕೊಳ್ಳುವಂತೆ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಕರೆ ನೀಡಿದರು.

ಪಟ್ಟಣದ ಗುರುಭವನದಲ್ಲಿ ನಡೆದ ಕೆಪಿಸಿಸಿ ಪದವೀಧರರ ಹಾಗೂ ಶಿಕ್ಷಕರ ಘಟಕದ ಜಿಲ್ಲಾಧ್ಯಕ್ಷರ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಪದವೀಧರರು, ಶಿಕ್ಷಕರನ್ನು ಪಕ್ಷಕ್ಕೆ ಸೇರಿಸಿಕೊಂಡು ಅವರಿಗೆ ಪಕ್ಷದ ಸಿದ್ಧಾಂತದ ಬಗ್ಗೆ ತಿಳಿಸಿ ಅವರ ಮೂಲಕ ಸಂಘಟನೆಗೆ ವಿಶೇಷವಾಗಿ ಗ್ರಾಮೀಣ ಭಾಗದಲ್ಲಿ ಹೆಚ್ಚು ಒತ್ತು ನೀಡುವಂತೆ ನೂತನ ಅಧ್ಯಕ್ಷ ರಮೇಶ್‌ಗೆ ಸಲಹೆ ನೀಡಿದರು.

ಭಾರತ ಬಹುಧರ್ಮ, ಸಂಸ್ಕೃತಿ ಇರುವ ದೇಶ. ಇಲ್ಲಿ ಐಕ್ಯತೆಯೊಂದಿದೆ ಬಹು ಸಂಸ್ಕೃತಿ ಕಾಪಾಡಬೇಕು. ಏಕರೂಪ ನೀತಿ ರೀತಿಗಳನ್ನು ತರಲು ಸಾಧ್ಯವಾಗದು. ದೇಶದಲ್ಲಿ ವರ್ಷಕ್ಕೆ 2 ಕೋಟಿ ಉದ್ಯೋಗ ನೀಡುವ ಪ್ರಧಾನಿ ಯೋಜನೆ ವಿಫಲವಾಗಿದೆ. ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ಲಕ್ಷಾಂತರ ಹುದ್ದೆಗಳು ಖಾಲಿ ಇದೆ. ಅದನ್ನು ಭರ್ತಿ ಮಾಡಲು ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದ ಅವರು ನಮ್ಮ ಸರ್ಕಾರವಿದ್ದ ವೇಳೆ ಬಂಡವಾಳ ಹೂಡಿಕೆ ಹೆಚ್ಚಾಗಿತ್ತು. ಇದರಿಂದ ಹೊಸ ಉದ್ಯಮಗಳು ಪ್ರಾರಂಭವಾಗಿ ಉದ್ಯೋಗಾವಕಾಶ ಹೆಚ್ಚಿತ್ತು ಎಂದರು.

ಕೆಪಿಸಿಸಿ ಪದವೀಧರ ಹಾಗೂ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಕುಬೇರಪ್ಪ ಮಾತನಾಡಿ, ದೇಶಕ್ಕೆ ಕಾಂಗ್ರೆಸ್ ಕೊಡುಗೆ ಹಾಗೂ ಅಭಿವೃದ್ಧಿ ಪಥದಲ್ಲಿ ಕಾಂಗ್ರೆಸ್ ಮಾಡಿರುವ ಸಾಧನೆಗಳನ್ನು ದೇಶದ ಮೂಲೆ ಮೂಲೆಗೆ ತಿಳಿಸುವ ಉದ್ದೇಶದಿಂದ ವಿದ್ಯಾವಂತರಾದ ಶಿಕ್ಷಕರು ಹಾಗೂ ಪದವೀಧರ ಘಟಕ ಕಾರ್ಯ ನಿರ್ವಹಿಸುತ್ತಿದೆ. ಮೋದಿಯವರು ಕಾಂಗ್ರೆಸ್ ಕೊಡುಗೆ ಏನು ಎನ್ನುತ್ತಾರೆ. ಅವರು ಓದಿದ ಶಾಲೆಗಳನ್ನು ಸ್ಥಾಪಿಸಿದ್ದು ಕಾಂಗ್ರೆಸ್. ಓಡಾಡಲು ರಸ್ತೆ ಮಾಡಿಸಿದ್ದು ಕಾಂಗ್ರೆಸ್ ಅಲ್ಲವೇ ಎಂದು ಪ್ರಶ್ನಿಸಿದರು.

ಈ ವೇಳೆ ಕೆಪಿಸಿಸಿ ಪದವೀಧರ ಹಾಗೂ ಶಿಕ್ಷಕರ ಘಟಕದ ಜಿಲ್ಲಾಧ್ಯಕ್ಷರಾಗಿ ಎಂ.ರಮೇಶ್ ಅಧಿಕಾರ ಸ್ವೀಕರಿಸಿದರು. ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಪುರಸಭಾಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಉಪಾಧ್ಯಕ್ಷೆ ನಾಗರತ್ನ ಮಾದೇಶ್, ಮಾಜಿ ಅಧ್ಯಕ್ಷ ಎನ್.ಸೋಮು, ಕೆಪಿಸಿಸಿ ಕಾರ್ಯದರ್ಶಿ ಮರುಣಾ ಮಹೇಶ್, ಪಿ.ಸ್ವಾಮಿನಾಥಗೌಡ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ಮಾಜಿ ಸದಸ್ಯ ಕುಕ್ಕೂರು ಗಣೇಶ್, ಸಾಜಿದ್ ಅಹ್ಮದ್, ಮನ್ಸೂರ್ ಅಲಿ, ಪ್ರಶಾಂತ್ ಬಾಬು, ಡಿಸಿಸಿ ವಕ್ತಾರ ಹುಣಸೂರು ಬಸವಣ್ಣ, ಪುರಸಭಾ ಸದಸ್ಯ ಮೆಡಿಕಲ್ ನಾಗರಾಜು, ಬ್ಲಾಕ್ ಅಧ್ಯಕ್ಷರಾದ ರಮೇಶ್ ಮುದ್ದೇಗೌಡ, ರಂಗಸ್ವಾಮಿ, ಚನ್ನಕೇಶವ, ಅರುಣ್ ಕುಮಾರ್, ಜಿಪಂ ಮಾಜಿ ಸದಸ್ಯ ಕೆ.ಮಹದೇವ್, ಸುಧಾಮಣಿ, ಮುಖಂಡರಾದ ಕೊತ್ತೇಗಾಲ ಬಸವರಾಜು, ಉಕ್ಕಲಗೆರೆ ಬಸವಣ್ಣ, ಮಲಿಯೂರು ಸಂತೋಷ್, ತಿರುಮಕೂಡಲು ಕುಮಾರ್, ಎಂ.ಕೆ.ಸಹದೇವ್, ಬಣ್ಣ ಬಸವರಾಜು, ಮಲ್ಲೇಶ್, ಕ್ರೇಜಿ ಸುರೇಶ್ ಮತ್ತಿತರರಿದ್ದರು.

ಬೆಟ್ಟದಪುರದಲ್ಲಿ ವಿಜೃಂಭಣೆಯ ರಾಮನವಮಿ



ಬೆಟ್ಟದಪುರ, ಮಾ.31– ಗ್ರಾಮದ ಬ್ರಾಹ್ಮಣ ಸಮಾಜದಿಂದ ಶ್ರೀರಾಮ ನವಮಿ ವಿಜೃಂಭಣೆಯಿಂದ ನಡೆಯಿತು.

ರಾಮನವಮಿ ಅಂಗವಾಗಿ ದೇವಾಲಯದಲ್ಲಿ ಮುಂಜಾನೆಯೇ ಅಭಿಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳನ್ನು ನಡೆಸಲಾಯಿತು. ದೇವಾಲಯವನ್ನು ವಿವಿಧ ರೀತಿಯ ಕೇಸರಿ ಬಾವುಟ ಹಾಗೂ ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿತ್ತು. ಗುರುವಾರ ರಾತ್ರಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀರಾಮನ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಲಾಯಿತು.

ದೇವಾಲಯಕ್ಕೆ ಆಗಮಿಸಿದ ಭಕ್ತರಿಗೆ ಕೋಸಂಬರಿ, ಪಾನಕ ಹಾಗೂ ಮಜ್ಜಿಗೆ ವಿತರಿಸಲಾಯಿತು. ಈ ವೇಳೆ ಮೆಡಿಕಲ್ ನಾಗರಾಜ್, ಸ್ಟುಡಿಯೋ ಗಿರೀಶ್, ಪೋಸ್ಟ್ ಶ್ರೀಕಂಠ, ಕೃಷ್ಣಮೂರ್ತಿ, ಮಂಜುನಾಥ್, ನಿಖಿಲ್, ಸತೀಶ್, ಕಶ್ಯಪ ಇತರರಿದ್ದರು.

ಹುಣಸೂರಲ್ಲಿ ಬೆತ್ತ ಕೃತಿ ಲೋಕಾರ್ಪಣೆ

ಮಲೆಯೂರು ಗುರುಸ್ವಾಮಿಯವರ ಚಿಂತನೆ ಅಳವಡಿಸಿಕೊಳ್ಳಿ

ಮೈಸೂರು ಕನ್ನಡ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್



ಹುಣಸೂರು, ಮಾ.31– ವಿದ್ಯಾರ್ಥಿಗಳಿಗಾಗಿ ತಮ್ಮನ್ನು ಸಮರ್ಪಿಸಿಕೊಂಡ ವಿಶಿಷ್ಟ ವ್ಯಕ್ತಿತ್ವದ ಮಲೆಯೂರು ಗುರುಸ್ವಾಮಿ ಅವರನ್ನು ಕಳೆದುಕೊಂಡು ಕನ್ನಡ ಸಾರಸ್ವತ ಲೋಕಕ್ಕೆ ಅಪಾರ ನಷ್ಟವಾಗಿದ್ದು, ಅವರ ಚಿಂತನೆ, ವಿಚಾರಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮೈಸೂರು ಕನ್ನಡ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಅಭಿಪ್ರಾಯಪಟ್ಟರು.

ನಗರದ ರೋಟರಿ ಭವನದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹಾಗೂ ರೋಟರಿ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ನಡೆದ ಡಾ.ಬಿ.ನಂಜುಂಡಸ್ವಾಮಿ ಹರದನಹಳ್ಳಿ ಅವರ 'ಬೆತ್ತ' ಕೃತಿ ಲೋಕಾರ್ಪಣೆ ಹಾಗೂ ಮಲೆಯೂರು ಗುರುಸ್ವಾಮಿಯವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾರಸ್ವತ ಲೋಕಕ್ಕೆ ತನ್ನದೇ ಆದ ಕೊಡುಗೆ ನೀಡಿರುವ ಮಲೆಯೂರು ತಮ್ಮ ಜ್ಞಾನ ಸಂಪತ್ತಿನಿಂದ ಎಲ್ಲರನ್ನು ಬೆರಗು ಮೂಡಿಸಿದವರು ಎಂದರು.

ಸಂಶೋಧನಾತ್ಮಕ, ಚಾರಿತ್ರಿಕ, ಐತಿಹಾಸಿಕ ಹಿನ್ನೆಲೆಯಲ್ಲಿ 6 ಮಹತ್ವದ ಕೃತಿಗಳನ್ನು ನೀಡಿದ ಅವರು ಅಪಾರ ಶಿಷ್ಯ ಬಳಗ ಹೊಂದಿದ್ದರು. ಅವರಿದ್ದಲ್ಲಿ ಉತ್ತಮ ಚರ್ಚೆ ಆಗುತ್ತಿತ್ತು. ತಮ್ಮ ಬರಹ, ಚಿಂತನೆ, ಗಟ್ಟಿತನ, ಔದಾರ್ಯವನ್ನು ನಮ್ಮ ನಡುವೆ ಬಿಟ್ಟು ಹೋದರು. ಇಂದು 'ಬೆತ್ತ' ಕೃತಿ ಹೊರತರುತ್ತಿರುವ ಕೃತಿಕಾರ ಡಾ.ಬಿ.ನಂಜುಂಡಸ್ವಾಮಿ ಹರದನಹಳ್ಳಿಯವರು ಸಾಮಾಜಿಕ ಚಿಂತನೆ, ತಳಸ್ಪರ್ಶಿ ಅಧ್ಯಯನದ ಮೂಲಕ ಮೌಲಿಕ ಕೃತಿ ನೀಡಿದ್ದಾರೆ. ಇದಕ್ಕೆ ಅವರ ಗುರು ಮಲೆಯೂರು ಅವರ ಪ್ರೇರಣೆ ಪ್ರಮುಖ ಕಾರಣ. 18 ವಿಮರ್ಶಾ ಲೇಖನಗಳು 'ಬೆತ್ತ' ಕೃತಿಯಲ್ಲಿದ್ದು, ತಮ್ಮ ಕೃತಿ ಲೋಕಾರ್ಪಣಾ ಸಮಾರಂಭದಲ್ಲಿ ಗುರುಗಳಾದ ಮಲೆಯೂರು ಗುರುಸ್ವಾಮಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಗೌರವ ನೀಡುತ್ತಿರುವುದು ಮೆಚ್ಚುವ ಕಾರ್ಯ ಎಂದರು.

'ಬೆತ್ತ' ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿದ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಸಾಹಿತಿ ಡಾ.ವೈ.ಡಿ.ರಾಜಣ್ಣ, 'ಬೆತ್ತ' ಕೃತಿ ಇಂದಿನ ಸಾಮಾಜಿಕ ಸಮಸ್ಯೆಗಳಿಗೆ ಚಿಕಿತ್ಸಕ ರೂಪದಲ್ಲಿದೆ. ಒಂದು ಕೃತಿ ಓದಿದಾಗ ಕೃತಿ ಓದುಗರಿಗೆ ಸಂತೋಷ ನೀಡುವ ಜೊತೆಗೆ ಸಂದೇಶ ನೀಡಬೇಕು. ಮನೋವಿಕಾಸ ಉಂಟು ಮಾಡಬೇಕು. ಈ ಕೃತಿ ಮನೋವಿಕಾಸ ಮಾಡುವ ನಿಟ್ಟಿನಲ್ಲಿ ಯಶಸ್ಸು ಸಾಧಿಸಿದೆ. ಪುಸ್ತಕ ಹೊರ ತರುವುದೆಂದರೆ ಮನೋರಂಜನೆ ನೀಡುವುದಲ್ಲ. ವೈರುಧ್ಯಗಳ ನಡುವೆ ಸತ್ಯದ ಹುಡುಕಾಟ ಮಾಡಬೇಕಾಗಿದೆ. ನಂಜುಂಡಸ್ವಾಮಿ ಅವರ ಈ ಕೃತಿ ಸಾಹಿತ್ಯ ಲೋಕಕ್ಕೆ ನೀಡುತ್ತಿರುವ ಉತ್ತಮ ಕಾಣಿಕೆಯಾಗಿದೆ. ಮಲೆಯೂರು ಗುರುಸ್ವಾಮಿಯವರ ಗರಡಿಯಲ್ಲಿ ಬೆಳೆದಿರುವ ಕೃತಿಕಾರರು ಕೃತಿ ಬಿಡುಗಡೆ ಮಾಡಿ ತಮ್ಮ ಗುರುಗಳಿಗೆ ಶ್ರಧ್ಧಾಂಜಲಿ ಸಲ್ಲಿಸುತ್ತಿರುವುದು ಮೆಚ್ಚುವಂತಹುದು ಎಂದರು.

'ಬೆತ್ತ' ಕೃತಿ ಕುರಿತು ನಿವೃತ್ತ ಪ್ರಾಂಶುಪಾಲ ಚಿಂತಕ ಪ್ರೊ.ಎಚ್.ಆರ್.ಸಿದ್ದೇಗೌಡರು ಮಾತನಾಡಿದರು. ತಾಲೂಕು ಕಸಾಪ ಅಧ್ಯಕ್ಷ ಹೆಚ್.ಕೆ.ಮಹದೇವ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸರ್ಕಾರಿ ಮಹಿಳಾ ಕಾಲೇಜಿನ ಪ್ರಾಂಶುಪಾಲ ಪುಟ್ಟಶೆಟ್ಟಿ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್, ಸ್ಪಂದನ ಸಾಂಸ್ಕೃತಿಕ ಪರಿಷತ್ ಅಧ್ಯಕ್ಷ ಟಿ.ಲೋಕೇಶ್, ಮೈಸೂರು–ಚಾಮರಾಜನಗರ ವಾಲ್ಮೀಕಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜಗದೀಶ್ವರ ಮೂರ್ತಿ ಉಪಸ್ಥಿತರಿದ್ದರು. 'ಬೆತ್ತ' ಕೃತಿ ಲೇಖಕ ಡಾ.ಬಿ.ನಂಜುಂಡಸ್ವಾಮಿ ಹಾಗೂ ರಾಜ್ಯ ಮಟ್ಟದ ಆದರ್ಶ ಶಿಕ್ಷಕ ಪ್ರಶಸ್ತಿ ಪಡೆದ ತಾಲೂಕು ಕಸಾಪ ಅಧ್ಯಕ್ಷ ಹೆಚ್.ಕೆ.ಮಹದೇವ ಅವರನ್ನು ಅಭಿನಂದಿಸಲಾಯಿತು. ತಾಲೂಕು ಕಸಾಪ ನಿಟಕಪೂರ್ವ ಅಧ್ಯಕ್ಷ ಸೋಮಶೇಖರ, ಕಸಾಪ ಗೌರವ ಸಲಹೆಗಾರರಾದ ಆನಂದ್, ಕುಮಾರ್ ಅರಸೇಗೌಡ, ಗುರುಸ್ವಾಮಿ, ಕಸಾಪ ಹೋಬಳಿ ಘಟಕದ ಅಧ್ಯಕ್ಷ ಹೆಚ್.ಕೆ.ಶ್ರೀನಿವಾಸಮೂರ್ತಿ, ಶ್ರೀನಾಥ್, ವಿಜಯಾ, ಖಜಾಂಚಿ ಕೆ.ನಂಜುಂಡಸ್ವಾಮಿ, ಪದಾಧಿಕಾರಿಗಳಾದ ಕೆ.ಸಿ.ಕುಮಾರ್, ಎ.ಲೋಕೇಶ್. ಎಸ್.ಗಂಗಾಧರ್, ಎ.ಎನ್.ತ್ರಿನೇಶ್, ಡಿ.ವಿಜಯಕುಮಾರ್, ವಿ.ವೆಂಕಟಯ್ಯ, ಶ್ರೀನಿವಾಸ್ ಕಲ್ಕುಣಿಕೆ, ಕಲ್ಪನಾ ಬೊಮ್ಮೇಗೌಡ, ಮಹದೇವಮ್ಮ, ಬಾಬುಕೃಷ್ಣಮೂರ್ತಿ ಪಾಲ್ಗೊಂಡಿದ್ದರು.

ಕೆಪಿಎಸ್‌ಸಿ ಪರೀಕ್ಷೆಯ 4 ಪರೀಕ್ಷಾ ಕೇಂದ್ರಗಳು ಬದಲಾವಣೆ

ಮೈಸೂರು, ಮಾ.31– ಏ.1 ಮತ್ತು 2 ರಂದು ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ನಗರದ 17 ಪರೀಕ್ಷಾ ಕೇಂದ್ರಗಳಲ್ಲಿ ರಾಜ್ಯದ ವಿವಿಧ ಇಲಾಖೆಗಳ ಗ್ರೂಪ್ ಸಿ ಹುದ್ದೆಗಳ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದ್ದು, ಮೈಸೂರಿನ ನಾಲ್ಕು ಪರೀಕ್ಷಾ ಕೇಂದ್ರಗಳನ್ನು ಆಯೋಗವು ಬದಲಾವಣೆ ಮಾಡಿದೆ. ನಗರದ ಎನ್.ಎಸ್. ರೋಡ್‌ನ ಮಹಾರಾಣಿ ಪಿಯು ಕಾಲೇಜ್ ಪರೀಕ್ಷಾ ಕೇಂದ್ರದಿಂದ ಶಾರದಾ ವಿಲಾಸ ರಸ್ತೆಯ ಶಾರದಾವಿಲಾಸ್ ಕಾಲೇಜಿಗೆ, ಜೆ.ಎಲ್.ಬಿ ರೋಡ್‌ನ ಮಹಾರಾಣಿ ಪಿಯು ಕಾಲೇಜ್‌ನಿಂದ ಡಿ.ಬನುಮಯ್ಯ ಕಲಾ ಮತ್ತು ವಾಣಿಜ್ಯ ಕಾಲೇಜಿಗೆ, ಸರ್ಕಾರಿ ಪದವಿ ಪೂರ್ವ ಕಾಲೇಜು, ಮಂಚೇಗೌಡನ ಕೊಪ್ಪಲು ಹೆಬ್ಬಾಳ್ ಪರೀಕ್ಷಾ ಕೇಂದ್ರದಿಂದ ಸಿದ್ಧಾರ್ಥನಗರದ ಟೆರಿಷಿಯನ್ ಪಿಯು ಕಾಲೇಜಿಗೆ ಹಾಗೂ ಒಂಟಿಕೊಪ್ಪಲ್ ಸರ್ಕಾರಿ ಪದವಿ ಪೂರ್ವ ಕಾಲೇಜಿನಿಂದ ರಾಜೇಂದ್ರನಗರದ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗೆ ಪರೀಕ್ಷಾ ಕೇಂದ್ರಗಳನ್ನು ಬದಲಾವಣೆ ಮಾಡಲಾಗಿದೆ. ನಿಗದಿತ ಸಮಯಕ್ಕೆ ಬದಲಾವಣೆ ಮಾಡಿರುವ ಪರೀಕ್ಷಾ ಕೇಂದ್ರಗಳಲ್ಲಿ ಹಾಜರಾಗುವಂತೆ ಡಿಸಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೋಡಲು ಬಸಪ್ಪ; ಅಂತರಂಗದಲ್ಲಿ ವಿಷಪ್ಪ

■ ಬಿಜೆಪಿ ರಾಜ್ಯ ಎಸ್ಸಿ ಮೋರ್ಚಾ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಗಂಭೀರ ಆರೋಪ ■ ಸಿದ್ದರಾಮಯ್ಯ ದೊಡ್ಡ ಲೀಡರ್ ಅಲ್ಲ; ಅಲೆಮಾರಿ ■ ಅವರಿಂದ ಅಲ್ಪಸಂಖ್ಯಾತರು, ಪರಿಶಿಷ್ಟರಿಗೆ ಭಾರೀ ಅನ್ಯಾಯ ■ ಈಗಾಗಲೇ ಅವರ ವಿರುದ್ಧ 74 ಕೇಸ್ ಇವೆ



ಮೈಸೂರು, ಮಾ.31(ಎಸ್‌ಬಿಡಿ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮೇಲ್ನೋಟಕ್ಕೆ ಬಸಪ್ಪನಂತೆ ಆದರೆ ಅವರ ಅಂತರಂಗದಲ್ಲಿ ವಿಷ ತುಂಬಿದೆ ಎಂದು ಬಿಜೆಪಿ ರಾಜ್ಯ ಎಸ್ಸಿ ಮೋರ್ಚಾ ಅಧ್ಯಕ್ಷ ಛಲವಾದಿ ನಾರಾಯಣಸ್ವಾಮಿ ಹೇಳಿದರು. ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿದ್ದರಾಮಯ್ಯನವರ ಮಾತು ಮುತ್ತಿನಂತಿರುತ್ತವೆ. ಅವರು ಹೊರಗಡೆ ಬಸಪ್ಪ ಆದರೆ ಒಳಗಡೆ ಸಂಪೂರ್ಣ ವಿಷಪ್ಪ. ಅವರನ್ನು ಹತ್ತಿರದಿಂದ ಬಲ್ಲವರಿಗೆ ಮಾತ್ರ ವಾಸ್ತವ ತಿಳಿದಿದೆ. ಅವರು ಈ ಚುನಾವಣೆಯಲ್ಲಿ ವರುಣಾ ಹಾಗೂ ಕೋಲಾರ ಎರಡೂ ಕ್ಷೇತ್ರಗಳಲ್ಲೂ ಸೋಲುತ್ತಾರೆ. ಅವರ ರಾಜಕೀಯ ಭವಿಷ್ಯವೇ ಮುಕ್ತಾಯವಾಗುತ್ತದೆ ಎಂದರು.

■ **ಸ್ವಾರ್ಥಕ್ಕಾಗಿ ತುಳಿದರು:** ಕಾಂಗ್ರೆಸ್ 7 ದಶಕಗಳಿಂದ ಪರಿಶಿಷ್ಟಜಾತಿಯವರನ್ನು ಓಟ್ ಬ್ಯಾಂಕ್ ಆಗಿ ಬಳಸಿಕೊಂಡಿದೆ. ಸಿದ್ದ ರಾಮಯ್ಯನವರು ದಲಿತ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಡಾ.ಜಿ.ಪರಮೇಶ್ವರ್, ಕೆ.ಹೆಚ್.ಮುನಿಯಪ್ಪ, ಆರ್.ಧ್ರುವನಾರಾಯಣ್ ಅವರನ್ನು ಸೋಲಿಸಿದರು. ಹಿರಿಯರಾದ ವಿ.ಶ್ರೀನಿವಾಸ ಪ್ರಸಾದ್ ಅವರನ್ನು ಹೊರ ಕಳುಹಿಸಿದರು. ಹೀಗೆ ದಲಿತ ನಾಯಕರನ್ನು ಒಬ್ಬೊಬ್ಬರನ್ನಾಗಿ ತುಳಿದರು. ಸಿ.ಎಂ.ಇಬ್ರಾಹಿಂ, ರೋಷನ್ ಬೇಗ್, ಅಬ್ದುಲ್ ಖಾದರ್ ಸರಡಗಿ, ಜಾಫರ್ ಷರೀಫ್ ಅವರ ಮೊಮ್ಮಗ ಸೇರಿದಂತೆ ಅಲ್ಪಸಂಖ್ಯಾತರಿಗೂ ಅನ್ಯಾಯ ಮಾಡಿದರು. ಅಲ್ಲದೆ ಅವರದೇ ಸಮುದಾಯದ ಭೈರತಿ ಬಸವರಾಜು, ಎಂಟಿಬಿ ನಾಗರಾಜ್, ಎ.ಹೆಚ್.ವಿಶ್ವನಾಥ್, ಶಂಕರ್ ಅವರನ್ನೂ ಬಿಡಲಿಲ್ಲ. ಸರ್ವಾಧಿಕಾರ ಧೋರಣೆ, ಸ್ವಾರ್ಥ ಸಾಧನೆಗೆ ಅಹಿಂದ ನಾಯಕರನ್ನು ತುಳಿದು ಬೆಳೆದು ಬಂದಿದ್ದಾರೆ ಎಂದು ಆರೋಪಿಸಿದರು.

■ **ಕಮಿಷನ್ ಟೂಲ್ ಕಿಟ್:** 40 ಪರ್ಸೆಂಟ್ ಕಮಿಷನ್ ಸರ್ಕಾರ ಎನ್ನುವುದನ್ನು ಕಾಂಗ್ರೆಸ್ ಚುನಾವಣಾ ಟೂಲ್ ಕಿಟ್ ಮಾಡಿಕೊಂಡಿದೆ. ಆದರೆ ನಾವೇನು ಆ ಬಗ್ಗೆ ಗಂಭೀರವಾಗಿ ತಲೆ ಕೆಡಿಸಿಕೊಳ್ಳಲಿಲ್ಲ. 'ಮೈಮೇಲೆ ಭಾರ ಇದ್ದರೆ ದಾರಿ ಭಯ' ಅಂದರೆ ಮೈಮೇಲೆ ಚಿನ್ನಾಭರಣ ಹಾಕಿಕೊಂಡಿದ್ದರೆ ದಾರಿಯಲ್ಲಿ ಯಾರಾದರೂ ಕಿತ್ತುಕೊಳ್ಳಬಹುದು ಎಂಬ ಭಯ ಇರುತ್ತದೆ. ಆದರೆ ನಾವು ಭಯ ಪಡುವ ಪ್ರಮೇಯವೇ ಇಲ್ಲ. ಆದಾಗ್ಯೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಹಾಗೂ ಸುರ್ಜೇವಾಲ ಅವರು ಪದೇ ಪದೆ ಕಮಿಷನ್ ಸರ್ಕಾರ ಎನ್ನುತ್ತಿದ್ದಾರೆ. ಚುನಾವಣೆ ಘೋಷಣೆ ನಂತರ ಈ ರೀತಿ ಗುರುತರ ಆರೋಪ ಮಾಡಿದರೆ ಅದನ್ನು ಆಧಾರ ಸಹಿತ ರುಜು ವಾತು ಮಾಡಬೇಕು. ಇಲ್ಲವಾದರೆ ಅದು ಅಪರಾಧವಾಗುತ್ತದೆ. ಹಾಗಾಗಿ ನಾನೇ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದೇನೆ ಎಂದು ತಿಳಿಸಿದರು.

■ **ಇಚ್ಛಾನುಸಾರ ಲೂಟಿ:** ಕಾಂಗ್ರೆಸ್ ನಾಯಕರು ಆರೋಪ ಮಾಡಿದರೆ ಹೊರತು ನ್ಯಾಯಾಲಯ, ಲೋಕಾಯುಕ್ತಕ್ಕೆ ದೂರು ನೀಡಲಿಲ್ಲ. ಆದರೆ ಅರ್ಕಾವತಿ ಡಿ ನೋಟಿಫಿಕೇಷನ್ ಸಂಬಂಧ ಸಿದ್ದರಾಮಯ್ಯನವರ ವಿರುದ್ಧವೇ ಲೋಕಾಯುಕ್ತದಲ್ಲಿ ಪ್ರಕರಣವಿದೆ. ಅವರು ಮುಖ್ಯಮಂತ್ರಿಯಾಗಿದ್ದಾಗ ಲೋಕಾಯುಕ್ತಕ್ಕೆ ಬೀಗ ಹಾಕಿ, ಎಸಿಬಿ ಸ್ಥಾಪಿಸಿ ಇಚ್ಛಾನುಸಾರ ಲೂಟಿ ಮಾಡಿದರು. ಯಾವ ಪ್ರಕರಣಗಳ ತನಿಖೆಯೂ ನಡೆಯಲಿಲ್ಲ. ಸಮರ್ಪಕ ತನಿಖೆ ನಡೆದಿದ್ದರೆ ಕಾಂಗ್ರೆಸ್‌ನ ಒಂದು ಡಜನ್ ನಾಯಕರು ಜೈಲಿಗೆ ಹೋಗುತ್ತಿದ್ದರು. ಬೆಂಗಳೂರು, ಮೈಸೂರು ಭಾಗದ ಕಂಟ್ರಾಕ್ಟರ್‌ಗಳನ್ನು ಕರೆತಂದು ಬಾದಾಮಿ ಕ್ಷೇತ್ರದಲ್ಲಿ ಕಾಮಗಾರಿ ಮಾಡಿಸಿ 40 ಪರ್ಸೆಂಟ್ ಕಮಿಷನ್ ಪಡೆಯುತ್ತಿದ್ದಾರೆ ಎಂದು ಅಲ್ಲಿನ ಗುತ್ತಿಗೆದಾರರ ಸಂಘದವರು ದೂರಿದ್ದಾರೆ.

ಆ ಬಗ್ಗೆ ಸಿದ್ದರಾಮಯ್ಯನವರು ಪ್ರತಿಕ್ರಿಯೆಯನ್ನೂ ನೀಡಿಲ್ಲ. ಅವರ ಸುತ್ತಮುತ್ತಲಿರುವ 60 ಶಾಸಕರು ಯುಜಿ ಕೇಬಲ್ ಕಾಮಗಾರಿಗೆ ಲಂಚ ಪಡೆದಿದ್ದು ವಾಹಿನಿಯೊಂದರ ಸ್ಟ್ರಿಂಗ್ ಆಪರೇಷನ್‌ನಲ್ಲಿ ಬಯಲಾಗಿದೆ. ಹರಿಶ್ಚಂದ್ರರ ರೀತಿ ಭಾಷಣ ಮಾಡುವುದು ಬಿಟ್ಟು ಈ ಪ್ರಕರಣಗಳ ತನಿಖೆಗೆ ಒತ್ತಾಯಿಸಲಿ ಎಂದರು.

■ **ದೊಡ್ಡ ಅಲೆಮಾರಿ:** ಈ ವಿಚಾರಗಳಿಗಾಗಿಯೇ ಚಾಮುಂಡೇಶ್ವರಿ ಕ್ಷೇತ್ರದ ಜನ ಸಿದ್ದರಾಮಯ್ಯನವರನ್ನು ಸೋಲಿಸಿದರು. ಬಾದಾಮಿಯಲ್ಲೂ ಸೋತಿದ್ದರೆ ಅವರ ರಾಜಕೀಯ ಭವಿಷ್ಯವೇ ಕೊನೆಯಾಗುತ್ತಿತ್ತು. ಅವರೇನು ದೊಡ್ಡ ಲೀಡರ್ ಅಲ್ಲ, ಅಲೆಮಾರಿ. ಚಾಮುಂಡೇಶ್ವರಿ, ಕೋಲಾರದಲ್ಲಿ ಅಡ್ಡಾಡಿ ಈಗ ಪುತ್ರನ ಕ್ಷೇತ್ರ ವರುಣಾಗೆ ಬಂದು ಅಪಹಾಸ್ಯಕ್ಕೆ ಗುರಿಯಾಗಿದ್ದಾರೆ. ಒಂದು ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆದ್ದರೆ ಅವರನ್ನು ನಾಯಕ ಎನ್ನಬಹುದು. ಎರಡು ಕಡೆ ಸ್ಪರ್ಧಿಸಿದರೆ ಅವರಿಗೆ ಶಕ್ತಿ ಇಲ್ಲ ಎಂದರ್ಥ. ಅವರು ಕೋಲಾರದಲ್ಲಿ ಸ್ಪರ್ಧಿಸುವುದಿಲ್ಲ ಎಂದು ಬಹಳ ಹಿಂದೆಯೇ ಹೇಳಿದ್ದೆ. ಒಂದು ವೇಳೆ 2 ಕ್ಷೇತ್ರದಲ್ಲಿ ಸ್ಪರ್ಧಿಸಿದರೂ ಎರಡೂ ಕಡೆ ಸೋಲುತ್ತಾರೆ ಎಂದು ಅಭಿಪ್ರಾಯಿಸಿದರು.

■ **ಜೈಲಿಗೆ ಹೋಗಲಿದ್ದಾರೆ:** ಸಿದ್ಧರಾಮಯ್ಯನವರ ವಿರುದ್ಧ 74 ಕೇಸ್‌ಗಳಿದ್ದು ಅವುಗಳನ್ನು ಎದುರಿಸಲು ಮೂರ್‍ನಾಲ್ಕು ವರ್ಷಗಳೇ ಬೇಕು. ಅವರು ಖಂಡಿತ ಜೈಲಿಗೆ ಹೋಗುತ್ತಾರೆ. ಒಳ ಮೀಸಲಾತಿ ಕಲ್ಪಿಸುವಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ನಾಯಕರು ವಿಫಲರಾಗಿದ್ದರು. ಅದನ್ನು ಬಿಜೆಪಿ ಸರ್ಕಾರ ಮಾಡಿ ತೋರಿಸಿದೆ. ಕರ್ನಾಟಕ ಹೊರತು ಕೊರಚ, ಕೊರಮ, ಬಂಜಾರ, ಬೋವಿ ಸಮಾಜಗಳನ್ನು ಇಡೀ ದೇಶದಲ್ಲಿ ಎಲ್ಲಿಯೂ ಎಸ್ಸಿಗೆ ಸೇರಿಸಿಲ್ಲ. ಮುಸ್ಲಿಂ ಸೇರಿದಂತೆ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ಮೀಸಲಾತಿ ವಿಂಗಡಿಸಲಾಗಿದೆ. ಆದರೆ ಕಾಂಗ್ರೆಸ್ ನಾಯಕರ ಚಿತಾವಣೆ, ತಪ್ಪು ಸಂದೇಶದಿಂದ ಆ ಸಮುದಾಯದವರು ಪ್ರತಿಭಟನೆ ನಡೆಸಿದ್ದಾರೆ. ಆ ಬಳಿಕ ವಾಸ್ತವ ಸ್ಥಿತಿ ಗೊತ್ತಾಗಿದೆ ಎಂದರು.

■ **ಅಭಿಪ್ರಾಯ ಸಂಗ್ರಹ:** ಮೈಸೂರಿನ 4 ವಿಧಾನ ಸಭಾ ಕ್ಷೇತ್ರಗಳ ಆಕಾಂಕ್ಷಿಗಳ ಬಗ್ಗೆ ಬಹುಕಾಲದಿಂದ ಪಕ್ಷಕ್ಕಾಗಿ ದುಡಿಯುತ್ತಿರುವ ಕೇಡರ್(ಕಾರ್ಯಕರ್ತ)ಗಳಿಂದ ಮತದಾನ ಮಾದರಿಯಲ್ಲಿ ಬ್ಯಾಲೆಟ್ ಮೂಲಕ ಅಭಿಪ್ರಾಯ ಸಂಗ್ರಹಿಸಿದ್ದೇವೆ. ನಾಳೆ ಬೆಂಗಳೂರಿನಲ್ಲಿ ಪರಿಶೀಲಿಸಿ, ನಾಡಿದ್ದು ಸಭೆಯಲ್ಲಿ ಆ ಬಗ್ಗೆ ಚರ್ಚಿಸಿದ ಬಳಿಕ ಹೈಕಮಾಂಡ್‌ಗೆ ವರದಿ ಕಳುಹಿಸಲಾಗುತ್ತದೆ. ನಮ್ಮಲ್ಲಿ ಕೇಡರ್ ಹಾಗೂ ಲೀಡರ್ ಸಮಾನರು. ಅವರ ಅಭಿಪ್ರಾಯಕ್ಕೂ ಸಮಾನ ಮಾನ್ಯತೆ. ಒಟ್ಟಾರೆ ಈ ಬಾರಿ ಚುನಾವಣೆಯಲ್ಲಿ 140–150 ಕ್ಷೇತ್ರಗಳಲ್ಲಿ ಗೆದ್ದು ಸುಭದ್ರ ಸರ್ಕಾರ ನಡೆಸುವುದು ನಿಶ್ಚಿತ ಎಂದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಪದಾಧಿಕಾರಿಗಳಾದ ಸೋಮಸುಂದರ್, ಮಹೇಶ್, ಶಾರದಮ್ಮ, ಡಾ.ಕೆ.ವಸಂತ್‌ಕುಮಾರ್ ಮತ್ತಿತರರು ಹಾಜರಿದ್ದರು.

ಧ್ರುವನಾರಾಯಣ್ ಮೇಲೆ ಸಿದ್ಧರಾಮಯ್ಯ ವಕ್ರದೃಷ್ಟಿ ಇತ್ತು

ನಾನು ಕಾಂಗ್ರೆಸ್‌ನಲ್ಲಿದ್ದವನು. ಧ್ರುವನಾರಾಯಣ್ ಹಾಗೂ ನಾನು ಬಹಳ ಆತ್ಮೀಯರು. ಬೇರೆ ಪಕ್ಷಗಳಲ್ಲಿದ್ದರೂ ತಿಂಗಳಲ್ಲಿ ಒಮ್ಮೆ ಅಥವಾ ಎರಡು ಬಾರಿ ಕರೆ ಮಾಡಿ ಮಾತನಾಡುತ್ತಿದ್ದರು. 2008ರಲ್ಲಿ ಕೊಳ್ಳೆಗಾಲಕ್ಕೆ ಟಿಕೆಟ್ ದೊರೆತ ಹಿನ್ನೆಲೆಯಲ್ಲಿ ಸಿದ್ದರಾಮಯ್ಯನವರ ಬೆಂಬಲ ಕೋರಲು ಹೋದಾಗ, 'ನೋಡಯ್ಯಾ, ನೀನು ನನ್ನ ಸೆಲೆಕ್ಷನ್ ಅಲ್ಲ. ನಾನು ಜಯಣ್ಣನಿಗೆ ಶಿಫಾರಸು ಮಾಡಿದ್ದೆ. ನಿನಗೆ ಸಪೋರ್ಟ್ ಮಾಡಲು ಆಗುವುದಿಲ್ಲ' ಎಂದು ನೇರವಾಗಿ ಹೇಳಿದ್ದರಂತೆ. ಆಗಿನಿಂದಲೂ ಧ್ರುವನಾರಾಯಣ್ ಮೇಲೆ ವಕ್ರದೃಷ್ಟಿ ಇತ್ತು. ನಮಗೆ ಉದ್ಧಾರವಾಗಲು ಬಿಡುವುದಿಲ್ಲ ಎಂದು ಧ್ರುವನಾರಾಯಣ್ ಹೇಳುತ್ತಿದ್ದರು. ಅವರು ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದನ್ನೂ ಸಹಿಸಿರಲಿಲ್ಲ. ನಂಜನಗೂಡಿನಲ್ಲಿ ಹೆಚ್.ಸಿ. ಮಹದೇವಪ್ಪನಿಗೆ ಹಾಗೂ ತಿ.ನರಸೀಪುರದಲ್ಲಿ ಮಹದೇವಪ್ಪ ಪುತ್ರನಿಗೆ ಟಿಕೆಟ್ ಕೊಡಿಸಲು ಪ್ರಯತ್ನಿಸಿದರು. ಧ್ರುವನಾರಾಯಣ್ ನಿಧನದ ಬಳಿಕ ಅವರ ಪುತ್ರನ ಭೇಟಿ ಮಾಡಿದ ಮಹದೇವಪ್ಪ, ನಂಜನಗೂಡು ಕ್ಷೇತ್ರವನ್ನು ಬಿಟ್ಟುಕೊಡ್ತೀನಿ ಎಂದಿದ್ದಾರೆ. ಅಂದರೆ ಅದಾಗಲೇ ಆ ಕ್ಷೇತ್ರವನ್ನು ಕಬ್ಜ ಮಾಡಿದ್ದರು ಎಂದರ್ಥ. ಧ್ರುವನಾರಾಯಣ್ ಸಾವಿಗೂ ಸಿದ್ದರಾಮಯ್ಯ ಕಾರಣ ಎಂದು ಇಲ್ಲಿನ ಮುಖಂಡರೇ ಆಕ್ರೋಶ ವ್ಯಕ್ತಪಡಿಸಿದ್ದಾರೆ ಎಂದು ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ನಾನು ಬಿಜೆಪಿಯಲ್ಲಿ ಸಂತೋಷವಾಗಿದ್ದೇನೆ



ಬೆಂಗಳೂರು, ಮಾ.31(ಕೆಎಂಶಿ)– ಕಾಂಗ್ರೆಸ್ ಸೇರ್ಪಡೆಗೊಳ್ಳುತ್ತಾರೆ ಎಂಬ ವದಂತಿಯನ್ನು ಅಬಕಾರಿ ಸಚಿವ ಕೆ.ಗೋಪಾಲಯ್ಯ ಅಲ್ಲಗಳೆದಿದ್ದಾರೆ.

ಚುನಾವಣಾ ಸಮಯದಲ್ಲಿ ನಾಯಕರಲ್ಲಿ ಮತ್ತು ಪಕ್ಷದಲ್ಲಿ ಗೊಂದಲ ಹುಟ್ಟಿಸಲು ಇಂತಹ ಸುಳ್ಳು ಸುದ್ದಿಗಳು ಹಬ್ಬುತ್ತವೆ. ಇದನ್ನು ನಂಬಬೇಡಿ ಎಂದಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವದಂತಿಗೆ ಸ್ಪಷ್ಟನೆ ನೀಡುವ ಉದ್ದೇಶದಿಂದಲೇ ನಾನು ಪತ್ರಕರ್ತರ ಮುಂದೆ ಬಂದಿದ್ದೇನೆ. ಕಳೆದ ಆರು ತಿಂಗಳಿಂದ ಕ್ಷೇತ್ರದಲ್ಲಿ ಬಿಜೆಪಿ ಚಿನ್ಹೆಯಡಿ ನಿರಂತರ ಪ್ರಚಾರ ಕೈಗೊಂಡಿದ್ದೇನೆ.

ಬಿಜೆಪಿಗೆ ಸೇರಿದ ನಂತರ ನನಗೆ ಪಕ್ಷ ಉತ್ತಮ ಸ್ಥಾನಮಾನ ನೀಡಿದೆ. ನನ್ನನ್ನು ಗೌರವದಿಂದ ನೋಡಿಕೊಂಡಿದ್ದು, ಮತ್ತೆ ಚುನಾವಣಾ ಕಣಕ್ಕಿಳಿಯಲು ಅವಕಾಶ ಮಾಡಿಕೊಡಲಿದೆ. ಇಂತಹ ಸಂದರ್ಭದಲ್ಲಿ ಬಿಜೆಪಿ ತೊರೆದು, ನಾನೇಕೆ ಕಾಂಗ್ರೆಸ್ ಸೇರಲಿ ಎಂದು ಪ್ರಶ್ನಿಸಿದರು. ನನ್ನನ್ನೂ ಸೇರಿದಂತೆ ಕೆಲವು ಸಚಿವರು ಕಾಂಗ್ರೆಸ್ ಸೇರುತ್ತಾರೆ ಎಂಬ ಅಪಪ್ರಚಾರ ಬಹಳ ದಿನಗಳಿಂದ ನಡೆಯುತ್ತಿದೆ. ಇಂತಹ ಗೊಂದಲಗಳಿಗೆ ಇತಿಶ್ರೀ ಹಾಡಬೇಕು ಎಂದರು.

ಪ್ರತಿದಿನ ಮುಖಂಡರ ಜೊತೆ ಬಿಜೆಪಿಗೆ ಮತವನ್ನು ಕೇಳುತ್ತಿದ್ದೇವೆ. ಮನೆ ಮನೆಗೆ ಭೇಟಿ ನೀಡಿ ಹಾಗೂ ಬೂತ್ ಮಟ್ಟದ ಸಭೆಗಳನ್ನು ನಡೆಸುತ್ತಿದ್ದೇವೆ. ಬಿಜೆಪಿ ನನಗೆ ಒಂದು ದೊಡ್ಡ ಗೌರವ ನೀಡಿದೆ. ನಾನು ಇರುವವರೆಗೂ ಬಿಜೆಪಿಯಲ್ಲಿ ಇರುತ್ತೇನೆ. ಬೇರೆ ಯಾವ ಪಕ್ಷಕ್ಕೂ ಹೋಗುವುದಿಲ್ಲ ಎಂದು ತಿಳಿಸಿದರು. ಕ್ಷೇತ್ರದ ಜನರಿಗಾಗಿ ನಾನು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇನೆ. ನೂರಕ್ಕೆ ನೂರು ಭಾಗ ನನಗೆ ಆತ್ಮವಿಶ್ವಾಸ ಇದೆ. ಜನರು ನನಗೆ ನೀಡುತ್ತಿರುವ ಗೌರವ ನಾನು ನಿರೀಕ್ಷೆ ಮಾಡಿರಲಿಲ್ಲ ಉತ್ತಮ ಮಟ್ಟದಲ್ಲಿ ಬೆಂಬಲವನ್ನು ವ್ಯಕ್ತಪಡಿಸುತ್ತಿದ್ದಾರೆ ಎಂದರು.

ಬೊಮ್ಮಾಯಿ ಕಾರನ್ನು ಶೋಧಿಸಿದ ಚುನಾವಣಾಧಿಕಾರಿಗಳು!



ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ದೇವಸ್ಥಾನಕ್ಕೆ ತೆರಳುತ್ತಿದ್ದಾಗ ಕಾರನ್ನು ತಡೆದ ಚುನಾವಣಾಧಿಕಾರಿಗಳು ಶುಕ್ರವಾರ ಪರಿಶೀಲನೆ ನಡೆಸಿದರು. ಮೇ 10 ರಂದು ಚುನಾವಣೆ ನಡೆಯಲಿರುವ ರಾಜ್ಯದಲ್ಲಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದೆ. ಅಧಿಕಾರಿಗಳು ವಾಹನ ತಪಾಸಣೆ ಮಾಡುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಮೂಲಗಳ ಪ್ರಕಾರ, ಬುಧವಾರ ಚುನಾವಣಾ ವೇಳಾಪಟ್ಟಿ ಪ್ರಕಟವಾದ ದಿನದಂದು ತಮ್ಮ ಅಧಿಕೃತ ಕಾರನ್ನು ಸರ್ಕಾರಕ್ಕೆ ಒಪ್ಪಿಸಿದ ಬೊಮ್ಮಾಯಿ ಅವರು ಖಾಸಗಿ ಕಾರಿನಲ್ಲಿ ಘಾಟಿ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ತೆರಳುತ್ತಿದ್ದರು. ಈ ವೇಳೆ ಹೊಸಹುಡ್ಯ ಚೆಕ್ ಪೋಸ್ಟ್‌ನಲ್ಲಿ ಅದನ್ನು ನಿಲ್ಲಿಸಲಾಯಿತು. ಆಕ್ಷೇಪಾರ್ಹವಾದ ಏನೂ ಕಂಡುಬಂದಿಲ್ಲದ ಕಾರಣ ಅಧಿಕಾರಿಗಳು ವಾಹನವು ತೆರಳಲು ಅನುಮತಿ ನೀಡಿದರು ಮತ್ತು ಮುಖ್ಯಮಂತ್ರಿ ತಮ್ಮ ಪ್ರಯಾಣವನ್ನು ಮುಂದುವರೆಸಿದರು ಎಂದು ಮೂಲಗಳು ತಿಳಿಸಿವೆ.

ಮಹಿಳಾ ಉದ್ಯಮಿಗಳಿಗೆ ಯಶಸ್ವಿ ತರಬೇತಿ ಕಾರ್ಯಾಗಾರ



ಮೈಸೂರು, ಮಾ.31–ಕುವೆಂಪು ನಗರದ ಎಜುಕೇರ್ ಐಟಿಇಎಸ್ ಸಂಸ್ಥೆಯ ಆವರಣದಲ್ಲಿ ವುಮನ್ ಕ್ಯಾನ್ ಸೇವಾ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಎರಡು ದಿನದ ಕಂಪ್ಯೂಟರ್ ಸಾಕ್ಷರತಾ ತರಬೇತಿ ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ಮಹಿಳಾ ಉದ್ಯಮಿಗಳು ಭಾಗವಹಿಸಿ ತರಬೇತಿ ಪಡೆದರು. ತರಬೇತಿ ವೇಳೆ ಕಂಪ್ಯೂಟರ್ ಬಳಕೆಯ ಸಾಮಾನ್ಯ ಜ್ಞಾನದೊಂದಿಗೆ ಆರ್ಥಿಕ ವ್ಯವಹಾರಗಳನ್ನು ಹೇಗೆ ನಡೆಸಬೇಕು ಎಂಬುದರ ಬಗ್ಗೆ ಮಾಹಿತಿ ನೀಡಲಾಯಿತು.

ಕಾರ್ಯಾಗಾರದ ಸಮಾರೋಪ ಸಮಾರಂಭಕ್ಕೆ ಆಗಮಿಸಿದ್ದ ಭಂತೇ ಬೋಧಿದತ್ತ ತೇರಾ ಮಾತನಾಡಿ, ಪ್ರಸ್ತುತ ಡಿಜಿಟಲ್ ಯುಗದಲ್ಲಿ ಪ್ರತಿಯೊಬ್ಬರಿಗೂ ಕಂಪ್ಯೂಟರ್ ಜ್ಞಾನ ಅವಶ್ಯಕವಾಗಿದ್ದು, ಉದ್ಯಮ ಯಶಸ್ವಿಗೆ ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಮಹಿಳಾ ಉದ್ಯಮಿಗಳಿಗೆ ತರಬೇತಿ ಕಾರ್ಯ ನಡೆಸುತ್ತಿರುವುದು ಉತ್ತಮ ಬೆಳವಣಿಗೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ವಿವಿಯ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಪ್ರೊ.ಎಂ.ಎಸ್. ಸಪ್ನ ನಾಯಕ್, ಉದ್ಯಮ ನಿರ್ವಹಣೆಗೆ ಕಂಪ್ಯೂಟರ್ ಜ್ಞಾನ ಅತ್ಯಾವಶ್ಯಕವಾಗಿದ್ದು, ಉದ್ಯಮ ಯಶಸ್ವಿಗೆ ಅತ್ಯಂತ ಅವಶ್ಯಕವಾಗಿದೆ. ಕಂಪ್ಯೂಟರ್ ಜ್ಞಾನ ವಿರದ ಮಹಿಳಾ ಉದ್ಯಮಿಗಳಿಗೆ ವುಮನ್ ಕ್ಯಾನ್ ಸಂಸ್ಥೆಯು ಉಚಿತ ತರಬೇತಿ ಆಯೋಜಿಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವುಮನ್ ಕ್ಯಾನ್ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷೆ ರಚನಾ ಮಹೇಶ್ ಮಾತನಾಡಿ, ಮಹಿಳಾ ಉದ್ಯಮಿಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಈ ರೀತಿಯಲ್ಲಿ ಮಹಿಳಾ ಉದ್ಯಮಿಗಳಿಗೆ ಅನುಕೂಲವಾಗುವ ಸಾಕಷ್ಟು ತರಬೇತಿ ಕಾರ್ಯಕ್ರಮಗಳನ್ನು ನಮ್ಮ ವುಮನ್‌ಕ್ಯಾನ್ ಸಂಸ್ಥೆಯಿಂದ ನೀಡುವ ಉದ್ದೇಶವಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ತರಬೇತಿ ಪಡೆದ 65 ವರ್ಷದ ಮಹಿಳಾ ಉದ್ಯಮಿಗಳಾದ ಶಾಂತಕುಮಾರಿ, ಭಾಗೀರಥಿ ಅವರು ತರಬೇತಿಯ ಬಗ್ಗೆ ತಮ್ಮ ಅಭಿಪ್ರಾಯ ಅನಿಸಿಕೆ ಹಂಚಿಕೊಂಡರು. ಕಾರ್ಯಕ್ರಮದಲ್ಲಿ ವುಮನ್‌ಕ್ಯಾನ್ ಸಂಸ್ಥೆಯ ಶೋಭಾ, ನಂದಿನಿ, ದಕ್ಷ್ ಇದ್ದರು.

ಕವಿ ಮಾಗಿದಷ್ಟು ಕವಿತೆ ಬಾಗುತ್ತದೆ

ಪ್ರಾಂಶುಪಾಲ ಕಾಡ್ನೂರು ಶಿವೇಗೌಡರ ಮೂರು ಕವನ ಸಂಕಲನ ಬಿಡುಗಡೆ; ಸೇವೆಯಿಂದ ನಿವೃತ್ತರಾದ ಶಿವೇಗೌಡರಿಗೆ ಬೀಳ್ಕೊಡುಗೆ

ಸಾಹಿತಿ ಬನ್ನೂರು ರಾಜು ಅಭಿಮತ



ಮೈಸೂರು: ಯಾವುದೇ ರೀತಿಯ ಕಾವ್ಯಕ್ಕೂ ಒಂದು ಹದವಿದ್ದು ಕವಿಯಾದವನು ಕವಿತೆ ಕಟ್ಟುವ ಮೊದಲು ತಾನೂ ಹದಗೊಂಡು ಮಾಗಬೇಕು. ಆಗ ಕವಿತೆ ಬಾಗುತ್ತದೆಂದೂ.ವಿಶೇಷವಾಗಿ ಹೇಗೆ ಬೇಕಾದರೂ ಬರೆಯಬಲ್ಲ ಛಾತಿ ಹಾಗೂ ಪದಗಳನ್ನು ಬೆಂಡೆತ್ತುವ ಕಲೆ ಕವಿಗಿರಬೇಕಾಗಿದ್ದು ಇದನ್ನು'ಕಾಶಿಗೌ' ಕಾವ್ಯನಾಮದ ಕವಿ ಕಾಡ್ನೂರು ಶಿವೇಗೌಡರು ಸಿದ್ಧಿಸಿಕೊಂಡಿದ್ದಾರೆಂದು ಸಾಹಿತಿ ಬನ್ನೂರು ಕೆ.ರಾಜು ಹೇಳಿದರು.

ನಗರದ ಶಿವರಾಂಪೇಟೆಯ ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ವತಿಯಿಂದ ದೇವರಾಜ ಮೊಹಲ್ಲಾದಲ್ಲಿರುವ ದೇವರಾಜ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ನಡೆದ 'ಕಾಶಿಗೌ' ಕಾವ್ಯನಾಮದ ಕವಿ ಕಾಡ್ನೂರು ಶಿವೇಗೌಡರ ಆರದ ಅರುವತ್ತು, ಮನದಾಳದ ನಾದ, ಒಡಲ ಮಾತು, ಒಳಗೊಂಡಂತೆ ಮೂರು ಕವನ ಸಂಕಲಗಳ ಲೋಕಾರ್ಪಣೆ ಮತ್ತು ಪ್ರಸ್ತುತ ವಯೋನಿವೃತ್ತಿ ಹೊಂದಿದ ಕಾಲೇಜಿನ ಪ್ರಾಂಶುಪಾಲರೂ ಆದ ಶಿವೇಗೌಡರ ಬೀಳ್ಕೊಡುಗೆ, ಶುಭ ಹಾರೈಕೆ ಸಮಾರಂಭದಲ್ಲಿ ಭಾಗವಹಿಸಿ ಮೂರೂ ಕೃತಿಗಳ ಬಗ್ಗೆ ಮಾತನಾಡಿದ ಅವರು, ಈ ಮೂರೂ ಕೃತಿಗಳು ವಿದ್ಯಾರ್ಥಿಗಳ ನಾಡಿ ಮಿಡಿತವನ್ನು ಅದರಲ್ಲೂ ಬಹು ಮುಖ್ಯವಾಗಿ ಹಳ್ಳಿಗಾಡಿನ ಮಣ್ಣಿನ ಮಕ್ಕಳ ಅರಿವಿನ ಉಪನ್ಯಾಸಕರಾಗಿ, ಪ್ರಬುದ್ಧ ಬೋಧಕರಾಗಿ, ಪ್ರಾಂಶುಪಾಲರಾಗಿ ಸುಮಾರು ಮೂರೂವರೆ ದಶಕಗಳಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿರುವ ಶಿವೇಗೌಡರ ಅನುಭವ ಮತ್ತು ಅನುಭಾವದ ದೇಸೀ ಕಾವ್ಯಕ್ಕೆ ಸಾಕ್ಷಿಗಲ್ಲುಗಳೆಂದರು.

ಇದಕ್ಕೂ ಮುನ್ನ ಮೈಸೂರು ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ನಾಗಮಲ್ಲೇಶ್ ಅವರು, ಆರದ ಅರುವತ್ತು,ಮನದಾಳದ ನಾದ, ಒಡಲ ಮಾತು ಮೂರೂ ಕವನ ಸಂಕಲನಗಳನ್ನು ಲೋಕಾರ್ಪಣೆಗೊಳಿಸಿ ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿರುವ ಕವಿ ಶಿವೇಗೌಡರ ಕಾವ್ಯ ಸಾಧನೆಯನ್ನು ಶ್ಲಾಘಿಸಿ ಅಭಿನಂದಿಸಿದರು. ಪ್ರಕಾಶಕ ಡಿ.ಎನ್. ಲೋಕಪ್ಪ, ಮಹಾಜನ ಕಾಲೇಜಿನ ಉಪನ್ಯಾಸಕರಾದ ಕೋಟೆ ವೆಂಕಟೇಶ್, ಡಾ.ಎಚ್.ಎಂ. ಸ್ವಾಮಿಗೌಡ, ಡಾ.ಎಂ.ಬಾಲರಾಜು, ಹಿರಿಯ ಉಪನ್ಯಾಸಕಿ ಡಾ.ನಾಗಮ್ಮ, ಮೈಸೂರು ಮಹಾನಗರ ಪಾಲಿಕೆಯ ಸದಸ್ಯರೂ ಆದ ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾದ ಎಂ.ಪ್ರಮೀಳಾ ಭರತ್, ಹಿರಿಯ ಸದಸ್ಯರಾದ ವಿಘ್ನೇಶ್ವರ ವಿ. ಭಟ್, ಫೋಟೋ ರಾಜಗೋಪಾಲ್, ಹಾಗೂ ವಿವಿಧ ಕಾಲೇಜುಗಳ ಪ್ರಾಂಶುಪಾಲರು ಮತ್ತು ಉಪನ್ಯಾಸಕರಾದ ಡಾ. ರಮಾನಂದ್, ಸುದೀಪ್, ಶಿವಕುಮಾರ್, ಆನಂದ್, ಕೃಷ್ಣ, ಕೋಟೆ ವೆಂಕಟೇಶ್, ಎಂ.ವಿ. ಸುನೀತಾ, ಉಷಾ ಎಸ್. ಗೋಂದಳಿ, ಡಾ.ವಿ.ಶ್ರೀಮತಿ, ಡಿ.ಪ್ರಭಾವತಿ, ಎ.ಬಿ. ಸಬಿತಾ, ಎಂ.ಕೆ.ರಾಧಾ, ಸುಶೀಲಾ ವಿ.ಭಟ್ ಕುರ್ಸೆ, ವಿ.ಆನಂದ ಕುಮಾರ್, ಟಿ.ಎಂ. ನಾಗೇಶ್, ಪುಷ್ಪಲತಾ, ಎ.ಎಸ್.ಜಗದೀಶ್, ಎಂ.ಬಾಲರಾಜು, ಆನಂದ್ ಕುಮಾರ್, ಪ್ರಭುಸ್ವಾಮಿ, ಕೆ.ಇ. ಪುಟ್ಟಸ್ವಾಮಿಗೌಡ ಇನ್ನಿತರರು ಉಪಸ್ಥಿತರಿದ್ದರು. ಇದೇ ವೇಳೆ ಇಂದೇ ವಯೋನಿವೃತ್ತಿ ಹೊಂದಿದ ಕಾಲೇಜಿನ ಹಿರಿಯ ಉಪನ್ಯಾಸಕಿ ಸುಶೀಲ ವಿ.ಭಟ್ ಕುರ್ಸೆ ಅವರನ್ನೂ ಅಭಿನಂದಿಸಿ ಶುಭ ಹಾರೈಸಿ ಬೀಳ್ಕೊಡಲಾಯಿತು.

ಆಧಾರ್–ಪಾನ್ ಕಾರ್ಡ್ ಲಿಂಕ್ ಸಾವಿರ ರೂ. ದಂಡಕ್ಕೆ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಆಕ್ಷೇಪ



ಮೈಸೂರು,ಮಾ.31(ಪಿಎಂ)– ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ಲಿಂಕ್ ಮಾಡಿಸಲು ಸಾವಿರ ರೂ. ದಂಡ ವಿಧಿಸುವ ಮೂಲಕ ಕೇಂದ್ರ ಸರ್ಕಾರ, ಬಡ ಜನತೆಯ ಗಾಯದ ಮೇಲೆ ಬರೆ ಎಳೆದಿದೆ ಎಂದು ಮೈಸೂರು ಮಹಾನಗರ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಲಿಂಕ್ ಮಾಡಲು ಜೂನ್ 30ರವರೆಗೆ ಕಾಲಾವಧಿ ವಿಸ್ತರಣೆ ಮಾಡಿರುವುದು ಕೇಂದ್ರ ಸರ್ಕಾರದ ಕಣ್ಣೊರೆಸುವ ತಂತ್ರವಷ್ಟೆ, ಸಾವಿರ ರೂ. ದಂಡ ವಿಧಿಸುವ ಮೂಲಕ ಈಗಾಗಲೇ ಬೆಲೆ ಏರಿಕೆಯ ಸಂಕಷ್ಟದಲ್ಲಿರುವ ಜನಸಾಮಾನ್ಯರಿಗೆ ಹೊರೆಯಾಗುವಂತೆ ಮಾಡಲಾಗಿದೆ. ಬಡ ಮತ್ತು ಮಧ್ಯಮ ವರ್ಗದವರು ಬ್ಯಾಂಕ್ ವಹಿವಾಟು ನಡೆಸುವುದೇ ಕಡಿಮೆ. ಅವರಿಗೆ ಹೊರೆಯಾಗುವಂತೆ ಸಾವಿರ ರೂ. ದಂಡ ವಿಧಿಸಿರುವುದು ಅವೈಜ್ಞಾನಿಕ. ಚುನಾವಣೆ ಸಂದರ್ಭದಲ್ಲಿ ಈ ರೀತಿ ಜನ ವಿರೋಧಿ ಧೋರಣೆ ಅನುಸರಿಸಿ ಕೇಂದ್ರ ಬಿಜೆಪಿ ಸರ್ಕಾರ ಜನಸಾಮಾನ್ಯರ ಕೆಂಗಣ್ಣಿಗೆ ಗುರಿಯಾಗಿದೆ. ಈ ಕೂಡಲೇ ಸಾವಿರ ರೂ. ದಂಡದ ಕ್ರಮ ಕೈಬಿಡಬೇಕು ಎಂದು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

ಜಿಲ್ಲಾ ಚುನಾವಣಾಧಿಕಾರಿಗಳ ಅಧೀನಕ್ಕೆ ಸರ್ಕಾರಿ ಅತಿಥಿ ಗೃಹಗಳು

ಮೈಸೂರು, ಮಾ.31– ಮಾದರಿ ನೀತಿ ಸಂಹಿತೆ ಜಾರಿಯಾಗಿರುವುದರಿಂದ ಜಿಲ್ಲೆಯಲ್ಲಿ ಸರ್ಕಾರದ ಅಧೀನದಲ್ಲಿರುವ ಅತಿಥಿ ಗೃಹಗಳನ್ನು ಜಿಲ್ಲಾ ಚುನಾವಣಾಧಿಕಾರಿಗಳ ಅಧೀನಕ್ಕೆ ಪಡೆಯಲಾಗಿದೆ.

ಸರ್ಕಾರಿ ಅತಿಥಿ ಗೃಹಗಳಲ್ಲಿ ರಾಜಕೀಯ ಉದ್ದೇಶದ ಸಭೆಗಳನ್ನು ಏರ್ಪಡಿಸುವುದನ್ನು ನಿಷೇಧಿಸಲಾಗಿದ್ದು, ಅತಿಥಿ ಗೃಹಗಳ ಆವರಣದಲ್ಲಿ ಯಾವುದೇ ರೀತಿಯ ಸಭೆ ಸಮಾರಂಭಗಳನ್ನು ನಡೆಸುವುದು, ಅನಧಿಕೃತ ವಾಹನಗಳ ನಿಲುಗಡೆ ಮಾಡುವುದು ಹಾಗೂ ತಾತ್ಕಾಲಿಕ ವಿಶ್ರಾಂತಿಗಾಗಿ ಅತಿಥಿ ಗೃಹಗಳ ಕೊಠಡಿಗಳನ್ನು ನೀಡುವುದನ್ನು ಸಹ ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಮೆರಿಕ: ಭಾರತ ಮೂಲದ ರಿಚರ್ಡ್ ವರ್ಮಾ ಉಪ ಕಾರ್ಯದರ್ಶಿಯಾಗಿ ನೇಮಕ



ವಾಷಿಂಗ್ಟನ್: ಭಾರತೀಯ ಮೂಲದ ಅಮೆರಿಕದ ರಾಜತಾಂತ್ರಿಕ ಅಧಿಕಾರಿ ರಿಚರ್ಡ್ ವರ್ಮಾ ಅವರನ್ನು ಅಮೆರಿಕದ ವಿದೇಶಾಂಗ ಸಚಿವಾಲಯದ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗದ ಉಪ ಕಾರ್ಯದರ್ಶಿಯಾಗಿ ನೇಮಕ ಮಾಡಿರುವುದನ್ನು ಅಮೆರಿಕದ ಸೆನೆಟ್ ಖಚಿತಪಡಿಸಿದೆ. ಗುರುವಾರ ಸೆನೆಟ್‌ನಲ್ಲಿ ವರ್ಮಾ ಅವರ ಪರವಾಗಿ 67 ಹಾಗೂ ವಿರೋಧವಾಗಿ 27 ಮತಗಳು ದೊರೆತಿದ್ದವು. ವರ್ಮಾ ಅವರು 2015ರ ಜನವರಿ 16ರಿಂದ 2017ರ ಜನವರಿ 20ರವರೆಗೆ ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿ ಕೆಲಸ ಮಾಡಿದ್ದರು. ಪ್ರಸ್ತುತ ಅವರು ಮಾಸ್ಟರ್‌ಕಾರ್ಡ್‌ನಲ್ಲಿ ಜಾಗತಿಕ ಸಾರ್ವಜನಿಕ ನೀತಿಯ ಮುಖ್ಯಸ್ಥ ಹಾಗೂ ಕಾನೂನು ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಎಸ್‌ಬಿಐ ವಿರುದ್ಧ ತಾರತಮ್ಯ ನೀತಿ ಆರೋಪ

ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಪೆನ್ಷನರ್ಸ್ ಕಮ್ಯೂನ್ ಮೌನ ಪ್ರತಿಭಟನೆ



ಮೈಸೂರು,ಮಾ.31(ಪಿಎಂ)– ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಉದ್ಯೋಗಿಗಳಿಗೆ ನೀಡುವ ಎಲ್ಲಾ ವಿಶೇಷ ಸೌಲಭ್ಯಗಳನ್ನು ಯಾವುದೇ ತಾರತಮ್ಯವಿಲ್ಲದೆ ಈ ಹಿಂದಿನ ಸಹವರ್ತಿ ಬ್ಯಾಂಕುಗಳ (ವಿಲೀನಗೊಂಡ ಬ್ಯಾಂಕ್‌ಗಳು) ಉದ್ಯೋಗಿಗಳು ಹಾಗೂ ನಿವೃತ್ತ ಉದ್ಯೋಗಿಗಳಿಗೂ ನೀಡಬೇಕೆಂದು ಒತ್ತಾಯಿಸಿ ಬೆಂಗಳೂರಿನ ಎಸ್‌ಬಿಐ ಸ್ಥಳೀಯ ಮುಖ್ಯ ಕಚೇರಿ ಎದುರು ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಪೆನ್ಷನರ್ಸ್ ಕಮ್ಯೂನ್ ವತಿಯಿಂದ ಶುಕ್ರವಾರ ಮೌನ ಪ್ರತಿಭಟನೆ ನಡೆಸಲಾಯಿತು.

ವಿಲೀನದ ಸಂದರ್ಭದಲ್ಲಿ ನಿವೃತ್ತಿ ಸೌಲಭ್ಯಗಳೂ ಸೇರಿದಂತೆ ಭಾರತೀಯ ಸ್ಟೇಟ್ ಬ್ಯಾಂಕಿನ ಉದ್ಯೋಗಿಗಳಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನೂ ಯಾವುದೇ ತಾರತಮ್ಯವಿಲ್ಲದೆ ಹಿಂದಿನ ಸಹವರ್ತಿ ಬ್ಯಾಂಕುಗಳ ಉದ್ಯೋಗಿಗಳಿಗೂ ವಿಸ್ತರಿಸಲಾಗುವುದೆಂದು ವ್ಯಾಪಕವಾಗಿ ಪ್ರಚುರಪಡಿಸಲಾಯಿತು. ಆದರೆ ಭಾರತೀಯ ಸ್ಟೇಟ್ ಬ್ಯಾಂಕ್ ಆಡಳಿತವು ತಳೆದ ತನ್ನ ಮಲತಾಯಿ ಧೋರಣೆಯಿಂದ ಸಹವರ್ತಿ ಬ್ಯಾಂಕುಗಳ ನಿವೃತ್ತ ಉದ್ಯೋಗಿಗಳಿಗೆ ಹಲವು ಸೌಲಭ್ಯಗಳು ಈವರೆಗೆ ದೊರೆತಿಲ್ಲ ಎಂದು ಆರೋಪಿಸಿದರು.

2007ಕ್ಕೂ ಮೊದಲು ಏಳು ಬ್ಯಾಂಕುಗಳು, ಭಾರತೀಯ ಸ್ಟೇಟ್ ಬ್ಯಾಂಕಿನ ಸಹವರ್ತಿ ಬ್ಯಾಂಕುಗಳಾಗಿದ್ದರೂ ಸ್ವತಂತ್ರವಾಗಿದ್ದವು. ಈ ಎಲ್ಲಾ ಬ್ಯಾಂಕುಗಳನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಆಯಾಯ ಮಹಾರಾಜರ ಸರ್ಕಾರಗಳು ತಮ್ಮ ರಾಜ್ಯದ ಹಾಗೂ ಜನತೆಯ ಆರ್ಥಿಕ ಅಭಿವೃದ್ಧಿಗಾಗಿ ಸ್ಥಾಪಿಸಿದ ಬ್ಯಾಂಕುಗಳಾಗಿದ್ದವು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಸೇರಿದಂತೆ ದೇಶದ ವಿವಿಧ 7 ಸಹವರ್ತಿ ಬ್ಯಾಂಕುಗಳನ್ನು ಎಸ್‌ಬಿಐ ಜೊತೆ ವಿಲೀನಗೊಳಿಸಲಾಗಿದೆ. ಆದರೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಸೇರಿದಂತೆ ಸಹವರ್ತಿ ಬ್ಯಾಂಕುಗಳಿಗೆ ನೇಮಕಾತಿ ಆಗಿದ್ದವರಿಗೆ ಭಾರತೀಯ ಸ್ಟೇಟ್ ಬ್ಯಾಂಕ್ ಉದ್ಯೋಗಿಗಳಿಗೆ ನೀಡುವ ವಿಶೇಷ ಸವಲತ್ತುಗಳನ್ನು ನೀಡುತ್ತಿಲ್ಲ ಎಂದು ದೂರಿದರು.

ಸಂಘಟನೆಯ ಮೈಸೂರು ಜಿಲ್ಲಾ ಘಟಕದ ಕಾರ್ಯದರ್ಶಿ ಗುರುಮೂರ್ತಿ ಮಾತನಾಡಿ, ಎಸ್‌ಬಿಐನಲ್ಲಿದ್ದು ನಿವೃತ್ತರಾದ ಉದ್ಯೋಗಿಗಳಿಗೆ ನೀಡುವ ವಿಶೇಷ ಸೌಲಭ್ಯಗಳನ್ನು ಸಹವರ್ತಿ ಬ್ಯಾಂಕುಗಳ ನಿವೃತ್ತ ಉದ್ಯೋಗಿಗಳಿಗೆ ನೀಡುತ್ತಿಲ್ಲ. ವಿಲೀನಕ್ಕೂ ಮುನ್ನ ಯಾವುದೇ ತಾರತಮ್ಯವಿಲ್ಲದೆ ಸೌಲಭ್ಯ ನೀಡುವ ಭರವಸೆ ನೀಡಲಾಗಿತ್ತು. ಸ್ಟೇಟ್ ಆಫ್ ಮೈಸೂರ್‌ಗೆ ನೇಮಕಾತಿ ಆಗಿ, ಈಗ ಎಸ್‌ಬಿಐನಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾದರೂ ಎಸ್‌ಬಿಐ ನೌಕರರಿಗೆ ನೀಡುವಂತೆ ಸೌಲಭ್ಯಗಳು ನೀಡುವುದಿಲ್ಲ. ಹೀಗಾಗಿ ಇಂದು ಮೌನ ಪ್ರತಿಭಟನೆ ನಡೆಸಿದ್ದೇವೆ. ಮೈಸೂರಿನಿಂದ 50ಕ್ಕೂ ಹೆಚ್ಚು ಮಂದಿ ಎಸ್‌ಬಿಎಂ ನಿವೃತ್ತ ಉದ್ಯೋಗಿಗಳು ಭಾಗವಹಿಸಿದ್ದೆವು ಎಂದು ತಿಳಿಸಿದರು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಜನರಲ್ ತಿಮ್ಮಯ್ಯ ಅವರ ಮನೆಗಳು

ದೇಶಭಕ್ತರ ಪಾಲಿನ ದೇವಾಲಯಗಳು

ಪದ್ಮಭೂಷಣ ಕೆ.ಎಸ್. ಜನರಲ್ ತಿಮ್ಮಯ್ಯ ಅವರ 117ನೇ ಜನ್ಮದಿನ ಆಚರಣೆ

ಮಡಿಕೇರಿ, ಮಾ.31– ನಗರದ ಸನ್ನಿಸೈಡ್ ಜನರಲ್ ತಿಮ್ಮಯ್ಯ ಮ್ಯೂಸಿಯಂನಲ್ಲಿ ಪದ್ಮಭೂಷಣ ಕೊಡಂದೇರ ಎಸ್. ಜನರಲ್ ತಿಮ್ಮಯ್ಯ ಅವರ 117ನೇ ಜನ್ಮ ದಿನವನ್ನು ಆಚರಿಸಲಾಯಿತು.

ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ್ ರಾಜ್, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಜನರಲ್ ತಿಮ್ಮಯ್ಯ ಫೋರಂ ಸಂಚಾಲಕ ಮೇಜರ್ ಬಿದ್ದಂಡ ನಂದಾ ನಂಜಪ್ಪ ಸೇರಿದಂತೆ ಗಣ್ಯರು ಜನರಲ್ ತಿಮ್ಮಯ್ಯ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ಈ ಸಂದರ್ಭ ಮಾತನಾಡಿದ ಮೇಜರ್ ನಂದಾ ನಂಜಪ್ಪ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಹಾಗೂ ಜನರಲ್ ತಿಮ್ಮಯ್ಯ ಅವರ ಮನೆಗಳು ದೇಶ ಭಕ್ತರ ಪಾಲಿನ ದೇವಾಲಯಗಳಾಗಿವೆ ಎಂದು ಹೆಮ್ಮೆಯಿಂದ ನುಡಿದರು. ಜನರಲ್ ತಿಮ್ಮಯ್ಯ ಅವರು ಸೈಪ್ರಸ್‌ನಲ್ಲಿ ಸೇವೆ ಸಲ್ಲಿಸಿದ್ದ ಹಿನ್ನೆಲೆಯಲ್ಲಿ ಅವರ ಮರಣಾ ನಂತರ ಸೈಪ್ರಸ್ ಸರಕಾರ ಅಂಚೆ ಚೀಟಿ ಹೊರ ತಂದು ವೀರ ಯೋಧನಿಗೆ ಗೌರವ ಸಮರ್ಪಿಸಿದೆ ಎಂದು ಹೇಳಿದರು.

ಭಾರತೀಯ ಅಂಚೆ ಇಲಾಖೆ ಕೋಲ್ಕತ್ತಾದಲ್ಲಿ ಇದೇ ಫೆಬ್ರವರಿ 4ರಂದು



ಜನರಲ್ ತಿಮ್ಮಯ್ಯ ಅವರ ಅಂಚೆ ಚೀಟಿ ಬಿಡುಗಡೆ ಮಾಡಿದ್ದು, ಕುಮಾಂವ್ರೋ ರೆಜಿಮೆಂಟ್‌ನ ಹಿರಿಯ ಸೈನ್ಯಾಧಿಕಾರಿಗಳು ಅವರು ಅಂಚೆ ಚೀಟಿಯನ್ನು ಲೋಕಾರ್ಪಣೆಗೊಳಿಸಿದ್ದಾರೆ ಎಂದು ಮಾಹಿತಿ ನೀಡಿದರಲ್ಲದೇ, ಮುಂದಿನ ದಿನಗಳಲ್ಲಿ ಇದೇ ಅಂಚೆ ಚೀಟಿಯನ್ನು ಕೊಡಗಿನಲ್ಲಿಯೂ ಬಿಡುಗಡೆ ಮಾಡಲು ಫೋರಂ ಕುಮಾಂವ್ರೋ ರೆಜಿಮೆಂಟ್ ಉನ್ನತಾಧಿಕಾರಿಗಳಿಗೆ ಮನವಿ ಮಾಡಿದೆ ಎಂದು ಹೇಳಿದರು.

ಸನ್ನಿಸೈಡ್ ಎಂಬ ಮ್ಯೂಸಿಯಂ ಕೇವಲ ಮನೆಯಲ್ಲ, ಅದು ಜನರಲ್ ತಿಮ್ಮಯ್ಯ ಅವರ ಇತಿಹಾಸ ಮತ್ತು ಭಾರತೀಯ ಸೇನೆಯ ಇತಿಹಾಸವನ್ನು ಪ್ರತಿಬಿಂಬಿಸುತ್ತದೆ. ಇಲ್ಲಿರುವ ಪ್ರತಿ ಕೋಣೆ ಸೈನಿಕನ ಬದುಕಿನ ಕಥೆ ಹೇಳುತ್ತದೆ ಎಂದು ನುಡಿದರು. ಸನ್ನಿಸೈಡ್ ಅನ್ನು ಜನರಲ್ ತಿಮ್ಮಯ್ಯ ಮ್ಯೂಸಿಯಂ ಆಗಿ ಪರಿವರ್ತಿಸಬೇಕೆಂಬ ಬೇಡಿಕೆ ಹಲವು ದಶಕಗಳಿಂದ ಜಿಲ್ಲೆಯ ಜನರ ಮನಸಿನಲ್ಲಿತ್ತು. ಭಾರತದ ರಾಷ್ಟ್ರಪತಿ ರಮನಾಥ್ ಕೋವಿಂದ ಅವರು 2021ರ ಫೆಬ್ರವರಿ 6ರಂದು ಅಧಿಕೃತವಾಗಿ ಲೋಕಾರ್ಪಣೆ ಮಾಡುವ ಮೂಲಕ ಆ ಬೇಡಿಕೆಯನ್ನು ಈಡೇರಿಸಿದ್ದಾರೆ ಎಂದು ಮೇಜರ್ ನಂದಾ ನಂಜಪ್ಪ ಸ್ಮರಿಸಿದರು. 37ನೇ ಕೂರ್ಗ್ ರೆಜಿಮೆಂಟ್‌ನ ಅಧಿಕಾರಿಗಳು ಮ್ಯೂಸಿಯಂಗೆ ಭೇಟಿ ನೀಡಿದ ಸಂದರ್ಭ ಸುಂದರವಾದ 'ಕೂರ್ಗ್ ರೆಜಿಮೆಂಟ್ ವಾರಿಯರ್' ಪ್ರತಿಮೆಯನ್ನು ಮ್ಯೂಸಿಯಂಗೆ ಕೊಡುಗೆಯಾಗಿ ನೀಡಿದ್ದಾರೆ. ಅದನ್ನು ಮ್ಯೂಸಿಯಂನ ಒಳ ಭಾಗದಲ್ಲಿ ಪ್ರತಿಷ್ಠಾಪಿಸಲು ಜಿಲ್ಲಾಡಳಿತ ಕ್ರಮ ಕೈಗೊಳ್ಳಬೇಕೆಂದು ಮೇಜರ್ ನಂದಾ ನಂಜಪ್ಪ ಮನವಿ ಮಾಡಿದರು.

ಭಾರತೀಯ ಸೇನೆಯ ದಕ್ಷಿಣ ವಲಯದ ಮುಖ್ಯಸ್ಥರಾದ ಲೆಫ್ಟಿನೆಂಟ್ ಜನರಲ್ ಎ.ಕೆ. ಸಿಂಗ್ ಅವರು ಇತ್ತೀಚೆಗೆ ಮ್ಯೂಸಿಯಂಗೆ ಭೇಟಿ ನೀಡಿ ಸೇನಾ ಸ್ಮರಣಿಕೆಯನ್ನು ಮ್ಯೂಸಿಯಂಗೆ ನೀಡಿದ್ದರು. ಈ ಸ್ಮರಣಿಕೆಯನ್ನು ಫೋರಂನ ಸಂಚಾಲಕ ಮೇಜರ್ ನಂದಾ ನಂಜಪ್ಪ ಅವರು ಜಿಲ್ಲಾಧಿಕಾರಿಗಳಿಗೆ ಇದೇ ಸಂದರ್ಭ ಹಸ್ತಾಂತರಿಸಿದರು.

ಇದಕ್ಕೂ ಮುನ್ನ ಅಮರ್ ಜವಾನ್ ಯುದ್ಧ ಸ್ಮಾರಕಕ್ಕೆ ತೆರಳಿ ಹುತಾತ್ಮ ವೀರ ಯೋಧರಿಗೆ ಪುಷ್ಪ ನಮ್ಮನ ಸಲ್ಲಿಸಿ ಗೌರವ ಸಮರ್ಪಿಸಿದರು. ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಚಾರ ಅಧಿಕಾರಿ ಚಿನ್ನಸ್ವಾಮಿ, ಮಣಜೂರು ಮಂಜುನಾಥ್, ಪತ್ರಕರ್ತ ಅನಿಲ್ ಹೆಚ್.ಟಿ., ಜನರಲ್ ತಿಮ್ಮಯ್ಯ ಮ್ಯೂಸಿಯಂನ ವ್ಯವಸ್ಥಾಪಕ ಸುಬೇದಾರ್ ಮೇಜರ್ ಗುಡ್ಡಂಡ ತಿಮ್ಮಯ್ಯ, ಮಡಿಕೇರಿ ನಗರ ಠಾಣೆಯ ಪೊಲೀಸ್ ವೃತ್ತ ನಿರೀಕ್ಷಕ ಶಿವಶಂಕರ್, ಉಪನಿರೀಕ್ಷಕ ಶ್ರೀನಿವಾಸ್ ಮತ್ತಿತ್ತರು ಹಾಜರಿದ್ದರು.

ಜನರಲ್ ತಿಮ್ಮಯ್ಯ ಪುತ್ಥಳಿ ಲೋಕಾರ್ಪಣೆ

ಮಡಿಕೇರಿ, ಮಾ.31– ಪದ್ಮಭೂಷಣ ಜನರಲ್ ಕೆ.ಎಸ್. ತಿಮ್ಮಯ್ಯ ಅವರ 117ನೇ ಜನ್ಮ ದಿನದ ಪ್ರಯುಕ್ತ ಮಡಿಕೇರಿಯ ಜನರಲ್ ತಿಮ್ಮಯ್ಯ ಪಬ್ಲಿಕ್ ಶಾಲೆಯಲ್ಲಿ ಜನರಲ್ ತಿಮ್ಮಯ್ಯ ಅವರ ಪುತ್ಥಳಿಯನ್ನು ಏರ್‌ಮಾರ್ಷಲ್ ಕೊದಂದೇರ ನಂದಾ ಕಾರ್ಯಪ್ಪ ಲೋಕಾರ್ಪಣೆಗೊಳಿಸಿದರು. ಜನರಲ್ ತಿಮ್ಮಯ್ಯ ಪ್ರತಿಮೆಗೆ ಮಡಿಕೇರಿ ಕೊಡವ ಸಮಾಜ ಹಾಗೂ ಜನರಲ್ ತಿಮ್ಮಯ್ಯ ಪಬ್ಲಿಕ್ ಶಾಲಾ ಆಡಳಿತ ಮಂಡಳಿ ಪುಷ್ಪಾರ್ಚನೆಯ ಮೂಲಕ ನಮನ ಸಲ್ಲಿಸಿತು.

ಬಳಿಕ ಮಾತನಾಡಿದ ಏರ್ ಮಾರ್ಷಲ್ ನಂದಾ ಕಾರ್ಯಪ್ಪ, ಜನರಲ್ ತಿಮ್ಮಯ್ಯ ದೇಶ ಕಂಡ ಅತ್ಯುತ್ತಮ ಸೇನಾದಂಡನಾಯಕನಾಗಿದ್ದು, ಸೇನಾ ಕ್ಷೇತ್ರಕ್ಕೆ ಮಾದರಿ ಎನಿಸಿಕೊಂಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಜನರಲ್ ತಿಮ್ಮಯ್ಯ ಶಾಲೆಯಲ್ಲಿ ಅವರ ಪುತ್ಥಳಿ ಅನಾವರಣವಾಗಿರುವುದು ಹೆಮ್ಮೆಯ ವಿಚಾರ ಎಂದು ಹೇಳಿದರು.

ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಮುತ್ತಪ್ಪ ನಾಮಫಲಕವನ್ನು ಉದ್ಘಾಟಿಸಿ ಮಾತನಾಡಿ, ಜನರಲ್ ತಿಮ್ಮಯ್ಯ ಅವರ ಪುತ್ಥಳಿ ಪ್ರತಿಷ್ಠಾಪನೆ ಮುಂದಿನ ಪೀಳಿಗೆಗೆ ಮಾದರಿಯಾಗಲಿದೆ ಎಂದರು. ದಾನಿಗಳು ಮುಂದೆ ಬಂದರೆ ಬಡ ವಿದ್ಯಾರ್ಥಿಗಳ ಏಳಿಗೆಗೆ ಸಹಕಾರಿಯಾಗುವುದರ ಜೊತೆಗೆ ಶಾಲಾ



ಅಭಿವೃದ್ಧಿ ಸಾಧ್ಯವೆಂದು ಹೇಳಿದರು.


ಇದೇ ಸಂದರ್ಭ ಅತಿಥಿಗಳು ಶಾಲೆಯ ನೂತನ ಕಚೇರಿ, ಶಾಲಾ ಕೊಠಡಿ, ವಾಚನಾಲಯ, ಕ್ರೀಡಾ ಕೊಠಡಿಯನ್ನು ಉದ್ಘಾಟಿಸಿದರು. ಶಾಲಾ ಪ್ರಾಂಶುಪಾಲರಾದ ಕಲ್ಮಾಡಂಡ ಸರಸ್ವತಿ ಮಾತನಾಡಿ, ಶಾಲೆಯಲ್ಲಿ ಜನರಲ್ ತಿಮ್ಮಯ್ಯನವರ ಪುತ್ಥಳಿ ಸ್ಥಾಪನೆ ಮಾಡಿರುವುದು ಹೆಮ್ಮೆಯ ವಿಷಯವಾಗಿದ್ದು ಇದಕ್ಕೆ ಕಾರಣಕರ್ತರಾದ ಶಾಲಾ ಆಡಳಿತ ಮಂಡಳಿ, ದಾನಿಗಳು, ಶಾಲಾ ಸಿಬ್ಬಂದಿ ವರ್ಗ ಸಹಕಾರಕ್ಕೆ ಅಭಿನಂದನೆ ಸಲ್ಲಿಸಿದರು.

ಇದೇ ಸಂದರ್ಭ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ ಐಮುಡಿಯಂಡ ರಾಣಿ ಮಾಚಯ್ಯ ಅವರನ್ನು ಸನ್ಮಾನಿಸಲಾಯಿತು. ಬಳಿಕ ಮಾತನಾಡಿ ರಾಣಿ ಮಾಚಯ್ಯ, ಯುವ ಪೀಳಿಗೆ ರಕ್ಷಣಾ ಪಡೆಗಳಿಗೆ ಸೇರುವ ಮೂಲಕ ದೇಶ ಸೇವೆಗೆ ಮುಂದಾಗಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ನಂದಿನೆರವಂಡ ಚೀಯಣ್ಣ, ಸಂಚಾಲಕಿ ಕನ್ನಂಡ ಕವಿತ ಬೊಳ್ಳಪ್ಪ, ನಂದಿನೆರವಂಡ ದಿನೇಶ್, ಕನ್ನಂಡ ಸಂಪತ್, ಮಂಡಿರ ಸದಾ ಮುದ್ದಪ್ಪ, ಬೊಪ್ಪಂಡ ಸರಳಾ ಕರುಂಬಯ್ಯ, ಕಾಂಡೇರ ಲಲ್ಲುಕುಟ್ಟಪ್ಪ, ಮುಕ್ಕಾಟಿರ ಪೊನ್ನಮ್ಮ, ಮೂವೆರ ಜಯರಾಂ, ಚೊಟ್ಟೆಯಂಡ ಸಂಜು ಕಾವೇರಪ್ಪ, ಕಾಳಚಂಡ ಅಪ್ಪಣ್ಣ, ಪುತ್ತರಿರ ಕಾಳಯ್ಯ, ಡಾ. ಅಮ್ಮಾಟಂಡ ಪಾರ್ವತಿ ಅಪ್ಪಯ್ಯ, ಮಾಜಿ ಅಧ್ಯಕ್ಷ ಮೂವೆರ ಸುಬ್ಬಯ್ಯ, ಮಾಜಿ ಕಾರ್ಯಾಧ್ಯಕ್ಷ ಚೋವಂಡ ಕಾಳಪ್ಪ ಉಪಸ್ಥಿತರಿದ್ದರು. ಇದೇ ವೇಳೆ ಅತ್ಯುತಮ ಅಂಕಗಳಿಸಿದ ವಿದ್ಯಾರ್ಥಿ ಗಳಿಗೆ ಗಣ್ಯರು ಗೌರವಿಸಿದರು. ಮಕ್ಕಳಿಂದ ಆಯೋಜಿತ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಮನಸೂರೆಗೊಂಡಿತು.

ಮಾದೆಯಂಡ ಸಿ.ಅಪ್ಪಣ್ಣ (ರಾಜಪ್ಪ) ನಿಧನ

ಮೈಸೂರು, ಮಾ.31–ಮೂಲತಃ ಕೊಡಗಿನ ನಾಪೋಕ್ಲು ಸಮೀಪದ ಬಲ್ಲಮಾವಟಿ ಗ್ರಾಮದವರಾಗಿದ್ದು, ಮೈಸೂರಿನ ಹೂಟಗಳ್ಳಿಯಲ್ಲಿ ವಾಸವಿದ್ದ ನಿವೃತ್ತ ಕರ್ನಲ್ ಮಾದೆಯಂಡ ಸಿ.ಅಪ್ಪಣ್ಣ (ರಾಜಪ್ಪ) ಅವರು ಶುಕ್ರವಾರ ಸಂಜೆ ನಿಧನರಾದರು.



ಅವರಿಗೆ 80 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ(ಏ.1) ಮಧ್ಯಾಹ್ನ 1.30ಕ್ಕೆ ವಿಜಯನಗರ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೊಡವ ಕುಟುಂಬಗಳ ಅಪ್ಪಚೆಟ್ಟೋಳಂಡ ಹಾಕಿ ಉತ್ಸವ

ಪಂದ್ಯಾವಳಿಯಿಂದ ಹೊರಬಿದ್ದ ಚೇಂದಂಡ, ಪರದಂಡ ತಂಡಗಳು

ನಾಪೋಕ್ಲು, ಮಾ.31– ಕೊಡವ ಕುಟುಂಬಗಳ ನಡುವಿನ 23ನೇ ವರ್ಷದ ಅಪ್ಪಚೆಟ್ಟೋಳಂಡ ಹಾಕಿ ಪಂದ್ಯಾವಳಿಯಲ್ಲಿ ಬಲಿಷ್ಠ ತಂಡಗಳಾದ ಚೇಂದಂಡ, ಪರದಂಡ ತಂಡಗಳು ಅಪ್ಪಚೆಟ್ಟೋಳಂಡ ಕಪ್‌ನಿಂದ ಹೊರಬಿದ್ದಿದೆ.

ಜನರಲ್ ತಿಮ್ಮಯ್ಯ ತಾಲೂಕು ಕ್ರೀಡಾಂಗಣದ ಮೈದಾನದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಕುಲ್ಲೇಟೀರ, ಕಲಿಯಂಡ, ಮುಕ್ಕಾಟೀರ(ಪುಲಿಕೋಟ್) ತಂಡಗಳು ಭರ್ಜರಿ ಗೆಲುವು ದಾಖಲಿಸಿದವು.

ವಿವರ : ಮಂಡೇಡ ತಂಡ ಕುಂದತ್ ಮಾಳೇಟಿರ ತಂಡದ ವಿರುದ್ಧ 1–0 ಗೋಲುಗಳ ಅಂತರದಲ್ಲಿ ಗೆಲುವು ಸಾಧಿಸಿತು, ಕುಲ್ಲೇಟೀರ ತಂಡವು ಕರ್ತಮಾಡ ವಿರುದ್ಧ 6–0 ಗೋಲುಗಳ ಅಂತರದಲ್ಲಿ ಜಯಿಸಿತು. ಮುಕ್ಕಾಟೀರ(ಪುಲಿಕೋಟ್) ಕೊಡೀರ ವಿರುದ್ಧ 4–0 ದಾಖಲಿಸಿ ಗೆಲುವಿನ ನಗೆ ಬೀರಿದವು. ಚಾರೀರ (ಹೊದ್ದೂರು) ನೆರವಂಡ ತಂಡದ ವಿರುದ್ಧ 3–0 ಗೋಲುಗಳಿಂದ ಜಯಿಸಿತು. ಅಲ್ಲಂಡ ಚಿರಿಯಪಂಡ ವಿರುದ್ಧ 7–5 ಗೋಲುಗಳಲ್ಲಿ, ಮುರುವಂಡ ಚೋಯಮಾಡಂಡ 3–0 ಗೋಲುಗಳಲ್ಲಿ ಗೆಲುವು ಪಡೆದುಕೊಂಡಿತ್ತು.

ಮಾರ್ಚಂಡ ತಂಡ ಚಿರುವಾಳಂಡ 5–2 ಗೋಲುಗಳ ಅಂತರದಲ್ಲಿ ಸೋಲಿಸಿತು. ಐನಂಡ ಪರದಂಡ ತಂಡವನ್ನು 4–2 ಗೋಲುಗಳಲ್ಲಿ ಜಯಿಸಿತು. ಮೇಕೇರಿರ ಪೊನ್ನಚೆಟ್ಟಿರ ವಿರುದ್ಧ 4–0 ಅಂತರದಲ್ಲಿ ಗೆಲುವು ಸಾಧಿಸಿತು.



ನೆಲ್ಲಮಕ್ಕಡ ಮೂಕಳೇರ 4–0 ಗೋಲುಗಳ ಮೂಲಕ ಗೆಲುವು ಪಡೆದುಕೊಂಡಿತು. ಚೆಕ್ಕೇರ ತಂಡ ಉದಿಯಂಡ 3–0 ಗೋಲುಗಳನ್ನು ಹೊಡೆಯುದರ ಮೂಲಕ ಗೆಲುವು ಪಡೆದುಕೊಂಡಿತ್ತು. ಕೊದಂಡ ಚೌರೀರ (ಹೊದವಾಡ) ವಿರುದ್ಧ 1–0 ಗೋಲು, ಇಟ್ಟೀರ ಮಲ್ಲಮಾಡ ವಿರುದ್ಧ 3–0 ಗೋಲುಗಳ ಮೂಲಕ ಗೆಲುವು ಪಡೆಯಿತು.

ಐಚೆಟ್ಟಿರ ಶಾಂತೇಯಂಡ ತಂಡದ ವಿರುದ್ಧ 3–0 ಗೋಲುಗಳ ಅಂತರದಲ್ಲಿ ರೋಚಕ ಗೆಲುವು ಸಾಧಿಸಿತು. ಕಲಿಯಂಡ ತಂಡವು ತೀತಮಾಡ 2–0 ವಿರುದ್ಧ ಗೋಲುಗಳ, ಚೇಂದಿರ ಅಪ್ಪನೆರವಂಡ ತಂಡದ ವಿರುದ್ಧ 4–0 ಗೋಲು ಹೊಡೆದು ಗೆಲುವು ಸಾಧಿಸಿತು. ಪುದಿಯೊಕ್ಕಡ ತಂಡ ಶಿವಚಾಲಿಯಂಡ ವಿರುದ್ಧ 2–0 ಗೋಲುಗಳಲ್ಲಿ ಜಯಿಸಿತು, ಕೊಂಗಂಡ ಚೇಯಂಡ ತಂಡದ ವಿರುದ್ಧ 2–0 ಅಂತರದಲ್ಲಿ ಗೆಲುವು ಪಡೆದುಕೊಂಡರೆ, ಬಾರಿಯಂಡ ತಂಬುಕುತ್ತೀರ ತಂಡದ ವಿರುದ್ಧ 1–0 ಗೋಲುಗಳಿಂದ ಗೆಲುವು ಸಾಧಿಸಿತು.

ಚೀಲದಲ್ಲಿ ತುಂಬಿಕೊಂಡು ಗಾಂಜಾ ಮಾರಲೆತ್ನ: ಇಬ್ಬರ ಬಂಧನ

ವಿರಾಜಪೇಟೆ, ಮಾ.31– ವಿರಾಜಪೇಟೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಚೀಲದಲ್ಲಿ ಗಾಂಜಾ ತುಂಬಿಕೊಂಡು ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಯುವಕರನ್ನು ಇಲ್ಲಿನ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಾಲೂಕಿನ ಇಂಜಲಗೇರಿಯ ನಿವಾಸಿ ಪ್ರವೀಣ್ (31) ಹಾಗೂ ವಿರಾಜಪೇಟೆ ಪಟ್ಟಣದ ಗಾಂಧಿ ನಗರ ನಿವಾಸಿ ಅಪ್ಸಲ್ (22) ಬಂಧಿತ ಗಾಂಜಾ ವ್ಯಾಪಾರಿಗಳು. ಇವರಿಬ್ಬರು ಗುರುವಾರ ರಾತ್ರಿ ಬಸ್ ನಿಲ್ದಾಣದ ಬಳಿ ಗಾಂಜಾ ಚೀಲವನ್ನು ಕೈಯಲ್ಲಿ ಹಿಡಿದು ಮಾರಾಟ ಮಾಡಲು ಯತ್ನಿಸುತ್ತಿದ್ದರು.

ಈ ಸಂದರ್ಭದಲ್ಲಿ ಸಂಶಯಗೊಂಡ ಪೊಲೀಸರು ಚೀಲ ಪರಿಶೀಲಿಸಿದಾಗ 1 ಕೆ.ಜಿ.225 ಗ್ರಾಂ ಗಾಂಜಾ ಪತ್ತೆಯಾಗಿದ್ದು, ಈ ಸಂಬಂಧ ಪ್ರವೀಣ್ ಮತ್ತು ಅಪ್ಸಲ್‌ನನ್ನು ಬಂಧಿಸಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಜಾರು ಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಿವೈಎಸ್ಪಿ ಮೋಹನ್ ಕುಮಾರ್ ಅವರ ಮಾರ್ಗದರ್ಶನದಲ್ಲಿ, ವೃತ್ತ ನಿರೀಕ್ಷಕ ಬಿ.ಎಸ್.ಶಿವರುದ್ರ ಅವರ ನೇತೃತ್ವದಲ್ಲಿ, ನಗರ ಠಾಣಾಧಿಕಾರಿ ಮದನ್ ಕುಮಾರ್ ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ರಾಜ್ಯ ವಿಧಾನಸಭಾ ಚುನಾವಣೆ

ಅಕ್ರಮ ಮದ್ಯ ಮಾರಾಟ ತಡೆಗೆ ಕಂಟ್ರೋಲ್ ರೂಂ ಸ್ಥಾಪನೆ

ಚಾಮರಾಜನಗರ, ಮಾ.31– ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆ 2023 ಹಿನ್ನೆಲೆಯಲ್ಲಿ ಅಕ್ರಮ ಮದ್ಯ ಮಾರಾಟ, ತಯಾರಿಕೆ, ದಾಸ್ತಾನು, ಸಾಗಾಣಿಕೆ ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಅಬಕಾರಿ ಇಲಾಖೆಗೆ ನೀಡಲು ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ 24 ಗಂಟೆ ಕಾರ್ಯನಿರ್ವಹಿಸುವ ಕಂಟ್ರೋಲ್ ರೂಂ ಗಳನ್ನು ತೆರೆಯಲಾಗಿದೆ.

ಜಿಲ್ಲಾಧಿಕಾರಿಗಳ ಕಚೇರಿಯ ಟೋಲ್ ಫ್ರೀ ನಂ 1950 ಗೆ ಕರೆ ಮಾಡಬಹುದಾಗಿದೆ. ಇದಲ್ಲದೇ ಚುನಾವಣೆ ಪ್ರಕ್ರಿಯೆ ಮುಗಿಯುವವರೆವಿಗೂ ತಾತ್ಕಾಲಿಕವಾಗಿ ಅಬಕಾರಿ ಇಲಾಖೆಯ ಟೋಲ್ ಫ್ರೀ ಸಂಖ್ಯೆ: 1800–425–4776 ಗೆ ಸಾರ್ವಜನಿಕರು ಮಾಹಿತಿ ನೀಡಲು ಕೋರಲಾಗಿದೆ.

TOLL FREE

ಅಬಕಾರಿ ಉಪ ಆಯುಕ್ತರ ಕಚೇರಿ ಚಾಮರಾಜನಗರ ಕಂಟ್ರೋಲ್ ರೂಂ 08226–224776, ಮೇಲುಸ್ತುವಾರಿ ಅಧಿಕಾರಿ ಸಿ.ಎಂ. ಮಹದೇವ ಅಬಕಾರಿ ನಿರೀಕ್ಷಕರು ಮೊಬೈಲ್ ಸಂಖ್ಯೆ: 9632555370, ಎಸ್. ಮಹೇಶ್ ಅಬಕಾರಿ ಉಪ ನಿರೀಕ್ಷಕರು ಮೊಬೈಲ್ ಸಂಖ್ಯೆ: 7795222842, ಅಬಕಾರಿ ಉಪ ಅಧೀಕ್ಷಕರ ಕಚೇರಿ ಚಾಮರಾಜನಗರ ಉಪವಿಭಾಗ ಕಂಟ್ರೋಲ್ ರೂಂ. ಸಂಖ್ಯೆ: 08226–224892, ಮೇಲುಸ್ತುವಾರಿ ಅಧಿಕಾರಿ ಎಂ.ಡಿ. ಮೋಹನ್ ಕುಮಾರ್ ಅಬಕಾರಿ ಉಪ ಅಧೀಕ್ಷಕರು ಮೊಬೈಲ್ ಸಂಖ್ಯೆ: 9449597186, ಎಂ.ಬಿ. ಉಮಾಶಂಕರ್ ಅಬಕಾರಿ ನಿರೀಕ್ಷಕರು ಮೊಬೈಲ್ ಸಂಖ್ಯೆ: 9880154839, ಅಬಕಾರಿ ನಿರೀಕ್ಷಕರ ಕಚೇರಿ ಚಾಮರಾಜನಗರ ವಲಯ, (ಚಾಮರಾಜನಗರ ಮತ್ತು ಯಳಂದೂರು ತಾಲೂಕು ಸೇರಿ)ಕಂಟ್ರೋಲ್ ರೂಂ ಸಂಖ್ಯೆ: 08226–223821, ಮೇಲುಸ್ತುವಾರಿ ಅಧಿಕಾರಿ ಮೀನಾ ಅಬಕಾರಿ ನಿರೀಕ್ಷಕರು ಮೊಬೈಲ್ ಸಂಖ್ಯೆ: 9632637800, ಶ್ರೀಧರ್ ಅಬಕಾರಿ ಉಪ ಅಧೀಕ್ಷಕರು ಮೊಬೈಲ್ ಸಂಖ್ಯೆ: 9743175061, ಅಬಕಾರಿ ನಿರೀಕ್ಷಕರ ಕಚೇರಿ ಕೊಳ್ಳೇಗಾಲ ವಲಯ, (ಕೊಳ್ಳೇಗಾಲ ಮತ್ತು ಹನೂರು ತಾಲೂಕು ಸೇರಿ) ಕಂಟ್ರೋಲ್ ರೂಂ.ಸಂಖ್ಯೆ: 08224–252433, ಮೇಲುಸ್ತುವಾರಿ ಅಧಿಕಾರಿ ಡಿ. ಸುನೀಲ್ ಅಬಕಾರಿ ನಿರೀಕ್ಷಕರು ಮೊಬೈಲ್ ಸಂಖ್ಯೆ: 7483203905, ಶ್ರೀಧರ್ ಅಬಕಾರಿ ಉಪ ಅಧೀಕ್ಷಕರು ಮೊಬೈಲ್ ಸಂಖ್ಯೆ: 9743175061, ಸಿದ್ದಯ್ಯ ಅಬಕಾರಿ ಉಪ ಅಧೀಕ್ಷರು ಮೊಬೈಲ್ ಸಂಖ್ಯೆ: 9980655253, ಅಬಕಾರಿ ನಿರೀಕ್ಷರ ಕಚೇರಿ ಗುಂಡ್ಲುಪೇಟೆ ವಲಯ, ಗುಂಡ್ಲುಪೇಟೆ ಕಂಟ್ರೋಲ್ ರೂಂ ಸಂಖ್ಯೆ 08229–295289, ಮೇಲುಸ್ತುವಾರಿ ಅಧಿಕಾರಿ ಕೆ. ತನ್ವೀರ್ ಅಬಕಾರಿ ನಿರೀಕ್ಷಕರು ಮೊಬೈಲ್ ಸಂಖ್ಯೆ: 9739239586, ಜಿಲ್ಲಾಧಿಕಾರಿಗಳ ಕಚೇರಿ ಟೋಲ್ ಫ್ರೀ ನಂ. 1950 ಹಾಗೂ ಚಾಮರಾಜನಗರ ಅಬಕಾರಿ ಉಪ ಆಯುಕ್ತರ ಕಚೇರಿ ಟೋಲ್ ಫ್ರೀ ನಂಬರ್ 1800–425–4776 ಅನ್ನು ಸಂಪರ್ಕಿಸಿ ಮಾಹಿತಿ ನೀಡುವಂತೆ ಜಿಲ್ಲಾ ಡೆಪ್ಯುಟಿ ಕಮಿಷನರ್ ಆಫ್ ಎಕ್ಸೈಜ್ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಡಬಲ್ ಇಂಜಿನ್ ಸರ್ಕಾರದಿಂದ ರಾಜ್ಯದ ಅಭಿವೃದ್ಧಿ

ಬಿಜೆಪಿ ಸಮಾವೇಶದಲ್ಲಿ ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ಅಣ್ಣಾಮಲೈ ಅಭಿಪ್ರಾಯ



ಹನೂರು, ಮಾ.31– ದೇಶದಲ್ಲಿ ದೀರ್ಘಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಸರ್ಕಾರ ಮಾಡದಿರುವ ಅಭಿವೃದ್ಧಿ ಕಾರ್ಯಗಳನ್ನು ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಮಾಡಿ ತೋರಿಸಿದೆ. ದೇಶ ಮತ್ತು ರಾಜ್ಯದ ಅಭಿವೃದ್ಧಿ ಬಿಜೆಪಿಯ ಡಬಲ್ ಇಂಜಿನ್ ಸರ್ಕಾರದಿಂದ ಮಾತ್ರ ಸಾಧ್ಯ ಎಂದು ತಮಿಳುನಾಡು ರಾಜ್ಯ ಬಿಜೆಪಿ ಅಧ್ಯಕ್ಷ ಹಾಗೂ ಕರ್ನಾಟಕ ಚುನಾವಣಾ ಸಹ ಉಸ್ತುವಾರಿ ಅಣ್ಣಾಮಲೈ ತಿಳಿಸಿದ್ದಾರೆ.

ಹನೂರು ಪಟ್ಟಣದ ಆರ್.ಎಸ್.ದೊಡ್ಡಿಯಲ್ಲಿ ಭಾರತೀಯ ಜನತಾ ಪಾರ್ಟಿ ಚಾಮರಾಜ ನಗರ ಜಿಲ್ಲಾ ಒಬಿಸಿ ಘಟಕ ಹಮ್ಮಿಕೊಂಡಿದ್ದ ಕಾರ್ಯಕರ್ತರ ಬೃಹತ್ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಭಿವೃದ್ಧಿಯ ಪರ್ವ ಶುರುವಾಗಿದೆ ಎಂದರು. ಸರ್ಕಾರ ಮತ್ತು ಅಧಿಕಾರಿಗಳು ಗ್ರಾಮೀಣ ಪ್ರದೇಶದ ಜನರ ಮನೆ ಬಾಗಿಲಿಗೆ ಬರುವಂತಾಗಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಜಾರಿಯಾಗುತ್ತಿರುವ ಪ್ರತಿಯೊಂದು ಕಾರ್ಯಕ್ರಮಗಳನ್ನು ಖಾತರಿ ಪಡಿಸುವ ಮತ್ತು ಅತಿ ಶೀಘ್ರವಾಗಿ ಜನರ ಮನೆ ಮನೆಗೆ ತಲುಪುವಂತಾಗಿದೆ. ಇದಕ್ಕೆ ಕಾರಣ ಬಿಜೆಪಿಯ ಡಬಲ್ ಇಂಜಿನ್ ಸರ್ಕಾರವಾಗಿದೆ ಎಂದರು. ಯಾವ ಜಿಲ್ಲೆಗೆ ಭೇಟಿ ನೀಡಿದರೆ ಮುಖ್ಯಮಂತ್ರಿಗಳು ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ ಅಪಖ್ಯಾತಿಗೆ ಗುರಿಯಾಗಿದ್ದ ಚಾಮರಾಜನಗರ ಜಿಲ್ಲೆಯಿಂದಲೇ ಸರ್ಕಾರದ ಸಾಧನೆಗಳನ್ನು ಜನರ ಬಳಿಗೆ ತಲುಪಿಸುವ ವಿಜಯ ಸಂಕಲ್ಪ ಯಾತ್ರೆಯನ್ನು ಪ್ರಾರಂಭ ಮಾಡಿದ್ದನ್ನು ಜಿಲ್ಲೆಯ ಜನತೆ ಮರೆಯಬಾರದು ಎಂದು ಅವರು ನುಡಿದರು.

2024ಕ್ಕೆ ಡಿಸೆಂಬರ್ 31ಕ್ಕೆ ದೇಶದ ಪ್ರತಿ ಮನೆಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಾಗಿ ಪ್ರಧಾನಿ ಮೋದಿ ಅವರ ಸಂಕಲ್ಪವಾಗಿದೆ. ರಾಜ್ಯದಲ್ಲಿ ಪೂರ್ಣ ಪ್ರಮಾಣದ ಸ್ವತಂತ್ರ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದರೆ ರಾಜ್ಯದ ಇನ್ನಷ್ಟು ಅಭಿವೃದ್ಧಿ ಸಾಧ್ಯವಾಗುತ್ತದೆ. ಹಾಗಾಗಿ ತಾವೆಲ್ಲರೂ ಬಿಜೆಪಿ ಪಕ್ಷವನ್ನು ಬೆಂಬಲಿಸುವ ಮೂಲಕ ಮತ್ತೊಮ್ಮೆ ರಾಜ್ಯದಲ್ಲಿ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರಬೇಕು. ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾದ ಅಧ್ಯಕ್ಷ ನೆ. ಲ. ನರೇಂದ್ರಬಾಬು ಮಾತನಾಡಿ ರಾಜ್ಯದ ಎಲ್ಲಾ ಸಮುದಾಯಗಳನ್ನು ಒಂದುಗೂಡಿಸಿ ಅಭಿವೃದ್ಧಿಯ ಸಾಧನೆ ಮಾಡುತ್ತಿರುವ ಬಿಜೆಪಿ ಈ ಚುನಾವಣೆಯಲ್ಲಿ ಮಿಷನ್ 150 ಸಂಕಲ್ಪವಾಗಿದೆ. ಬಿಜೆಪಿಯ ಸ್ವತಂತ್ರ ಸರ್ಕಾರಕ್ಕೆ ಎಂಬ ನಾವೆಲ್ಲರೂ ಪಂಕ ಕಟ್ಟಿ ನಿಂತಿದ್ದೇವೆ ಎಂದರು.

ಅನುಚ್ಛೇದ 370 ತೆಗೆಯಲು, ಎಸ್ಸಿ–ಎಸ್ಟಿಗಳಿಗೆ ಮೀಸಲಾತಿ ಹೆಚ್ಚಿಸಲು, ಕೇಂದ್ರ ಸಂಪುಟದಲ್ಲಿ 27 ಜನ ಓಬಿಸಿ ಸಮುದಾಯದ ಮುಖಂಡರಿಗೆ ಸಚಿವ ಸ್ಥಾನದ ಪ್ರಾಧ್ಯಾನ್ಯತೆ ನೀಡಲು ಮೋದಿ ನೇತೃತ್ವದ ಸರ್ಕಾರವೇ ಬರಬೇಕಾಯಿತು. ರಾಜ್ಯದಲ್ಲೂ ಕೂಡ ಒಬಿಸಿ ಸಮುದಾಯಗಳಿಗೆ ಕನಿಷ್ಠ ಎರಡು ಸೀಟುಗಳನ್ನು ಬಿಜೆಪಿ ಪಕ್ಷ ನೀಡಬೇಕು ಎಂದು ಈಗಾಗಲೇ ರಾಷ್ಟ್ರೀಯ ನಾಯಕರಿಗೆ ಮನವಿ ಸಲ್ಲಿಸಿದ್ದಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಓಬಿಸಿ ಮೋರ್ಚಾದ ಕಾರ್ಯದರ್ಶಿ ಸುರೇಶ್ ಬಾಬು, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ದತ್ತೇಶ್ ಕುಮಾರ್, ಯುವ ಮುಖಂಡ ನಿಶಾಂತ್, ಪ್ರೀತಮ್ ನಾಗಪ್ಪ, ಮಂಡಲ ಅಧ್ಯಕ್ಷರಾದ ಸಿದ್ದಪ್ಪ, ವೀರಭದ್ರ, ಮುಖಂಡರಾದ ಒಬಿಸಿ ಉಪಾಧ್ಯಕ್ಷ ವೆಂಕಟಸ್ವಾಮಿ , ನಿಕಟಪೂರ್ವ ಜಿಲ್ಲಾಧ್ಯಕ್ಷ ಆರ್. ಸುಂದರ ಹಾಗೂ ಅಪಾರ ಸಂಖ್ಯೆಯ ಬಿಜೆಪಿ ಕಾರ್ಯಕರ್ತರು ಹಾಜರಿದ್ದರು.


ಯಳಂದೂರು ಆಸ್ಪತ್ರೆಗೆ ಶುದ್ಧ ಕುಡಿಯುವ ನೀರಿನ ಯಂತ್ರ ವಿತರಣೆ



ಯಳಂದೂರು, ಮಾ.31– ಪಟ್ಟಣದಲ್ಲಿರುವ ತಾಲೂಕು ಸಾರ್ವಜನಿಕರ ಆಸ್ಪತ್ರೆಗೆ ಕೆನರಾ ಬ್ಯಾಂಕ್ ವತಿಯಿಂದ ಶುದ್ಧ ಕುಡಿಯುವ ನೀರಿನ ಯಂತ್ರವನ್ನು ಶುಕ್ರವಾರ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಬ್ಯಾಂಕಿನ ಸಹಾಯಕ ಪ್ರಧಾನ ವ್ಯವಸ್ಥಾಪಕ ಕೆ.ಜೆ.ಎಸ್. ನಾಯಕ್ ಮಾತನಾಡಿ, ಈಗ ನೀರು ಎಲ್ಲೆಡೆ ಕಲುಷಿತವಾಗಿದೆ. ಈ ಹಿಂದೆ ಕೆರೆಯ ನೀರನ್ನೇ ಕುಡಿಯಲು ಬಳಸುತ್ತಿದ್ದರು. ಆದರೆ ಈಗ ಮಾನವನ ಅತಿಯಾಸೆಯಿಂದ ಎಲ್ಲೆಲ್ಲೂ ಅನೈರ್ಮಲ್ಯ ತಾಂಡವವಾಡುತ್ತಿದೆ. ಪರಿಸರದೊಂದಿಗೆ ಕುಡಿಯುವ ನೀರೂ ಕೂಡ ಕಲುಷಿತವಾಗಿದೆ. ಆಹಾರವೂ ಕೂಡ ಕಲಬೆರಕೆಯಾಗುತ್ತಿದೆ. ಅಶುದ್ಧ ಕುಡಿಯುವ ನೀರಿನಿಂದಲೇ ಅನೇಕ ರೋಗಗಳು ಬರುತ್ತವೆ. ಹಾಗಾಗಿ ನೀರಿನ ಕಡೆ ಹೆಚ್ಚು ಗಮನ ನೀಡಬೇಕು ಎಂದರು. ಈ ಸಂದರ್ಭದಲ್ಲಿ ಬ್ಯಾಂಕಿನ ವ್ಯವಸ್ಥಾಪಕ ತ್ರಿಪುರಾರಿ, ಮಹೇಶ್, ವೈದ್ಯಾಧಿಕಾರಿ ಡಾ. ಶ್ರೀಧರ್ ಡಾ. ನಾಗೇಂದ್ರಮೂರ್ತಿ, ಸೋಮಣ್ಣ ಸೇರಿದಂತೆ ಅನೇಕರು ಇದ್ದರು.

ಶ್ರೀ ರಾಮನವಮಿ ಆಚರಣೆ



ಗುಂಡ್ಲುಪೇಟೆ, ಮಾ.31– ಪಟ್ಟಣದ ಪುರಾತನ ಶ್ರೀರಾಮೇಶ್ವರ ದೇವಸ್ಥಾನದಲ್ಲಿರುವ ಶ್ರೀರಾಮ, ಲಕ್ಷ್ಮಣ, ಸೀತೆ ಮತ್ತು ಆಂಜನೇಯ ಸ್ವಾಮಿಗೆ ಶ್ರೀರಾಮನವಮಿಯ ಹಿನ್ನೆಲೆಯಲ್ಲಿ ವಿಶೇಷ ಪೂಜೆ ಹಾಗೂ ಅಲಂಕಾರ ಮಾಡಲಾಗಿತ್ತು.

ಶ್ರೀರಾಮನವಮಿಯ ಪ್ರಯುಕ್ತ ಪ್ರಧಾನ ಅರ್ಚಕರಾದ ಶಂಕರನಾರಾಯಣ ಜೋಯಿಸ್ ಮತ್ತು ಕಣ್ಣಪ್ಪ ನವರ ನೇತೃತ್ವದಲ್ಲಿ ದೇವಾಲಯವನ್ನು ತಳಿರು ತೋರಣ ಮತ್ತು ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು.

ಮುಂಜಾನೆ ಯೇ ದೇವರ ವಿಗ್ರಹಕ್ಕೆ ಅಭಿಷೇಕ ಮತ್ತು ವಿವಿಧ ಹೂವುಗಳಿಂದ ಅಲಂಕಾರ ಮಾಡಿ ಪ್ರಜಾ ಕೈಂಕರ್ಯವನ್ನು ನೆರವೇರಿಸಲಾಯಿತು. ಪಟ್ಟಣದ ವಿವಿಧ ಬಡಾವಣೆಯ ಭಕ್ತರು ದೇವರ ದರ್ಶನ ಪಡೆದು ಪಾನಕ, ಕೋಸಂಬರಿ ಪ್ರಸಾದವನ್ನು ಪಡೆದರು.

ಚಾಮರಾಜನಗರ ಜಿಲ್ಲೆಯ 4 ವಿಧಾನಸಭಾ ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿಗಳ ಆಯ್ಕೆಗೆ ಗೌಪ್ಯ ಮತದಾನ

ಚಾಮರಾಜನಗರ, ಮಾ.31– ಜಿಲ್ಲೆಯ 4 ವಿಧಾನ ಕ್ಷೇತ್ರಗಳಿಗೆ ಬಿಜೆಪಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ ನಡೆದ ಪಕ್ಷದ ಪದಾಧಿಕಾರಿಗಳ ಅಭಿಪ್ರಾಯ ಸಂಗ್ರಹ ಸಭೆಯಲ್ಲಿ ಪ್ರತ್ಯೇಕ ಗೌಪ್ಯ ಮತದಾನ ನಡೆಯಿತು.

ನಗರದ ಕುಲುಮೆ ರಸ್ತೆಯಲ್ಲಿರುವ ಬಿಜೆಪಿ ಕಚೇರಿಯಲ್ಲಿ ಪಕ್ಷದ ಜಿಲ್ಲಾಧ್ಯಕ್ಷ ನಾರಾಯಣ ಪ್ರಸಾದ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಮೊದಲಿಗೆ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಅಭಿಪ್ರಾಯ ಸಂಗ್ರಹಿಸಿ, ಮತದಾನ ನಡೆಯಿತು. ನಂತರ ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು ವಿಧಾನ ಸಭಾ



ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಭಿಪ್ರಾಯ ಸಂಗ್ರಹ ಸಭೆ ನಡೆದು ಮತದಾನ ನಡೆಯಿತು.

ಸಭೆಯಲ್ಲಿ ರಾಜ್ಯ ಸಭಾ ಸದಸ್ಯ ನಾರಾಯಣ್, ಮಾಜಿ ಸಚಿವರು, ಸಫಾಯಿ ಕರ್ಮಚಾರಿ ಆಯೋಗದ ಆಯೋಗದ ಅಧ್ಯಕ್ಷರು, ಚಾಮರಾಜನಗರ ಕ್ಷೇತ್ರದ ಚುನಾವಣಾ ಉಸ್ತುವಾರಿ ಕೋಟೆ ಎಂ.ಶಿವಣ್ಣ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ಬಿ.ನುದೀಶ್, ಜಿಲ್ಲಾ ಸಮಿತಿಯ ಎಲ್ಲಾ ಪದಾಧಿಕಾರಿ, ಮಹಾಶಕ್ತಿ ಕೇಂದ್ರ ಹಾಗೂ ಶಕ್ತಿ ಕೇಂದ್ರ ಅಧ್ಯಕ್ಷರು ಭಾಗವಹಿಸಿದ್ದರು.

ನಾಳೆ ನಗರದಲ್ಲಿ ಪೊಲೀಸ್ ಧ್ವಜ ದಿನಾಚರಣೆ

ಚಾಮರಾಜನಗರ, ಮಾ.31– ಚಾಮರಾಜನಗರ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮವನ್ನು ಏ.2ರಂದು ಬೆಳಿಗ್ಗೆ 8 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಆಯೋಜಿಸಲಾಗಿದೆ. ಗುಂಡ್ಲುಪೇಟೆ ಪೊಲೀಸ್ ಠಾಣೆಯ ನಿವೃತ್ತ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಪಿ. ಸುಜಾತ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಜಿಲ್ಲಾ ಪೊಲೀಸ್ ಅಧೀಕ್ಷಕ ಪದ್ಮಿನಿ ಸಾಹು ಅವರು ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಶಾಲೆಯಲ್ಲಿ ಕಳುವಾಗಿದ್ದ ಬ್ಯಾಟರಿಗಳನ್ನು ಪತ್ತೆ ಹಚ್ಚಿದ ಪೊಲೀಸರು

ಚಾಮರಾಜನಗರ, ಮಾ.31– ತಾಲೂಕಿನ ಮೂಡಲ ಅಗ್ರಹಾರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಳುವಾಗಿದ್ದ ಬ್ಯಾಟರಿಗಳನ್ನು ಪೊಲೀಸರು ಪತ್ತೆ ಹಚ್ಚಿ, ಆರೋಪಿಯನ್ನು ಬಂಧಿಸಿದ್ದಾರೆ.

ಅದೇ ಗ್ರಾಮದ ಕುಮಾರ ಅಲಿಯಾಸ್ ಬೂಸ ಪುಟ್ಟಸ್ವಾಮಿ ಬಂಧಿತ ಆರೋಪಿ. ಈತನಿಂದ ಸುಮಾರು 36 ಸಾವಿರ ರೂ. ಮೌಲ್ಯದ 5 ಯುಪಿಎಸ್ ಬ್ಯಾಟರಿ ಗಳನ್ನು ವಶಕ್ಕೆ ಪಡೆದು, ಶಾಲೆಗೆ ಹಿಂದಿರುಗಿಸಿದ್ದಾರೆ.

ಮಾ.26 ರಂದು ತಡರಾತ್ರಿಯಲ್ಲಿ ಶಾಲೆಯಲ್ಲಿ ಬ್ಯಾಟರಿಗಳನ್ನು ಕಳವು ಮಾಡಿದ್ದ. ಈ ಸಂಬಂಧ ಮಾ.27 ರಂದು ಕುದೇರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ಈ ಪ್ರಕರಣವನ್ನು ಬೇಧಿಸಿರುವ ಪೊಲೀಸರು ಈ ಹಿಂದೆ ಕದ್ದಿದ್ದ 2 ಬ್ಯಾಟರಿ ಸಮೇತ ಒಟ್ಟು 5 ಬ್ಯಾಟರಿಗಳನ್ನು ವಶಕ್ಕೆ ಪಡೆದುಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಠಾಣೆಯ ಸಬ್‌ಇನ್ಸ್‌ಪೆಕ್ಟರ್‌ಗಳಾದ ಟಿ. ಎಂ. ತಾಜುದ್ದೀನ್, ಭಾರತಿ, ಸಿಬ್ಬಂದಿಗಳಾದ ಶಂಕರ್, ಕಿಶೋರ್, ಅಕ್ಬರ್ ಅಲಿ, ಮಹೇಶ್, ವಿಜಯ್, ಸತೀಶ್, ಶಂಕರ್, ಗುರು ಇದ್ದರು.

ಒಂದನೇ ಪುಟದಿಂದ

ವರುಣಾ ಸ್ಪರ್ಧೆಗೆ ವಿಜಯೇಂದ್ರ ಷರತ್ತು

ತೋಟದಪ್ಪ ಬಸವರಾಜು ಅವರನ್ನು ಘೋಷಿಸಿದಾಗ ರೊಚ್ಚಿಗೆದ್ದ ಕಾರ್ಯಕರ್ತರು ಕುರ್ಚಿಗಳನ್ನು ಬೀಸಿ ಗಲಭೆ ಎಬ್ಬಿಸಿದ್ದರು. ಸಭೆಯನ್ನು ಅರ್ಧಕ್ಕೇ ಮೊಟಕುಗೊಳಿಸಿ ಯಡಿಯೂರಪ್ಪ ಮೈಸೂರಿನ ಖಾಸಗಿ ಹೋಟೆಲ್‌ಗೆ ಆಗಮಿಸಿದಾಗ ಅಲ್ಲಿಗೂ ಲಗ್ಗೆ ಇಟ್ಟ ಕಾರ್ಯಕರ್ತರು ದಾಂಧಲೆ ಮಾಡಿದ್ದರು. ಕೊನೆಗೆ ಪಕ್ಷದ ಅಧಿಕೃತ ಅಭ್ಯರ್ಥಿ ತೋಟದಪ್ಪ ಬಸವರಾಜು ಸ್ಪರ್ಧಿಸಿ, ಸೋಲು ಕಂಡಿದ್ದರು.

ವರುಣಾ ಕ್ಷೇತ್ರದಲ್ಲಿ ವಿಜಯೇಂದ್ರ ಈಗಲೂ ಕೂಡ ಕಾರ್ಯಕರ್ತರ ನಡುವೆ ತನ್ನ ವರ್ಚಸ್ಸನ್ನು ಉಳಿಸಿಕೊಂಡಿರುವುದರಿಂದ ಈ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಅವರನ್ನು ಮಣಿಸಲು ವಿಜಯೇಂದ್ರ ಸರಿಯಾದ ಅಭ್ಯರ್ಥಿ ಎಂಬ ತೀರ್ಮಾನಕ್ಕೆ ಸಂಘ ಪರಿವಾರದ ಮುಖಂಡರು ಹಾಗೂ ಬಿಜೆಪಿ ನಾಯಕರು ಬಂದಿದ್ದಾರೆ. ವಿಜಯೇಂದ್ರ ಸ್ಪರ್ಧೆಯಿಂದ ಸಿದ್ದರಾಮಯ್ಯ ನೆಮ್ಮದಿಯಾಗಿ ರಾಜ್ಯಾದ್ಯಂತ ಪ್ರವಾಸ ಮಾಡಿ ಕಾಂಗ್ರೆಸ್ ಪರ ಪ್ರಚಾರ ಮಾಡುವುದಕ್ಕೆ ಅಡ್ಡಿಯನ್ನುಂಟು ಮಾಡುವ ಚಿಂತನೆಯೂ ಬಿಜೆಪಿ ವರಿಷ್ಠರಲ್ಲಿದೆ. ಈ ಕಾರಣಕ್ಕಾಗಿಯೇ ವಿಜಯೇಂದ್ರರನ್ನು ವರುಣಾದಲ್ಲಿ ಕಣಕ್ಕಿಳಿಸಲು ತೀರ್ಮಾನಿಸಿದ್ದಾರೆ ಎನ್ನಲಾಗಿದೆ. ಆದರೆ, ವರುಣಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಪಕ್ಷದ ಕಾರ್ಯಕರ್ತರು ಒತ್ತಡ ಹೇರುತ್ತಿದ್ದರೂ ಕೂಡ ಚುನಾವಣೆಯಲ್ಲಿ ಒಂದು ವೇಳೆ ಪರಾಭವಗೊಂಡರೆ ತಮ್ಮ ರಾಜಕೀಯ ಭವಿಷ್ಯ ಅಷ್ಟಕ್ಕೇ ಕೊನೆಗೊಳ್ಳಬಹುದು ಎಂದು ವಿಜಯೇಂದ್ರ ಚಿಂತನೆ ನಡೆಸಿದ್ದಾರೆ. ಇದೇ ಅಭಿಪ್ರಾಯ ಅವರ ತಂದೆ ಯಡಿಯೂರಪ್ಪನವರದ್ದೂ ಆಗಿದೆ. ಅಲ್ಲದೇ ಹಲವು ದಶಕಗಳಿಂದ ಭದ್ರ ನೆಲೆಯಾಗಿರುವ ಶಿಕಾರಿಪುರ ಕ್ಷೇತ್ರವನ್ನು ಬೇರೆಯವರಿಗೆ ಬಿಟ್ಟುಕೊಟ್ಟರೆ ಅಲ್ಲಿ ತಮ್ಮ ಹಿಡಿತವೂ ತಪ್ಪುತ್ತದೆ ಎಂದು ಯಡಿಯೂರಪ್ಪ ಲೆಕ್ಕಾಚಾರ ಹಾಕಿದ್ದಾರೆ ಎನ್ನಲಾಗಿದೆ. ವಿಜಯೇಂದ್ರ ಕೂಡ ಶಿಕಾರಿಪುರದಲ್ಲಿ ಅನಾಯಾಸವಾಗಿ ಗೆಲುವು ಸಾಧಿಸಬಹುದು. ಹೀಗಾಗಿ ಆ ಕ್ಷೇತ್ರವನ್ನು ಬಿಡಬಾರದು. ವರಿಷ್ಠರ ಅಣತಿಯಂತೆ ವರುಣಾದಲ್ಲಿ ಸ್ಪರ್ಧಿಸುವ, ಅದೇ ವೇಳೆ ಶಿಕಾರಿಪುರದಲ್ಲೂ ಸ್ಪರ್ಧಿಸಿದರೆ ಒಂದು ವೇಳೆ ವರುಣಾದಲ್ಲಿ ಸೋತರೂ ಶಿಕಾರಿಪುರದಲ್ಲಿ ಗೆಲ್ಲುವ ಮೂಲಕ ರಾಜಕೀಯ ಭವಿಷ್ಯವನ್ನು ಕಾಪಾಡಿಕೊಳ್ಳಬಹುದು ಎಂಬ ಲೆಕ್ಕಾಚಾರದೊಂದಿಗೆ ವಿಜಯೇಂದ್ರ ವರುಣಾ ಜೊತೆಗೆ ಶಿಕಾರಿಪುರದಲ್ಲೂ ಸ್ಪರ್ಧಿಸಲು ಅವಕಾಶ ಕೊಡಬೇಕು ಎಂದು ಷರತ್ತು ಹಾಕಿದ್ದಾರೆ ಎನ್ನಲಾಗಿದೆ.

ಎರಡು ಕಡೆ ಸ್ಪರ್ಧೆ ಇರಾದೆ

ಎಷ್ಟು ಜಿದ್ದಾಜಿದ್ದಿಯಾಗಿರಲಿದೆ ಎಂಬುದಕ್ಕೆ ಸಾಕ್ಷಿಯಾಗುವಂತಿದೆ. ರೇವಣ್ಣ ತಮ್ಮ ಪತ್ನಿ ಶ್ರೀಮತಿ ಭವಾನಿ ರೇವಣ್ಣ ಅವರಿಗೆ ಹಾಸನ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಸಲು ಬಯಸಿದ್ದರು. ಆದರೆ ಸಹೋದರ ಹೆಚ್.ಡಿ.ಕುಮಾರಸ್ವಾಮಿ ಆಸಕ್ತಿ ತೋರದಿರುವುದು ರೇವಣ್ಣ ಅವರಿಗೆ ಸಿಟ್ಟು ತರಿಸಿದೆ. ಹಾಸನದಿಂದ ಮಾಜಿ ಶಾಸಕ, ದಿವಂಗತ ಪ್ರಕಾಶ್ ಅವರ ಪುತ್ರ ಸ್ವರೂಪ್ ಅವರಿಗೆ ಟಿಕೆಟ್ ನೀಡುವುದು ಹೆಚ್.ಡಿ.ಕುಮಾರಸ್ವಾಮಿ ಅವರ ಇಚ್ಛೆ. ಕುಟುಂಬದ ಸದಸ್ಯರಿಗೆ ಟಿಕೆಟ್ ನೀಡಿ,ಕಾರ್ಯಕರ್ತರನ್ನು ನಿರ್ಲಕ್ಷಿಸಿದರೆ ಜೆಡಿಎಸ್ ಬಗ್ಗೆ ವ್ಯತಿರಿಕ್ತ ಸಂದೇಶ ಹೋಗುತ್ತದೆ. ಈಗಾಗಲೇ ಕುಟುಂಬ ರಾಜಕಾರಣದ ಕಳಂಕ ಪಕ್ಷವನ್ನು ಆವರಿಸಿಕೊಂಡಿದ್ದು, ಇಂತಹ ಸಂದರ್ಭದಲ್ಲಿ ಶ್ರೀಮತಿ ಭವಾನಿ ರೇವಣ್ಣ ಅವರಿಗೆ ಟಿಕೆಟ್ ನೀಡುವುದು ಸರಿಯಲ್ಲ ಎಂಬುದು ಕುಮಾರಸ್ವಾಮಿ ಅವರ ಆತಂಕ. ಆದರೆ ಹಾಸನದ ಶಾಸಕ, ಬಿಜೆಪಿಯ ಪ್ರೀತಮ್ ಗೌಡ ಅವರು, ರೇವಣ್ಣ ಅವರಿಗೆ ನಿರಂತರವಾಗಿ ಸವಾಲು ಒಡ್ಡುತ್ತಾ ಬರುತ್ತಿದ್ದು ಈ ಸವಾಲನ್ನು ತಮ್ಮ ಕುಟುಂಬದ ಒಬ್ಬರು ಸ್ವೀಕರಿಸಲೇಬೇಕು ಎಂಬುದು ಹೆಚ್.ಡಿ.ರೇವಣ್ಣ ಅವರ ಪಟ್ಟು. ಆದರೆ ಈ ವಿಷಯದಲ್ಲಿ ಉಭಯ ನಾಯಕರು ತಮ್ಮ ತಮ್ಮ ವಾದಕ್ಕೆ ಅಂಟಿಕೊಂಡಿದ್ದು,ಈ ಹಿನ್ನೆಲೆಯಲ್ಲಿ ತಮ್ಮ ಪತ್ನಿಗೆ ಟಿಕೆಟ್ ನೀಡದಿದ್ದರೆ ತಮಗೇ ಹಾಸನದ ಟಿಕೆಟ್ ನೀಡಬೇಕು. ಮತ್ತು ಏಕಕಾಲಕ್ಕೆ ನಾನು ಹೊಳೆನರಸೀಪುರ ಮತ್ತು ಹಾಸನ ವಿಧಾನಸಭಾ ಕ್ಷೇತ್ರಗಳಿಂದ ಸ್ಪರ್ಧಿಸುತ್ತೇನೆ ಎಂದು ರೇವಣ್ಣ ಬಿಗಿ ಪಟ್ಟು ಹಿಡಿದಿದ್ದಾರೆ.

ಹೈಕಮಾಂಡ್ ನಿರ್ಧರಿಸಿದಲ್ಲಿ ನನ್ನ ಸ್ಪರ್ಧೆ

ಯಾರಾದರೂ ಸರಿ ಅವರನ್ನು ಗೆಲ್ಲಿ ಸಲು ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಮನವಿ ಮಾಡಿದರು.

ಕಹಿ ಘಟನೆಗಳನ್ನು ಮರೆಯಬೇಕು: ಹಲವು ದಿನಗಳ ನಂತರ ವರುಣಾ ಕ್ಷೇತ್ರದ ಕಾರ್ಯಕರ್ತರನ್ನು ಭೇಟಿಯಾಗುತ್ತಿದ್ದೇನೆ. ಏಕೆಂದರೆ, ನಾನು ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ, ಈಗ ರಾಜ್ಯ ಉಪಾಧ್ಯಕ್ಷನಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದೇನೆ. 2018ರ ವಿಧಾನ ಸಭೆ ಚುನಾವಣೆ ನಂತರ ಶಿರಾ, ಕೆ.ಆರ್.ಪೇಟೆ ಸೇರಿದಂತೆ ಇತರೆ ವಿಧಾನ ಸಭೆ ಉಪ ಚುನಾವಣೆಯಲ್ಲಿ ಕೆಲಸ ಮಾಡಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಿದ್ದೇನೆ. ಅದೇ ರೀತಿ ವರುಣಾ ಕ್ಷೇತ್ರದ ಕಾರ್ಯಕರ್ತರು, ಹಿಂದಿನ ಕಹಿ ನೆನಪುಗಳನ್ನು ಮರೆತು ಪಕ್ಷ ಸಂಘಟನೆಗೆ ಒತ್ತು ನೀಡುವಂತೆ ಮನವಿ ಮಾಡಿದರು.

ಹೈಕಮಾಂಡ್ ತೀರ್ಮಾನ ಅಂತಿಮ: ನಮ್ಮ ಪಕ್ಷದಲ್ಲಿ ಟಿಕೆಟ್ ಘೋಷಣೆ ಕುರಿತು ಹಿರಿಯರು ತೀರ್ಮಾನ ಕೈಗೊಳ್ಳುತ್ತಾರೆ. ಯಡಿಯೂರಪ್ಪ, ವಿಜಯೇಂದ್ರ, ರಾಘವೇಂದ್ರ ಮತ್ತೊಬ್ಬರು, ಮಗದೊಬ್ಬರು ಟಿಕೆಟ್ ಘೋಷಣೆ ಮಾಡುವ ಸಂಸ್ಕೃತಿ ನಮ್ಮಲ್ಲಿಲ್ಲ. ಅದೇ ರೀತಿ ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರನ್ನು ಕಡೆಗಣಿಸುವ ಮಾತೇ ನಮ್ಮ ಪಕ್ಷದಲ್ಲಿಲ್ಲ ಎಂದು ಕಾರ್ಯಕರ್ತರಲ್ಲಿ ಭರವಸೆ ತುಂಬಿದ ಅವರು, ಇಂದು ಮೈಸೂರಿಗೆ ಖಾಸಗಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದೇನೆ. ಈ ವೇಳೆ ವರುಣಾ ಕ್ಷೇತ್ರದ ಕಾರ್ಯಕರ್ತರನ್ನು ಭೇಟಿ ಮಾಡಿರುವುದು ನನಗೆ ಸಂತೋಷ ಸಂಗತಿ ಎಂದರು.

ಎಲ್ಲಾ ಸಮುದಾಯಗಳು ಮುಖ್ಯ: 2018ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ವರುಣಾ ಕ್ಷೇತ್ರಕ್ಕೆ ಆಕಸ್ಮಿಕವಾಗಿ ಬಂದೆ. ಅಲ್ಲಿನ ಮತದಾರರು ಆತ್ಮೀಯವಾಗಿ ಬರಮಾಡಿಕೊಂಡರು. ಆದರೆ, ಕಾರಣಾಂತರಗಳಿಂದ ನನ್ನ ಸ್ಪರ್ಧೆಗೆ ಅವಕಾಶವಾಗಲಿಲ್ಲ. ಆಗ ಎಲ್ಲರೂ ಸ್ವತಂತ್ರ ಅಭ್ಯರ್ಥಿಯಾಗಿ ನಿಲ್ಲುವಂತೆ ಒತ್ತಡ ತಂದರು. ಆದರೆ, ತಂದೆ ಜವಾಬ್ದಾರಿ ಸ್ಥಾನದಲ್ಲಿರುವಾಗ ಅವರ ಮಗನಾದ ನಾನು, ಸ್ವತಂತ್ರ ವಾಗಿ ಸ್ಪರ್ಧಿಸಿದರೆ, ರಾಜ್ಯ ಜನತೆಗೆ ತಪ್ಪು ಸಂದೇಶ ರವಾನೆಯಾಗುತ್ತದೆ ಮತ್ತು ನನ್ನ ನಡವಳಿಕೆಯಿಂದ ನಮ್ಮ ತಂದೆ ಹಾಗೂ ಪಕ್ಷದ ಹಿರಿಯರಿಗೂ ಮುಜುಗರವಾಗಬಾರದು ಎಂಬ ಹಿನ್ನೆಲೆಯಲ್ಲಿ ಆ ಸಂದರ್ಭದಲ್ಲಿ ಯಾವುದೇ ನಿರ್ಧಾರ ಮಾಡಲಿಲ್ಲ ಎಂದರು.

ಅಂದು ತಾಳ್ಮೆ ವಹಿಸಿದ್ದಕ್ಕೆ ಇಂದು ಪಕ್ಷ ಎಲ್ಲಾ ರೀತಿಯ ಜವಾಬ್ದಾರಿಯನ್ನೂ ನನಗೆ ನೀಡುತ್ತಿದೆ. ಅಲ್ಲದೆ, ವರುಣಾ ಕ್ಷೇತ್ರದಲ್ಲಿ ವೀರಶೈವ–ಲಿಂಗಾಯತ ಸಮುದಾಯದ 70 ಸಾವಿರ ಮತಗಳಿದ್ದರೂ ಅದು ನನ್ನ ಗೆಲುವಿಗೆ ಮಾನದಂಡವಲ್ಲ. ಒಂದು ಕ್ಷೇತ್ರದಲ್ಲಿ ಎಲ್ಲಾ ಸಮುದಾಯಗಳ ವಿಶ್ವಾಸಗಳಿಸಿದರೆ ಮಾತ್ರ ರಾಜಕಾರಣದಲ್ಲಿ ಜನ ಪ್ರತಿನಿಧಿಯಾಗಿ ಆಯ್ಕೆಯಾಗಲು ಸಾಧ್ಯ ಎಂದು ಕಾರ್ಯಕರ್ತರ ಮನವೊಲಿಸಲು ಯತ್ನಿಸಿದರು.

ಹುಲಿ ಎದುರು ಮರಿ ಹುಲಿಯೇ ನಿಲ್ಲಬೇಕು: ಇದಕ್ಕೂ ಮುನ್ನ ಸಭೆಯಲ್ಲಿ ಭಾಗವಹಿಸಿದ್ದ ಹಲವು ಕಾರ್ಯಕರ್ತರು, ಹುಲಿ (ಮಾಜಿ ಸಿಎಂ ಸಿದ್ದರಾಮಯ್ಯ) ಎದುರು ಮರಿ ಹುಲಿ(ವಿಜಯೇಂದ್ರ)ಯೇ ಸ್ಪರ್ಧಿಸಬೇಕು. ಆಡು(ಮೇಕೆ) ನಿಲ್ಲಿಸಿದರೆ, ಬೇರೆಯವರು ಹಾರಿಸಿಕೊಂಡು ಹೋಗುತ್ತಾರೆ ಎಂಬುದು ನಮ್ಮ ಅನಿಸಿಕೆ. 2018ರ ವಿಧಾನ ಸಭಾ ಚುನಾವಣೆ ವೇಳೆ ಸಂಭವಿಸಿದ ಘಟನೆ ಈ ಬಾರಿ ವರುಣಾದಲ್ಲಿ ಘಟಿಸಬಾರದು. ಹಾಗಾಗಿ ನೀವೇ ಸ್ಪರ್ಧಿಸುವಂತೆ ಕ್ಷೇತ್ರದ ಕಾರ್ಯಕರ್ತರ ಅನಿಸಿಕೆಯಾಗಿದೆ ಎಂದು ಬಿ.ವೈ.ವಿಜಯೇಂದ್ರರಿಗೆ ವಸ್ತುಸ್ಥಿತಿ ಮನವರಿಕೆ ಮಾಡಲು ಯತ್ನಿಸಿದರು. ನೀವು ಸ್ಪರ್ಧಿಸುವುದಾದರೆ, ನಾವೆಲ್ಲರೂ ಒಗ್ಗಟಾಗಿ ಚುನಾವಣೆ ನಡೆಸುತ್ತೇವೆ. ವರುಣಾ ಕ್ಷೇತ್ರದ ಪ್ರತಿ ಮನೆ ಮನೆಗೆ ಭೇಟಿ ನೀಡಿ, ಬಿಜೆಪಿ ಪಕ್ಷಕ್ಕೆ ಮತ ಹಾಕುವಂತೆ ಮತದಾರರ ಮನವೊಲಿಸುತ್ತೇವೆ. ನಿಮ್ಮನ್ನು ಅತೀ ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸುವ ಹೊಣೆ ನಮ್ಮದು ಎಂದು ಸಭೆಯಲ್ಲಿ ಭಾಗವಹಿಸಿದ್ದ ಮುಖಂಡ ಮಹದೇವಪ್ಪ ಅವರ ಮಾತಿಗೆ ಸಭೆಯಲ್ಲಿ ನೆರೆದಿದ್ದ ಬಹುತೇಕ ಕಾರ್ಯಕರ್ತರು ಧನಿಗೂಡಿಸಿದರು.

ಶೇ.40 ರಷ್ಟು ಮತಗಳು ನಮ್ಮ ಕಡೆ ವಾಲುತ್ತವೆ: ನೀವು ನಿಲ್ಲುವುದಾದರೆ, ದಲಿತ, ಉಪ್ಪಾರ, ನಾಯಕ ಸಮುದಾಯ ಸೇರಿದಂತೆ ಬಹುತೇಕ ಎಲ್ಲಾ ಒಬಿಸಿ ಸಮುದಾಯಗಳು ಬಿಜೆಪಿ ಕಡೆ ನಿಲ್ಲುತ್ತವೆ. ಶೇ.40ರಷ್ಟು ಕಾಂಗ್ರೆಸ್ ಮತಗಳು ಬಿಜೆಪಿ ಪಕ್ಷಕ್ಕೆ ಬರುತ್ತವೆ ಎಂಬ ವಿಶ್ವಾಸ ನಮಗಿದೆ. 2018ರ ಚುನಾವಣೆಗೂ 2023ರ ಚುನಾವಣೆಗೂ ಅಜಾಗಜಾಂತರ ವ್ಯತ್ಯಾಸವಿದೆ. ಅದರಲ್ಲೂ ದಲಿತ ಸಮುದಾಯ ಒಳಮೀಸಲಾತಿ ವರದಿ ಕೇಂದ್ರಕ್ಕೆ ಶಿಫಾರಸ್ಸು ಮಾಡಿದ ನಂತರ ನಮ್ಮ ಪಕ್ಷದ ಮೇಲೆ ಮತದಾರರ ಒಲವು ಹೆಚ್ಚಾಗಿದೆ. ಹಾಗಾಗಿ ನೀವೇ ಸ್ಪರ್ಧಿಸಿದರೆ ಗೆಲುವು ಸುಲಭ ಎಂದು ತಿಳಿಸಿದರು.

ನಾಲ್ಕೈದು ಜಿಲ್ಲೆಗಳ ಮೇಲೆ ಎಫೆಕ್ಟ್: ನೀವು ವರುಣಾ ಕ್ಷೇತ್ರದಲ್ಲಿ ಸ್ಪರ್ಧೆ ಮಾಡುವುದರಿಂದ ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಮಂಡ್ಯ ಜಿಲ್ಲೆಗಳಲ್ಲಿ ಭಾರತೀಯ ಜನತಾ ಪಾರ್ಟಿ ಸಂಘಟನೆಗೆ ಹೆಚ್ಚಿನ ಅನುಕೂಲವಾಗುತ್ತದೆ. ಈ ಚುನಾವಣೆಯಲ್ಲಿ ಅಭ್ಯರ್ಥಿಗಳ ಗೆಲುವಿಗೂ ಸಹಕಾರಿಯಾಗುತ್ತದೆ. ಹಳೆ ಮೈಸೂರು ಭಾಗದಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಿ, ಪಕ್ಷ ಸ್ವತಂತ್ರವಾಗಿ ಅಧಿಕಾರಕ್ಕೆ ಬರಲು ಸಾಧ್ಯ ಎಂದು ಕಾರ್ಯಕರ್ತರು ವಿಜಯೇಂದ್ರ ಅವರನ್ನು ವರುಣಾದಿಂದ ಸ್ಪರ್ಧಿಸುವಂತೆ ಮನವೊಲಿಕೆಗೆ ಯತ್ನಿಸಿದರು.

ಕಾರ್ಯಕರ್ತರು ಜೀವಂತ ಶವವಾಗಿದ್ದಾರೆ: ಕಳೆದ 15 ವರ್ಷಗಳಿಂದ ವರುಣಾ ಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಉಪಟಳ ಹೆಚ್ಚಳವಾಗಿದೆ. ಇದರಿಂದ ಬಿಜೆಪಿ ಕಾರ್ಯಕರ್ತರಿಗೆ ಉಸಿರುಗಟ್ಟಿಸುವ ವಾತಾವರಣವಿದೆ. ಈ ಬಾರಿ ಚುನಾವಣೆಯಲ್ಲಿ ನೀವು ಸ್ಪರ್ಧಿಸಿದರೆ, ಮುಂದಿನ ದಿನಗಳಲ್ಲಿ ಬಿಜೆಪಿ ಕಾರ್ಯಕರ್ತರು ಪಕ್ಷದಲ್ಲಿ ಉಳಿಯಲು ಸಾಧ್ಯ. ಇಲ್ಲವಾದರೆ, ಬಿಜೆಪಿಗೆ ಮೈಸೂರು ಜಿಲ್ಲೆಯಲ್ಲೇ ಉಳಿಗಾಲವಿರುವುದಿಲ್ಲ. ಈ ಸತ್ಯ ಸಂಗತಿಯನ್ನು ರಾಜ್ಯ ಮುಖಂಡರಿಗೆ ತಲುಪಿಸಿ ಎಂದು ಖಾರವಾಗಿಯೇ ಕಾರ್ಯಕರ್ತ ಶ್ರೀಧರ್ ನುಡಿದರು.

ಮುಗಿಲು ಮುಟ್ಟಿದ ಜಯಘೋಷ: ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಖಾಸಗಿ ಕಾರ್ಯಕ್ರಮದ ನಿಮಿತ್ತ ಮೈಸೂರಿನ ಪ್ರೆಸಿಡೆಂಟ್ ಹೋಟೆಲ್‌ಗೆ ಆಗಮಿಸಿದ ವೇಳೆ ತಮ್ಮ ನೆಚ್ಚಿನ ನಾಯಕನಿಗೆ ವಿವಿಧ ಜಯಘೋಷ ಮೊಳಗಿಸಿದರಲ್ಲದೆ, ಹಾರ ಹಾಕಿ ಆತ್ಮೀಯವಾಗಿ ಗೌರವಿಸಿದರು. ಈ ವೇಳೆ ಮೈಲಾಕ್ ಅಧ್ಯಕ್ಷ ರಘು ಆರ್. ಕೌಟಿಲ್ಯ, ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಬಿಜೆಪಿ ಮುಖಂಡ ಹಾಗೂ ವಕೀಲ ಅರುಣ್ ಕುಮಾರ್, ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ನಂದೀಶ್ ಹಂಚೆ, ಜಿಪಂ ಮಾಜಿ ಅಧ್ಯಕ್ಷ ಸದಾನಂದ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

ಮಾಜಿ ಸಂಸದ ಧ್ರುವನಾರಾಯಣರಿಗೆ ದಲಿತ ವೇದಿಕೆಯಿಂದ ನುಡಿನಮನ

ಶೋಷಿತ ಸಮುದಾಯಗಳಿಗೆ ಶಕ್ತಿಯಾಗಿದ್ದರು: ಮಾಜಿ ಮೇಯರ್ ಪುರುಷೋತ್ತಮ್

ಮೈಸೂರು,ಮಾ.31(ಎಂಟಿವೈ)– ಯಾವುದೇ ಒಂದು ಜಾತಿಗೆ ಸೀಮಿತವಾಗದೆ, ಭ್ರಷ್ಟಾಚಾರದ ಸೋಂಕಿಗೆ ತುತ್ತಾಗದೇ ಸರ್ವರನ್ನೂ ಒಳಗೊಂಡ ಜನನಾಯಕರಾಗಿ ಆರ್.ಧ್ರುವನಾರಾಯಣ್ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು ಎಂದು ಮಾಜಿ ಮೇಯರ್ ಪುರುಷೋತ್ತಮ್ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸಿಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಶುಕ್ರವಾರ ಕರ್ನಾಟಕ ದಲಿತ ವೇದಿಕೆ ಆಯೋಜಿಸಿದ್ದ ಮಾಜಿ ಸಂಸದ ಆರ್.ಧ್ರುವನಾರಾಯಣ್‌ರಿಗೆ ನುಡಿ ನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 20 ದಿನಗಳಲ್ಲಿ ನಮ್ಮೊಂದಿಗೆ ಆರ್.ಧ್ರುವನಾರಾಯಣ್ ಇಲ್ಲ. ಇಷ್ಟು ಬೇಗ ಕಾಲವಾಗುತ್ತಾರೆ ಎಂದು ಯಾರು ನಿರೀಕ್ಷಿಸಿರಲಿಲ್ಲ. ಕಳೆದ 25 ವರ್ಷದ ರಾಜಕಾರಣದಲ್ಲಿ ಸಣ್ಣ ಕಪ್ಪು ಚುಕ್ಕೆಗೂ ಒಳಗಾಗದೆ ಸೇವೆ ಸಲ್ಲಿಸಿದ ಅವರು, ಕಳೆದ ಚುನಾವಣೆಯಲ್ಲಿ ಸೋತರೂ ನಾಲ್ಕು ವರ್ಷ ರಾಜ್ಯ ಪ್ರವಾಸ ಮಾಡಿ ಪಕ್ಷ, ಸಮಾಜ, ಸಮುದಾಯ ಕಟ್ಟುವ ಕೆಲಸ ಮಾಡಿ ನಮ್ಮೆಲ್ಲರಿಗೂ ಸ್ಫೂರ್ತಿ ತುಂಬುತ್ತಿದ್ದರು ಎಂದರು.

ಸಮಾಜ ಕಟ್ಟುವ ಕೆಲಸವನ್ನು ನಾವೆಲ್ಲಾ ಸೇರಿ ಮಾಡಬೇಕು. ಇಲ್ಲಿಯವರೆಗೂ ನಾವು ಮಾಡಿರುವ ರಾಜಕೀಯ ವ್ಯರ್ಥವಾಗಿದೆ. ಅದನ್ನು ಈ ಬಾರಿ ಸಾರ್ಥಕವಾಗಿಸಬೇಕು. ಶೋಷಿತ ಸಮುದಾಯಗಳು ಒಂದಾಗಬೇಕು. ಸೈದ್ಧಾಂತಿಕವಾಗಿ ರಾಜಕೀಯ ಶಕ್ತಿ ಕೊಡಬೇಕು. ಈ ಚುನಾವಣೆಯಲ್ಲಿ ಪ್ರತಿಫಲ ದೊರಕುವಂತೆ ಮಾಡಬೇಕು. ಶೋಷಿತ ಸಮುದಾಯಗಳು ಅಚಲ ಹಾಗೂ ದಿಟ್ಟ ನಿರ್ಧಾರ ತೆಗೆದುಕೊಳ್ಳ ಬೇಕು ಎಂದು ಸಲಹೆ ನೀಡಿದ್ದರು. ಅವರ ಮಾತಿಗೆ ನಾವೆಲ್ಲ ಸಮ್ಮತಿಸಿ, ಕೆಲಸ ಆರಂಭಿಸಿದ್ದೆವು. ಯಾರೂ ನಿರೀಕ್ಷೆಯೇ ಮಾಡದ ಅವರು ಸಾವಿನ ಸುದ್ದಿ ಎಲ್ಲರಿಗೂ ಬರಸಿಡಿಲಿನಂತೆ ಬಡಿಯಿತು. ಸಮುದಾಯ, ಸಮಾಜ, ಪಕ್ಷಕ್ಕೆ ತುಂಬಲಾರದ ನಷ್ಟವಾಗಿದೆ. ಅವರ ಗುರಿ ಸಾಧಿಸುವ ಕೆಲಸಕ್ಕೆ ನಾವೆಲ್ಲಾ ಕೈಜೋಡಿಸಬೇಕು ಎಂದರು.

ಆರ್.ಧ್ರುವನಾರಾಯಣ್ ಸಂಸದರಾಗಿ 10 ವರ್ಷಗಳ ಕಾಲ ನಿರಂತರವಾಗಿ ಸೇವೆ ಸಲ್ಲಿಸಿದ ಕಾರಣ ಚಾಮರಾಜನಗರ ಜಿಲ್ಲೆಯ ಚಿತ್ರ ಬದಲಾಗಿದೆ. ಶಿಕ್ಷಣ, ಧಾರ್ಮಿಕ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಉತ್ತಮ ಶಿಕ್ಷಣ ದೊರೆತರೆ ಉದ್ಯೋಗ ಪಡೆಯಬಹುದು ಎಂದು ಅರಿತು ಚಾಮರಾಜನಗರದಲ್ಲಿ ವಿವಿಧ ಕಾಲೇಜು ಸ್ಥಾಪಿಸಲು ಕ್ರಮ ಕೈಗೊಂಡರು. ಎಲ್ಲರಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬುದು ಅವರ ಚಿಂತನೆಯಾಗಿತ್ತು. ಇದರಿಂದ ಮುಂದಿನ 10 ವರ್ಷದಲ್ಲಿ ಚಾಮರಾಜನಗರ ಜಿಲ್ಲೆ ರಾಜ್ಯಕ್ಕೆ ಮಾದರಿಯಾಗುತ್ತದೆ. ಚಾಮರಾಜನಗರದಲ್ಲಿ ದೊಡ್ಡದಾದ ಬುದ್ಧ ವಿಹಾರ ಕಟ್ಟಲು ಮುಂದಾಗಿದ್ದರು. ಅದು ಪ್ರಗತಿಯಲ್ಲಿದೆ. ಧ್ರುವನಾರಾಯಣ್ ಕೇವಲ ರಾಜಕಾರಣಿಯಾಗದೇ, ಪಕ್ಷ, ಮಾತು, ಜಾತಿಗೆ ಸೀಮಿತವಾದ ಎಲ್ಲರನ್ನು ಒಳಗೊಂಡಂತಹ ಜವಾಬ್ದಾರಿಯುತ ನಾಯಕರಾಗಿದ್ದರು.

ಅವರ ಪುತ್ರ ದರ್ಶನ್‌ಗೆ ನಾವೆಲ್ಲರೂ ಪ್ರಾಮಾಣಿಕವಾಗಿ ಬೆಂಬಲ ನೀಡಬೇಕು. ಆತ್ಮಸಾಕ್ಷಿಗೆ ಕುಂದುಂಟಾಗದಂತೆ ಅವರ ಶ್ರೇಯಸ್ಸಿಗೆ ಬೆಂಬಲವಾಗಿ ನಿಲ್ಲಬೇಕು ಎಂದು ಮನವಿ ಮಾಡಿದರು,

ಇದೇ ವೇಳೆ ಆರ್.ಧ್ರುವನಾರಾಯಣ್ ಪುತ್ರ, ನಂಜನಗೂಡು ಮೀಸಲು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಮಾತನಾಡಿ, ತಂದೆ ಆರ್.ಧ್ರುವನಾರಾಯಣ್ ಅವರ ಅಕಾಲಿಕ ನಿಧನದಿಂದ ಬಹಳ ನೋವನ್ನು ಅನುಭವಿಸಿದ್ದೇವೆ. ಈ ವೇಳೆ ರಾಜ್ಯಾದ್ಯಂತ ಮುಖಂಡರು, ಸಂಘ–ಸಂಸ್ಥೆಗಳ ಮುಖಂಡರು ಸಾಂತ್ವಾನ ಹೇಳಿ ನಮಗೆ ಶಕ್ತಿ ತುಂಬಿದ್ದಾರೆ. ನುಡಿ ನಮನ ಆಯೋಜಿಸಿ ನಮಗೆ ಬೆಂಬಲವಾಗಿ ನಿಂತಿದ್ದಾರೆ. ನಿಮ್ಮೆಲ್ಲರ ಸಹಕಾರ, ನಾಯಕರ ಮಾರ್ಗದರ್ಶನದಲ್ಲಿ ನಾನು ತಂದೆ ಹಾಕಿಕೊಟ್ಟ ದಾರಿಯಲ್ಲೇ ಸಾಗುತ್ತೇನೆ. ಬುದ್ಧ, ಬಸವ, ಅಂಬೇಡ್ಕರ್ ತತ್ವಸಿದ್ಧಾಂತ ಅಳವಡಿಸಿಕೊಂಡು, ಸೇವೆ ಮಾಡುವ ಮೂಲಕ ತಂದೆಯ ಹೆಸರನ್ನು ಉಳಿಸುತ್ತೇವೆ ಎಂದರು.

ಕಾರ್ಯಕ್ರಮದಲ್ಲಿ ತಾ.ಪಂ. ಮಾಜಿ ಅಧ್ಯಕ್ಷೆ ಮಂಜುಳಾ ಮಂಜುನಾಥ್, ಮುಖಂಡರಾದ ಜವರಪ್ಪ, ಕೃಷ್ಣಮೂರ್ತಿ ಚಮರಂ, ಗಾಯಕ ಅಮ್ಮ ರಾಮಚಂದ್ರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪ.ಜಾ ಮೀಸಲಾತಿ ಹೆಚ್ಚಳ ಮತ ಬ್ಯಾಂಕ್ ತಂತ್ರವಷ್ಟೆ

ರಾಜ್ಯ ಸರ್ಕಾರದ ವಿರುದ್ಧ ದಲಿತ ಸಂಘಟನೆಗಳ ಒಕ್ಕೂಟ ಆರೋಪ



ಮೈಸೂರು,ಮಾ.31(ಪಿಎಂ)– ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಗಳ ಮೀಸಲಾತಿ ಪ್ರಮಾಣವನ್ನು ಶೇ.15ರಿಂದ 17ಕ್ಕೆ ಹೆಚ್ಚಿಸಿರುವ ಸಂಬಂಧ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯೇ ಬಂದಿಲ್ಲವೆಂದು ಕೇಂದ್ರ ಸಮಾಜ ಕಲ್ಯಾಣ ಇಲಾಖೆ ಸಚಿವರು ಸಂಸತ್ತಿನಲ್ಲೇ ಮೊನ್ನೆ ಹೇಳಿದ್ದಾರೆ. ಇದನ್ನು ನೋಡಿದರೆ ಪರಿಶಿಷ್ಟ ಜಾತಿಗಳ ಮತಬ್ಯಾಂಕಿನ ಮೇಲೆ ಕಣ್ಣಿಟ್ಟು ಈ ನಿರ್ಧಾರ ಕೈಗೊಂಡಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ ಎಂದು ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ ಆರೋಪಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಎಡತೊರೆ ಎಂ.ನಿಂಗರಾಜ್, ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಗಳ ಮೀಸಲಾತಿಯನ್ನು ಶೇ.17ಕ್ಕೆ ಹೆಚ್ಚಿಸಿರುವುದನ್ನು ಘೋಷಿಸಿ ಮೂರು ತಿಂಗಳ ಮೇಲಾಗಿದೆ. ಆದರೆ ಸಂವಿಧಾನದ 9ನೇ ಶೆಡ್ಯೂಲ್‌ನಲ್ಲಿ ಈವರೆಗೆ ಸೇರಿಸಿಲ್ಲ. ಇದನ್ನು ಗಮನಿಸಿದರೆ ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಗಳ ಮತ ಪಡೆಯಲು ನಾಟಕವಾಡುತ್ತಿರುವುದು ಸ್ಪಷ್ಟವಾಗುತ್ತದೆ ಎಂದು ದೂರಿದರು.

ನ್ಯಾ. ನಾಗಮೋಹನ್‌ದಾಸ್ ಅವರ ವರದಿಯ ನಂತರ ಪರಿಶಿಷ್ಟ ಜಾತಿಗಳಿಗೆ ಇದ್ದ ಶೇ15ರಷ್ಟು ಮೀಸಲಾತಿಯನ್ನು ಶೇ.17ಕ್ಕೆ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿಯನ್ನು ಶೇ.3ರಿಂದ 7ಕ್ಕೆ ರಾಜ್ಯ ಸರ್ಕಾರ ಹೆಚ್ಚಳ ಮಾಡಿದೆ. ಒಟ್ಟಾರೆ ಮೀಸಲಾತಿ ಪ್ರಮಾಣವು ಸುಪ್ರೀಂ ಕೋರ್ಟ್ ವಿಧಿಸಿರುವ ಶೇ.50ರಷ್ಟು ಮೀರು ವಂತಿಲ್ಲ. ಇದನ್ನು ಮೀರಬೇಕಾದರೆ ಸಂವಿ ಧಾನದ 9ನೇ ಶೆಡ್ಯೂಲ್‌ಗೆ ಸಂಸತ್ತಿನಲ್ಲಿ ತಿದ್ದುಪಡಿ ತರಬೇಕು. ಆದರೆ ಪರಿಶಿಷ್ಟ ಜಾತಿಗಳ ಮೀಸಲಾತಿ ಪ್ರಮಾಣ ಹೆಚ್ಚಳದ ಶಿಫಾರಸ್ಸು ಕೇಂದ್ರ ಸರ್ಕಾರಕ್ಕೆ ಸಲ್ಲಿಕೆಯೇ ಆಗಿಲ್ಲವೆಂದು ಮೊನ್ನೆ ಸಮಾಜ ಕಲ್ಯಾಣ ಇಲಾಖೆಯ ಕೇಂದ್ರ ಸಚಿವರೇ ಸಂಸತ್ತಿನಲ್ಲಿ ಉತ್ತರಿಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ.ಜಾ ಪಟ್ಟಿಯಿಂದ ಸ್ಪೃಶ್ಯ ಜಾತಿ ಕೈಬಿಡಿ: ಇಡಬ್ಲ್ಯೂಎಸ್ ಮೀಸಲಾತಿ ಜಾರಿಗೆ ಕೇವಲ ಐದು ದಿನಗಳಲ್ಲಿ ಲೋಕಸಭೆ, ರಾಜ್ಯಸಭೆ ಅನುಮೋದನೆಯೊಂದಿಗೆ ರಾಷ್ಟ್ರಪತಿಗಳ ಅನುಮೋದನೆ ಪಡೆಯಲಾಯಿತು. ಆದರೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಹೆಚ್ಚಳದ ವಿಚಾರದಲ್ಲಿ ಅದೇ ಆಸಕ್ತಿ ಮಾತ್ರ ತೋರುತ್ತಿಲ್ಲ. ಇದೀಗ ನ್ಯಾ.ಸದಾಶಿವ ಆಯೋಗದ ವರದಿ ಜಾರಿಯೇ ಆಗಿಬಿಟ್ಟಿತು ಎನ್ನುವಂತೆ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿರುವ ಜಾತಿಗಳು ಒಳಮೀಸಲಾತಿ ವಿರೋಧಿಸಿ ಹೋರಾಟ ಆರಂಭಿಸಿವೆ. ಬೇರೆ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಸ್ಪೃಶ್ಯ ಜಾತಿಗಳು ರಾಜ್ಯದಲ್ಲಿ ಪರಿಶಿಷ್ಟ ಜಾತಿ ಪಟ್ಟಿಗೆ ನುಸುಳಿ ಕೊಂಡಿದ್ದು, ಸ್ಪೃಶ್ಯ ಜಾತಿಗಳನ್ನು ಪರಿಶಿಷ್ಟ ಜಾತಿ ಪಟ್ಟಿಯಿಂದ ಕೈಬಿಡಬೇಕು ಎಂದು ಒತ್ತಾಯಿಸಿದರು. ಒಕ್ಕೂಟದ ಉಪಾಧ್ಯಕ್ಷ ಎಂ.ಲೋಕೇಶ್, ಪ್ರಧಾನ ಕಾರ್ಯದರ್ಶಿ ಕೆ.ನಂಜಪ್ಪ ಬಸವನಗುಡಿ, ಖಜಾಂಚಿ ಡಿ. ಕುಮಾರ್, ಕಾರ್ಯಕಾರಿ ಸಮಿತಿ ಸದಸ್ಯ ಕುಮಾರ್, ಮುಖಂಡ ಶಂಬಯ್ಯ ಗೋಷ್ಠಿಯಲ್ಲಿದ್ದರು.

ಚುನಾವಣಾ ನೀತಿ ಸಂಹಿತೆ ಹಿನ್ನೆಲೆ

ಮೈಸೂರಲ್ಲಿ ಮುಂದುವರೆದ ಪೊಲೀಸರ ವಾಹನ ತಪಾಸಣೆ



ಮೈಸೂರು, ಮಾ.31(ಆರ್‌ಕೆ)– ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಪ್ರಮುಖ ರಸ್ತೆಗಳಲ್ಲದೆ ಮೈಸೂರು ನಗರದಾದ್ಯಂತ ಪೊಲೀಸರು ವಾಹನಗಳ ತಪಾಸಣೆಯನ್ನು ಮುಂದುವರಿಸಿದ್ದಾರೆ.

ವಿಶೇಷವಾಗಿ ಕಾರುಗಳು, ಸರಕು ಸಾಗಣೆ ವಾಹನ, ಪ್ಯಾಸೆಂಜರ್ ಟೆಂಪೋಗಳ ಮೇಲೆ ನಿಗಾ ಇಡುತ್ತಿರುವ ಪೊಲೀಸರು, ಹಣ, ಆಭರಣ, ಗೃಹೋಪಯೋಗಿ ವಸ್ತುಗಳು ಹಾಗೂ ಶಸ್ತ್ರಾಸ್ತ್ರಗಳ ಸಾಗಣೆ ಪರಿಶೀಲಿಸುತ್ತಿದ್ದಾರೆ. 50 ಸಾವಿರ ರೂ.ಗಳಿಗಿಂತ ಹೆಚ್ಚು ಹಣ ಒಯ್ಯುವವರನ್ನು ವಿಚಾರಣೆಗೊಳಪಡಿಸಿ ಎಲ್ಲಿಂದ ಎಲ್ಲಿಗೆ, ಯಾವ ಉದ್ದೇಶಕ್ಕೆ ಕೊಂಡೊಯ್ಯಲಾಗುತ್ತಿದೆ ಎಂಬುದಕ್ಕೆ ಪೂರಕ ಮಾಹಿತಿ ಹಾಗೂ ದಾಖಲಾತಿಗಳನ್ನು ಪಡೆಯಲಾಗುತ್ತಿದೆ.

ಒಂದು ವೇಳೆ ಸೂಕ್ತ ವಿವರಣೆ, ದಾಖಲೆಗಳನ್ನು ನೀಡದಿದ್ದರೆ ನೀತಿ ಸಂಹಿತೆ ಉಲ್ಲಂಘನೆಯಡಿ ಪ್ರಕರಣ ದಾಖಲಿಸಿ ಮಾಲನ್ನು ವಶಪಡಿಸಿಕೊಂಡು ಸಂಬಂಧಪಟ್ಟ ಅಧಿಕಾರಿಗಳಿಗೆ ಒಪ್ಪಿಸುತ್ತಿರುವ ಪೊಲೀಸರು, ಅನುಮಾನಾಸ್ಪದ ವ್ಯಕ್ತಿಗಳು, ಸಾಮಗ್ರಿಗಳ ಮೇಲೂ ವಿಶೇಷ ನಿಗಾ ಇರಿಸುತ್ತಿದ್ದಾರೆ.

ಎಸಿಪಿ ಮಟ್ಟದ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಡಾಬಾ, ರೆಸ್ಟೋರೆಂಟ್‌ಗಳ ಮೇಲೂ ದಾಳಿ ಮಾಡುತ್ತಿರುವ ಪೊಲೀಸರು, ಅಕ್ರಮವಾಗಿ ಗ್ರಾಹಕರಿಗೆ ಮದ್ಯ ಸರಬರಾಜು ಮಾಡಿದ್ದರೆ ಅಂತಹವರಿಗೆ ಪ್ರಕರಣ ದಾಖಲಿಸಿ ಕಾನೂನು ರೀತಿಯ ಕ್ರಮಕ್ಕೆ ಮುಂದಾಗಿದ್ದಾರೆ.

ನಿಗದಿತ ಅವಧಿಗಿಂತ ಹೆಚ್ಚು ಕಾಲ ತೆರೆದಿರುವ ಬಾರ್, ರೆಸ್ಟೋರೆಂಟ್, ವಾಣಿಜ್ಯ ಚಟುವಟಿಕೆಗಳನ್ನು ಬಂದ್ ಮಾಡಿಸುತ್ತಿರುವುದಲ್ಲದೆ, ತಡರಾತ್ರಿ ಕಾರಣವಿಲ್ಲದೆ ಅನಗತ್ಯವಾಗಿ ಓಡಾಡುವವರ ವಿರುದ್ಧವೂ ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದಾರೆ. ರೌಡಿ ಚಟುವಟಿಕೆ, ಮಾರಕಾಸ್ತ್ರ ಹಿಡಿದು ಓಡಾಡುವವರಿಗೂ ಚುರುಕು ಮುಟ್ಟಿಸುತ್ತಿರುವುದು ಮೈಸೂರು ನಗರದಲ್ಲಿ ಕಂಡು ಬರುತ್ತಿದೆ.

ನಾಳೆ ಮಕ್ಕಳ ಪಾಲನೆ ಕುರಿತು ಪೋಷಕರಿಗೆ ಕಾರ್ಯಾಗಾರ

ಮೈಸೂರು,ಮಾ.31(ಪಿಎಂ)– ಪವರ್‌ಫುಲ್ ಮೈಂಡ್ಸ್ ಸಂಸ್ಥೆ ವತಿಯಿಂದ ಏ.2ರಂದು ಮಕ್ಕಳ ಆರೋಗ್ಯಕರ ಬೆಳವಣಿಗೆ ಕುರಿತು ಪೋಷಕರಿಗೆ ಉಚಿತ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಮಾನಸಿಕ ಆರೋಗ್ಯ ಆಪ್ತ ಸಮಾಲೋಚಕಿ ಬಿ.ಎಲ್.ವೇದಪ್ರದಾ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4ರಿಂದ 5.30ರವರೆಗೆ ಮೈಸೂರಿನ ಸಿದ್ಧಾರ್ಥನಗರದ ಗೀತಾ ಸ್ಕೂಲ್ ಹಿಂಭಾಗದ ಹೋಟೆಲ್ ಮಧು ನಿವಾಸದ ಮೊದಲನೇ ಮಹಡಿಯಲ್ಲಿರುವ ಪ್ರೇರಣಾ ಅಕಾಡೆಮಿಯಲ್ಲಿ ಕಾರ್ಯಾಗಾರ ನಡೆಯಲಿದೆ ಎಂದರು.

ಶೈಕ್ಷಣಿಕ ಕ್ಷೇತ್ರದಲ್ಲಿನ ಒತ್ತಡದಿಂದ ಭಾರತದಲ್ಲಿ ಶೇ.36ರಷ್ಟು ಮಕ್ಕಳು ಖಿನ್ನತೆಗೆ ಒಳಗಾಗಿದ್ದಾರೆ ಎಂದು ಅಂಕಿ–ಅಂಶಗಳು ಹೇಳುತ್ತಿವೆ. ಹಾಗಾಗಿ ಮಕ್ಕಳ ಪಾಲನೆಯಲ್ಲಿ ಪೋಷಕರು ಎಚ್ಚರಿಕೆಯ ಹೆಜ್ಜೆ ಇಡಬೇಕು. ಪೋಷಕರು ಮತ್ತು ಮಕ್ಕಳ ಕೋಪವನ್ನು ನಿಯಂತ್ರಿಸುವುದು ಹಾಗೂ ಭಾವನಾತ್ಮಕ ಸಂಬಂಧ ಗಟ್ಟಿಗೊಳಿಸುವ ಬಗ್ಗೆ ಕಾರ್ಯಾಗಾರದಲ್ಲಿ ಚರ್ಚೆ ಮತ್ತು ವಿಚಾರ ವಿನಿಮಯ ನಡೆಯಲಿದೆ ಎಂದು ಹೇಳಿದರು. ಕಾರ್ಯಾಗಾರದಲ್ಲಿ 100 ಮಂದಿ ಪಾಲ್ಗೊಳ್ಳಲು ಅವಕಾಶವಿದ್ದು, ಆಸಕ್ತರು ನೋಂದಣಿಗಾಗಿ ಮೊ.ಸಂ. 98807 92029 ಅನ್ನು ಸಂಪರ್ಕಿಸಬಹುದು ಎಂದರು. ಪ್ರೇರಣಾ ಅಕಾಡೆಮಿ ನಿರ್ದೇಶಕ ಕೊರಾನಿ ಮತ್ತಿತರರು ಗೋಷ್ಠಿಯಲ್ಲಿದ್ದರು.



ಮೈಸೂರು ವಿವಿ ನೂತನ ಕುಲಪತಿ ಎನ್.ಕೆ. ಲೋಕನಾಥ್ ಅವರನ್ನು ಜೆ.ಕೆ. ಟೈರ್ಸ್ ನೌಕರರ ಸಂಘದ ಮಾಜಿ ಜಂಟಿ ಕಾರ್ಯದರ್ಶಿ ಕೆ.ಬಿ. ಶೇಖರ್, ಅನ್ವೇಷಣಾ ಜನಸೇವಾ ಟ್ರಸ್ಟ್ ಖಜಾಂಚಿ ಕೆ.ಕೆ. ಭಾಸ್ಕರ್, ವಿನಯ್ ಇತರರು ಅಭಿನಂದಿಸಿದರು.

ಬಸವ ಕಲ್ಯಾಣ ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಮರಳಿ ಜೆಡಿಎಸ್ ಸೇರ್ಪಡೆ

ಬೆಂಗಳೂರು, ಮಾ.31(ಕೆಎಂಶಿ)–ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ಅವರು ಶುಕ್ರವಾರ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಸಮಕ್ಷಮದಲ್ಲಿ ಮರಳಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಯಾದರು. ಜೆಡಿಎಸ್ ಪಕ್ಷದ ಶಾಲು ಹಾಕುವ ಮೂಲಕ ಕುಮಾರಸ್ವಾಮಿ, ಖೂಬಾ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು. ಶುಭ ಸಮಯ ಇದ್ದ ಕಾರಣಕ್ಕೆ ಮಾಜಿ ಮುಖ್ಯಮಂತ್ರಿಗಳ ನಿವಾಸಕ್ಕೆ ತೆರಳಿ ಪಕ್ಷಕ್ಕೆ ಸೇರ್ಪಡೆ ಆಗಿದ್ದಾಗಿ ಖೂಬಾ ತಿಳಿಸಿದ್ದಾರೆ.



ಜೆಡಿಎಸ್ ಪಕ್ಷದಿಂದ ಬಸವ ಕಲ್ಯಾಣ ಕ್ಷೇತ್ರವನ್ನು ಎರಡು ಅವಧಿಗೆ ಪ್ರತಿನಿಧಿಸಿದ್ದ ಖೂಬಾ, ಕಾರಣಾಂತರಗಳಿಂದ ಅವರು ಪಕ್ಷ ಬಿಟ್ಟಿದ್ದರು. ಈಗ ಮರಳಿ ತಮ್ಮ ಮನೆಗೆ ವಾಪಸ್ ಆಗಿದ್ದಾರೆ. ಒಳ್ಳೆಯ ಸಮಯ ಇದೆ ಎನ್ನುವ ಕಾರಣಕ್ಕೆ ಬಂದು ಪಕ್ಷಕ್ಕೆ ಸೇರಿದರು. ಶೀಘ್ರದಲ್ಲಿಯೇ ಅವರು ಪಕ್ಷದ ರಾಜ್ಯ ಕಚೇರಿಯಲ್ಲಿ ರಾಜ್ಯಾಧ್ಯಕ್ಷರಾದ ಸಿ.ಎಂ.ಇಬ್ರಾಹಿಂ, ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ್ ಮತ್ತಿತರೆ ಹಿರಿಯ ನಾಯಕರ ಸಮಕ್ಷಮದಲ್ಲಿ ತಮ್ಮ ಬೆಂಬಲಿಗರ ಜತೆ ಪಕ್ಷಕ್ಕೆ ಅಧಿಕೃತವಾಗಿ ಸೇರಿಕೊಳ್ಳಲಿದ್ದಾರೆ ಎಂದು ಕುಮಾರಸ್ವಾಮಿ ತಿಳಿಸಿದರು.

ಪ್ರವರ್ಗ 2ಎ ಮೀಸಲಾತಿ ಹೆಚ್ಚಳಕ್ಕೆ ಕಿವಿಗೊಡದ ಬಿಜೆಪಿ ಸರ್ಕಾರದ ನಿಲುವು ಖಂಡಿಸಿ

ಏ.3ರಂದು ‘ಬಿಜೆಪಿ ಅಳಿಸಿ, ಮೀಸಲಾತಿ ಉಳಿಸಿ’ ಅಭಿಯಾನಕ್ಕೆ ಚಾಲನೆ

ಮೈಸೂರು,ಮಾ.31(ಪಿಎಂ)– ಹಿಂದುಳಿದ ಜಾತಿಗಳಿರುವ ‘ಪ್ರವರ್ಗ 2ಎ’ ಮೀಸಲಾತಿ ಪ್ರಮಾಣ ಹೆಚ್ಚಿಸಲು ಹೋರಾಟ ಮಾಡಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರೂ ಸ್ಪಂದಿಸಿಲ್ಲ. ‘ಪ್ರವರ್ಗ 2ಎ’ ಮೀಸಲಾತಿ ರದ್ದುಪಡಿಸಲು ಆರ್‌ಎಸ್‌ಎಸ್ ಮತ್ತು ಬಿಜೆಪಿ ಹುನ್ನಾರ ನಡೆಸಿವೆ ಎಂದು ಆರೋಪಿಸಿರುವ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಈ ಹಿನ್ನೆಲೆಯಲ್ಲಿ ಸಂಘಟನೆಯಿಂದ ಏ.3ರಂದು ‘ಬಿಜೆಪಿ ಅಳಿಸಿ, ಮೀಸಲಾತಿ ಉಳಿಸಿ’ ಅಭಿಯಾನಕ್ಕೆ ಚಾಲನೆ ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪ್ರವರ್ಗ 2ಸಿ’ಗೆ ಶೇ.6ರಷ್ಟು ಮೀಸಲಾತಿ ಹಾಗೂ ‘ಪ್ರವರ್ಗ 2ಡಿ’ಗೆ ಶೇ.7ರಷ್ಟು ಮೀಸಲಾತಿ ನೀಡಿರುವುದನ್ನು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಸ್ವಾಗತಿಸಲಿದೆ. ಆದರೆ 197 ಹಿಂದುಳಿದ ಜಾತಿಗಳಿರುವ ‘ಪ್ರವರ್ಗ 2ಎ’ಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳ ಮಾಡ ಬೇಕೆಂದು ಹೋರಾಟ ಮಾಡಿದರೂ ಪ್ರಯೋಜನವಾಗಲಿಲ್ಲ. ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರೂ ಅವರು ಸ್ಪಂದಿಸಲಿಲ್ಲ ಎಂದು ದೂರಿದರು.

‘ಪ್ರವರ್ಗ 2ಬಿ’ಯಡಿಯಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಶೇ.4ರಷ್ಟು ಮೀಸಲಾತಿ ಪಡೆಯುತ್ತಿದ್ದರು. ಅದನ್ನು ಈಗ ರದ್ದುಪಡಿಸಿ ಇಡಬ್ಲ್ಯೂಎಸ್ ಮೀಸಲಾತಿಗೆ ಸೇರ್ಪಡೆ ಮಾಡಿದ್ದು, ಆ ಮೂಲಕ ಮುಸ್ಲಿಂ ಸಮುದಾಯದ ಮೀಸಲಾತಿ ರದ್ದುಪಡಿಸಲಾಗಿದೆ. ಮುಂದಿನ ದಿನಗಳಲ್ಲಿ ಹಿಂದುಳಿದ ಜಾತಿಗಳಿರುವ ‘ಪ್ರವರ್ಗ 2ಎ’ ಮೀಸಲಾತಿ ರದ್ದುಪಡಿಸುವ ಮುನ್ಸೂಚನೆ ಇದಾಗಿದೆ. ಕೇಂದ್ರ ಸರ್ಕಾರದ ಹಿಂದುಳಿದ ವರ್ಗದ ಪಟ್ಟಿಯಲ್ಲಿರುವ ಜಾತಿಗಳನ್ನು ಇಡಬ್ಲ್ಯೂಎಸ್ ಮೀಸಲಾತಿ ಪಟ್ಟಿಗೆ ಸೇರಿಸುವಂತಿಲ್ಲ ಎಂಬ ಮಾನದಂಡವಿದೆ. ಕೇಂದ್ರದ ಈ ಪಟ್ಟಿಯಲ್ಲಿ ಮುಸ್ಲಿಂ ಸಮುದಾಯವಿದ್ದು, ಅದಾಗ್ಯೂ ರಾಜ್ಯ ಸರ್ಕಾರ ಮುಸ್ಲಿಂ ಸಮುದಾಯವನ್ನು ಇಡಬ್ಲ್ಯೂಎಸ್ ಮೀಸಲಾತಿ ಪಟ್ಟಿಗೆ ಸೇರ್ಪಡೆ ಮಾಡಿದೆ. ಇದು ಊರ್ಜಿತವಲ್ಲ ಎಂದು ಪ್ರತಿಪಾದಿಸಿದರು.

ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಹಿಂದುಳಿದ ವರ್ಗಗಳು ಹಾಗೂ ಮುಸ್ಲಿಂ ಸಮುದಾಯ ಬಿಜೆಪಿ ವಿರುದ್ಧ ಮತ ಚಲಾಯಿಸಬೇಕು. ಆ ಮೂಲಕ ಬಿಜೆಪಿಗೆ ತಕ್ಕ ಪಾಠ ಕಲಿಸಬೇಕು. ಈ ವಿಚಾರದಲ್ಲಿ ಜಾಗೃತಿ ಮೂಡಿಸಲು ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಅಭಿಯಾನಕ್ಕೆ ಚಾಲನೆ ನೀಡಿದ ನಂತರ ಏ.6ರಂದು ಮೈಸೂರಿನಲ್ಲಿ ಸಭೆ ನಡೆಸಿ, ಅಭಿಯಾನ ವಿಸ್ತರಣೆಗೆ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಕುಂಬಾರರ ಸಂಘದ ಅಧ್ಯಕ್ಷ ಹೆಚ್.ಎಸ್.ಪ್ರಕಾಶ್, ಜಿಲ್ಲಾ ಉಪ್ಪಾರರ ಸಂಘದ ಯೋಗೇಶ್ ಉಪ್ಪಾರ, ವಿಶ್ವಕರ್ಮ ಯುವ ವೇದಿಕೆ ಅಧ್ಯಕ್ಷ ಕೆಂಡಗಣ್ಣಸ್ವಾಮಿ, ಕಾಂಗ್ರೆಸ್ ಓಬಿಸಿ ಘಟಕದ ರಾಜ್ಯ ಕಾರ್ಯದರ್ಶಿ ಹರೀಶ್ ಮೊಗಣ್ಣ, ಹಿಂದುಳಿದ ವರ್ಗಗಳ ಮುಖಂಡರಾದ ಆರ್.ಕೆ.ರವಿ, ಮಹೇಶ್ ಗೋಷ್ಠಿಯಲ್ಲಿದ್ದರು.

ವಿಧಾನಸಭಾ ಚುನಾವಣೆ: ಸರ್ಕಾರಿ ನೌಕರರಿಗೆ ವೇತನ ಸಹಿತ ರಜೆ

ಬೆಂಗಳೂರು: ಕರ್ನಾಟಕ ವಿಧಾನಸಭಾ ಚುನಾವಣೆ 2023ಕ್ಕೆ ದಿನಾಂಕ ಪ್ರಕಟವಾಗಿದ್ದು, ಮತದಾನದ ದಿನದಂದು ಎಲ್ಲಾ ನೌಕರರಿಗೆ ವೇತನ ಸಹಿತ ರಜೆಯನ್ನು ನೀಡುವಂತೆ ಕೇಂದ್ರ ಚುನಾವಣಾ ಆಯೋಗ ಸೂಚಿಸಿದೆ.

ಈ ಸಂಬಂಧ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಸಂಜೀವ್ ಕುಮಾರ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ರಾಜ್ಯ ಚುನಾವಣಾ ಆಯೋಗದ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸ್ವಾಮ್ಯಕ್ಕೆ ಒಳಪಟ್ಟ ಸಂಸ್ಥೆಗಳು, ಸರ್ಕಾರಿ ಹಾಗೂ ಖಾಸಗಿ, ಅನುದಾನಿತ, ಅನುದಾನರಹಿತ ಶಿಕ್ಷಣ ಸಂಸ್ಥೆಗಳು, ಔದ್ಯಮಿಕ ಸಂಸ್ಥೆಗಳ ಹಾಗೂ ಇನ್ನಿತರ ಸಂಸ್ಥೆಗಳಿಗೆ ಮೇ 10ರಂದು ಸಾರ್ವತ್ರಿಕ ರಜೆ ಘೋಷಿಸುವಂತೆ ತಿಳಿಸಿದ್ದಾರೆ.

ಎಲ್ಲಾ ವ್ಯವಹಾರಿಕ, ಔದ್ಯಮಿಕ ಸಂಸ್ಥೆಗಳು ಮತ್ತು ಇನ್ನಿತರ ಎಸ್ಟಾಬ್ಲಿಷ್ ಮೆಂಟ್‌ಗಳಲ್ಲಿ ಖಾಯಂ ಅಥವಾ ದಿನಗೂಲಿ ಮೇಲೆ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ನೌಕರರಿಗೆ ಮತದಾನ ಮಾಡಲು ಅನನುಕೂಲವಾಗುವಂತೆ ರೆಪ್ರೆಸೆಂಟೇಷನ್ ಆಫ್ ಪೀಪಲ್ ಆಕ್ಟ್ 1951ರ ಕಲಂ 135ಬಿ ರಡಿಯಲ್ಲಿ ವೇತನ ಸಹಿತ ರಜೆ ನೀಡಲು ಸೂಚಿಸಿದ್ದಾರೆ.

ಕೇಂದ್ರ ಚುನಾವಣಾ ಆಯೋಗದ ಸೂಚನೆಯ ಮೇರೆಗೆ ಶೀಘ್ರವೇ ರಾಜ್ಯದ ಮುಖ್ಯ ಚುನಾವಣಾ ಆಯುಕ್ತರು ಆದೇಶ ಹೊರಡಿಸಲಿದ್ದಾರೆ. ಅದರಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮೇ.10ರಂದು ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ ಆಕ್ಟ್ 1881, ಕಲಂ 25ರಡಿ ಮತ್ತು ರೆಪ್ರೆಸೆಂಟೇಷನ್ ಆಫ್ ಪೀಪಲ್ ಆಕ್ಟ್ 1951ರ ಕಲಂ 135ಬಿ ರಡಿಯಲ್ಲಿ ವೇತನ ಸಹಿತ ರಜೆಯನ್ನು ಮೇ.10ರಂದು ಘೋಷಣೆ ಮಾಡಲಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
MECHANICAL in ITI / Diploma candidate
Male / Female required. Walk-in
HONDA POINT
High Tension Double Road, Vijayanagar 2nd Stage, Mysore - 570 017
Mob: 96320-23436

FOR SALE
Running Floor mill Equipment in Good Condition
* Plate Mills - 2 Nos
* Emary Mills (16"+18") 1+1=2 Nos
* Destone Mill Unit - 1 Nos
* Ragi Polisher - 1 Nos
* Chilly Cutter - 1 Nos
* 5 HP Motors - 2 Nos
* 7.5 HP Motor - 1 No

9901212321 / 8880883339

WANTED
Hiring for ITI candidates fresher / experienced.
Designation: Technician and Electrician.
Location: Honnassiri Nissan Mysore.
Contact details: 9036213762

HOUSE FOR RENT
20X30 House for Rent # 491, 19th Cross, Aravindanagar, Mysore. Two Bed Rooms, Kitchen Hall, Bath Room, Gas geyser Contact: Owner: S V Nagabhushana
9980164139
9739063800

ತಕ್ಷಣ ಬೇಕಾಗಿದ್ದಾರೆ
1) ಸಿವಿಲ್ ಇಂಜಿನಿಯರ್– 2 ನಂಬರ್
2) ಕಂಪ್ಯೂಟರ್ ಆಪರೇಟರ್–1ನಂ. ವಿದ್ಯಾರ್ಹತೆ: (B.Com)
ಸಂಪರ್ಕಿಸಬೇಕಾದ ಸಂಖ್ಯೆ
9880802232

ನಿವೇಶನ ಮಾರಾಟಕ್ಕಿದೆ
ಸರ್.ಎಂ.ವಿ. ಬಡಾವಣೆಯಲ್ಲಿ ಸೈಟ್ ನಂ 261, 60x40, W/F
MUDA Approved
ಆರ್.ಟಿ.ನಗರ ಹತ್ತಿರ, ಲಿಂಗಾಬುದಿ ಪಾಳ್ಯ, ಮೈಸೂರು
(Broker Excuse)
ಸಂಪರ್ಕಿಸಿ: 9480384038

WANTED D.T.P OPERATOR
Experience in Pagemaker, CorelDRAW & Typing Speed in KANNADA & ENGLISH
9886310048, 9886658463

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಶುಂಠಿ ಕೃಷೀಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್ #203, ಬನ್ನಿಮಂಟಪ ಬಡಾವಣೆ, ಮೈಸೂರು–570 015
Mob: 80888-87802

ಕಡಿಮೆ ಬೆಲೆ / ಉತ್ತಮ ಸರ್ವೀಸ್
ಕಾಪರ್ ಗ್ಯಾಸ್ ಪೈಪ್ – 120/- per. ft ಎಲ್ಲಾ ರೀತಿಯ ಗ್ಯಾಸ್ ಸ್ಟೌವ್, ಗ್ಯಾಸ್ ಗೀಜರ್ + ಹಬ್‌ಸ್ಟೌವ್, ಚಿಮಿನಿ ಸರ್ವೀಸ್
ಆಫರ್ 2 ದಿನ ಮಾತ್ರ.



8088888115
www.app2serv.com

FOR SALE
1) 30x40 sites in Defence Apartment Near Kote Road, 2) 17/60 House Near Kamakshi Hospital, 3) 40x60 2 sites Near Ring Road, 4) 30x40 N G+2 House Near Ashwini Choultry Srirampura, 5) 12/36 House G+2 Kuvempu Nagar
9035990359, 9538690359

ಮನೆ ಬಾಡಿಗೆಗಿದೆ
30x40 ಅಳತೆ ಪೂರ್ವಕ್ಕೆ ಬಾಗಿಲು ಗ್ರೌಂಡ್‌ಫ್ಲೋರ್ ನೀರು, ಸೋಲಾರ್, ವಾಲ್‌ಡ್ರೋಬ್ ವ್ಯವಸ್ಥೆ ಇದೆ.
ನಂ.40, ವಿವೇಕಾನಂದ ಬ್ಲಾಕ್, ಶಿಕ್ಷಕರ ಬಡಾವಣೆ, ಮೈಸೂರು. ಸಸ್ಯಾಹಾರಿಗಳಿಗೆ ಮಾತ್ರ, ಆಸಕ್ತಿ ಇರುವ ಬ್ಯಾಂಕ್/ಸರ್ಕಾರಿ ಉದ್ಯೋಗಸ್ಥರುಗಳ ಕೆಳಕಂಡ ಫೋನ್‌ಗೆ ಸಂಪರ್ಕಿಸಬಹುದು.
9035085532, 9480711080

ಸೈಟ್ಸ್ @ ಮೈಸೂರು
T-Narasipura Road
ವರುಣ ಲೇಕ್ ವ್ಯೂ
MUDA APPROVED
ಮುಂಬರಲಿರುವ ಜೆಎಸ್‌ಎಸ್ ಯೂನಿವರ್ಸಿಟಿ ಹತ್ತಿರ
GSS 89512-76688

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
FAMOUS ASTROLOGER
ಪಂ. ಎಸ್.ಮಣಿಕಂಠನ್
ಮೊ: 9480743991
ಪ್ರೀತಿಯಲ್ಲಿ ನಂಬಿ ಮೋಸ, ಹಣಕಾಸು, ಶತ್ರುಕಾಟ, ಸ್ತ್ರೀಪುರುಷ, ಪ್ರೇಮ, ಗುಪ್ತ ಸಮಸ್ಯೆ, ಗಂಡ–ಹೆಂಡತಿ ಕಿರಿಕಿರಿ, ಸಾಲಬಾಧೆ, ಅನಾರೋಗ್ಯ ಮದುವೆ, ಸಂತಾನ, ವ್ಯಾಪಾರ, ವಿ.ಸೂ: ಅಘೋರಿ, ಕೊಲ್ಕತ್ತ, ಕೇರಳ, ಕೊಳ್ಳೇಗಾಲ, ಪೂಜಾ ಶಕ್ತಿಯಿಂದ ನಮ್ಮ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ, ನಿಮ್ಮ ಯಾವುದೇ ಗುಪ್ತ ಕಠಿಣ, ಸಮಸ್ಯೆಗಳಿಗೆ 600 ವರ್ಷಗಳ ತಾಳೆಗರಿ ವಿದ್ಯೆಯಿಂದ 100% ಪರಿಹಾರ
ಸೂಚನೆ: ಸರಿಯಾದ ವಿಳಾಸ ತಿಳಿದುಕೊಂಡು ಬನ್ನಿ: ಅಶೋಕ ರಸ್ತೆ, ಈಸ್ಟ್ ಕ್ರಾಸ್ 36, ಮೈಸೂರು

ಸೈಟ್ಸ್ @ ಮೈಸೂರು
ಟಿ.ನರಸೀಪುರ ರಿಂಗ್ ರೋಡ್ ನಿಂದ ಸುಮಾರು 1.5 KMS
MUDA APPROVED
ಸುತ್ತಮುತ್ತ ಮೂಡಾ ಲೇಔಟ್‌ಗಳಿವೆ
GSS 89512-76688

ಸೈಟು ಮಾರಾಟಕ್ಕಿದೆ
ಮೂಡ ಅಪ್ರೂವ್ಡ್
30x40 - North, West
40x60 - N/F, 40x60 - W/F
30x60 - North East Corner
58x60 - North East Corner
ರಿಂಗ್ ರೋಡ್ ಹತ್ತಿರ, ಯೂನಿವರ್ಸಿಟಿ ಲೇಔಟ್ ಎದುರು, 30x50 - E/F, ATME Engineering ಕಾಲೇಜ್ ಪಕ್ಕ, 40x60 - East face ವರುಣ ಹತ್ತಿರ.
Mob: 9900372792

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಪ್ರಸಿದ್ಧ ಐಟಿ ಕಂಪನಿಗೆ ಗುತ್ತಿಗೆ ಆಧಾರದ (ಕಾಂಟ್ರಾಕ್ಟ್) ಮೇಲೆ ಹೌಸ್ ಕೀಪಿಂಗ್ ಕೆಲಸ ಮಾಡುವ ಹುಡುಗರು ಬೇಕಾಗಿದ್ದಾರೆ. ಸೌಲಭ್ಯಗಳು : ವೇತನ, ಪಿ.ಎಫ್., ಇ.ಎಸ್.ಐ, ವಾರ್ಷಿಕ ಬೋನಸ್, ವಾರ್ಷಿಕ ಸಂಬಳ ಹೆಚ್ಚಳಿಕೆ, ಗ್ರಾಚ್ಯುಟಿ, ಸಮವಸ್ತ್ರ ಮತ್ತು ಶೂ. ವೇತನ ರೂ.13,800/– ವಯೋಮಿತಿ 18 ರಿಂದ 35 ವರ್ಷ, ವಿದ್ಯಾರ್ಹತೆ: 7 ರಿಂದ 10ನೇ ತರಗತಿ ಪಾಸ್ ಅಥವಾ ಫೇಲ್. ಆಸಕ್ತಿಯುಳ್ಳವರು ಸಂಪರ್ಕಿಸಿ: ಎಸ್.ಎಲ್.ಎನ್.ಫೆಸಿಲಿಟಿ ಮ್ಯಾನೇಜ್‌ಮೆಂಟ್ ಪ್ರೈ.ಲಿ., ನಂ.291/ಸಿ, ಹರಿಲಮ್ಮ ಬಿಲ್ಡಿಂಗ್, ಎಸ್.ಎಸ್.ಟಿ.ಪಿ. ಎದುರು, ಆರೋಮ ಬೇಕರಿ ಫ್ಯಾಕ್ಟರಿ ಔಟ್ ಲೆಟ್ ಪಕ್ಕದಲ್ಲಿ, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ಮೈಸೂರು – 570017
9900509554 / 8105669977

ವಧು ಬೇಕಾಗಿದೆ
ಮೈಸೂರಿನಲ್ಲಿ ವಾಸವಾಗಿರುವ 40 ವರ್ಷದ ವೀರಶೈವ ಲಿಂಗಾಯಿತ ವರನಿಗೆ 30 ವರ್ಷ ಮೇಲ್ಪಟ್ಟ ವೀರಶೈವ ಲಿಂಗಾಯಿತ ವಧು ಬೇಕಾಗಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9945646919

ಮನೆಯಲ್ಲಿ ಮದುವೆಯೇ
A TO Z ಕಾರ್ಯಗಳಿಗೆ ಸಂಪರ್ಕಿಸಿ
1) ಅಡುಗೆಯವರಿಗಾಗಿ
2) Flower Decoration
3) Photographer
4) ವಾದ್ಯದವರಿಗಾಗಿ ಸಂಪರ್ಕಿಸಿ
ಉಚಿತ ಸಲಹೆ ಯಾವುದೇ Fee ಇರುವುದಿಲ್ಲ
9686951040
9945233233

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
17–4–23: ಜಾರ್ಖಂಡ್, ಬಾಬಾ ಬೈದ್ಯನಾಥ್, ಜ್ಯೋತಿರ್ಲಿಂಗ, ಕೊಲ್ಕತ್ತಾ, ಗಂಗಾಸಾಗರ, ಕಪಿಲ ಮುನಿ ದೇವಸ್ಥಾನ, ಭುವನೇಶ್ವರ ಪುರಿ ಜಗನ್ನಾಥ್. 26–4–23: ಜಮ್ಮು ಕಾಶ್ಮೀರ್, ವೈಷ್ಣೋದೇವಿ, ಪಹಲ್‌ಗಾಮ್, ಸೋನಮಾರ್ಗ್, ಗುಲ್‌ಮಾರ್ಗ್. 8–6–23: ಚಾರ್‌ಧಾಮ್ ಯಾತ್ರೆ, ಕೇದಾರನಾಥ್, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ. 7–5–23: ನೇಪಾಳ್, ಮುಕ್ತಿನಾಥ್, ಪಶುಪತಿ ಇತ್ಯಾದಿ.
9591017782, 9964527782

HOUSE FOR SALE
20x30, North facing, MUDA approved (2 BHK - 2 units) Opposite to St. Joseph Central School, Yelwala, Mysore.
Mob: 9513330007

FOR SALE
40x60, KHB Site, 'West Face' Hootagalli for sale.
Mob: 9448054390

WALK-IN INTERVIEW - English Medium
Sri Basaveshwara Vidyalaya, Hullahalli, Hura Road, Mysuru District & SGVK School Ummathur, Chamarajanagar Dist.
Pre-KG to 9th Standard
D.Ed., B.A., B.Sc., B.Com. & B.Ed.
7411585776, 7996781034
email: sgvkhpsschool2023@gmail.com

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

ಸೈಟುಗಳು ಮಾರಾಟಕ್ಕಿದೆ
40x60, 40x70
ಗೌರಿನಗರ ವಸತಿ ಬಡಾವಣೆ ಮೊಸಂಬಾಯನಹಳ್ಳಿ ರಸ್ತೆ ರಾಘವೇಂದ್ರ ಮಠದ ಎದುರು, ಚಿಕ್ಕಳ್ಳಿ ಹತ್ತಿರ
9448023141
9686908102

Water Proofing Renovation Painting
Construction Starting From 1799
2D, 3D Drawing Available
9380997148

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SITE FOR SALE
24 X 40 EAST FACING
12 LAKHS ONLY
1.5 Kms from Kanakadasa Engineering College
30 X 40, 30 X 50 is also available
Booking Advance 2 Lakhs
98800 65122 / 77956 09173

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು–1

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ಮನೆ ವಿಳಾಸ– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

WANTED
Field Officer (Male) candidate. Should be minimum 2-5 year experience in Security Service Field, with good communication skill. Interest candidates send your CV to:
Email: snsoperations95@gmail.com
Contact: 9513999755

ಬಾಡಿಗೆಗೆ ಇದೆ
2 ಮಳಿಗೆ ಮತ್ತು 2 ಬೆಡ್ ರೂಂವುಳ್ಳ ಮನೆ CFTRI ಲೇಔಟ್, ಖಜಾನಾ ಬಡಾವಣೆ, ಬೋಗಾದಿ 2ನೇ ಹಂತ, ಮೈಸೂರು
9742297833

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಕೌಂಟರ್ ಸ್ಟಾಫ್ –2
ವೈಟರ್ –2
ಕ್ಲೀನಿಂಗ್ – 2 (ಮಹಿಳೆಯರು)
ಕಿಚನ್ ಹೆಲ್ಪರ್ –2
ಅಡುಗೆ ಭಟ್ಟರಿಗೆ ಅಸಿಸ್ಟೆಂಟ್ –2
ಕಾಫಿ ಭಟ್ಟರು –1
8296154530
9632782624

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
9731891409

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

Part Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೊರಿಯರ್ ಸೌಲಭ್ಯವಿದೆ).
87490 98879

Dr. D. H. BAGALKOT SEXOLOGIST (Since 1983)
ಲೈಂಗಿಕ ನಿಶ್ಯಕಿ ಹಾಗೂ ನಶಾಮುಕ್ತಿ



ಶೀಘ್ರಸ್ಖಲನ, ಸ್ವಪ್ನದೋಷ, ಹಸ್ತಮೈಥುನ, ನರಗಳ ದೌರ್ಬಲ್ಯ, ಸಂತಾನದೋಷ, ವೀರ್ಯ ತಿಳಿಯಾಗಿ ಹೋಗುವುದು, ಲಿಂಗ ಚಿಕ್ಕದಾಗಿರುವುದು, ಮಧುಮೇಹದಿಂದ ಬರುವ ಲೈಂಗಿಕ ನಿಶ್ಯಕ್ತಿಗೆ ಹಾಗೂ ಮದ್ಯ ಕುಡಿಯುವ ವ್ಯಕ್ತಿಗೆ ಕುಡಿತದ ಚಟ ಬಿಡಿಸಲು ಯಾವುದೇ ಅಡ್ಡ ಪರಿಣಾಮ ಇಲ್ಲದೆ ಸರಳವಾದ ಪರಿಹಾರ
★ಮೈಸೂರು : ಪ್ರತಿ ತಿಂಗಳು 1,2 ಹಾಗೂ 16, 17 ರಂದು ಹೋಟೆಲ್ ಆಶ್ರಯಾ. ಧನವಂತ್ರಿ ರೋಡ
Cell: 9743193428
www.drbagalkot.com

HOUSE FOR RENT
Newly constructed 30x40 semi-furnished 2 BHK house with attached bathroom and all modern amenities for rent in Railway Layout, Bogadi.
8861953636, 9481261253

SITE FOR SALE
30x40 E/F Site In Venkatadri Layout, Near Ragavendra Swamy Temple Road, T.Narasipura Road, Mysore
9686895205
9739703467

ಕೆಲಸಕ್ಕೆ ಬೇಕಾಗಿದ್ದಾರೆ
ಹೆಬ್ಬಾಳ್ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಗೆ (ಇನ್ಫೋಸಿಸ್ ಹತ್ತಿರ) ಅಲ್ಲೇ ವಾಸವಿದ್ದು ಸೆಕ್ಯೂರಿಟಿ ಕೆಲಸ ಮಾಡಲು ದಂಪತಿಗಳು ಬೇಕಾಗಿದ್ದಾರೆ. ಉಚಿತ ವಸತಿಯನ್ನು ಕೊಡಲಾಗುತ್ತದೆ.
8892835885

ಮನೆ ಮಾರಾಟಕ್ಕಿದೆ
30x40, 'D' Block, J.P. Nagar
ಮನೆ ನಂ. 885/7, 17ನೇ Main.
9845122260, 9980516718

Sudarshan Saur
SOLAR WATER HEATER



ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

WANTED
Female Receptionist for a showroom
SALARY Rs.20000/-
Ph.9380142144
SHIVARAMPET, MYSURU

ಬ್ಯೂಟಿಷಿಯನ್ ಬೇಕಾಗಿದ್ದಾರೆ
WANTED BEAUTICAN
ಸಂಪರ್ಕಿಸಿ: ರೂಪಗೌಡ
9880994092

SITE FOR SALE
ನ್ಯೂ R.T.NAGAR, 30X40 ಅಳತೆಯ ಪೂರ್ವ ದಿಕ್ಕಿನ ಸೈಟು ಮಾರಾಟಕ್ಕಿದೆ. ಕ್ಲಿಯರ್ ಟೈಟಲ್ ಡೀಡ್‌ನೊಂದಿಗೆ
9606897207

ಮನೆ ಬಾಡಿಗೆಗೆ ಇದೆ
"ಆಸರೆ" ನಂ.1326, 6ನೇ ಕ್ರಾಸ್ ಲಲಿತಾದ್ರಿ ರಸ್ತೆ, ಕುವೆಂಪುನಗರ, (ಜ್ಞಾನಗಂಗಾ ಸ್ಕೂಲ್ ಎದುರಿಗೆ) 40x60 3 ರೂಂ. ಅಟ್ಯಾಚಡ್ ಬಾತ್‌ರೂಂ ಇದೆ. ಸೋಲಾರ್ ವ್ಯವಸ್ಥೆ ಇದೆ. ಮೈಸೂರು, ಮೊದಲನೇ ಮಹಡಿ
9481071117

TELE MARKETING
B.A, B.com, B.B.M Pass/Fail ಆಗಿರುವ ಹುಡುಗಿಯರು ಟೆಲಿಮಾರ್ಕೆಟಿಂಗ್‌ಗೆ ಬೇಕಾಗಿದ್ದಾರೆ.
9535511101
7676841708

JOB VACANCY
Lab Chemist, Qualifications: BSc Chemistry, Bsc, Agriculture Graduates; Work experience : 2-3 years in the field of fertilizer laboratory as lab technician.
Job Location : Gungral Chatra. Yealwala, Mysore:
9483295337
9353614575

CHANDAN GARMENTS
Kuvempunagar, Mysore
WANTED
Sales Staff-Boys & Girls
9880345710
9916476869

ಇಂದೇ ಸಂಪರ್ಕಿಸಿ
ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ತೆರೆದಿರುವ ಕಂಪನಿಯೊಂದಕ್ಕೆ 128 ವಿವಿಧ ಪೋಸ್ಟ್‌ಗಳಿಗೆ SSLC, PUC & Degree ಆಗಿರುವ ಉತ್ಸಾಹಿ ಯುವಕ/ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿ ಊಟದೊಂದಿಗೆ 14000/- to 30000/- ESI +PF ಸೌಲಭ್ಯವಿದೆ.
9008603466
9980346131

30x40 ಸೈಟು@ Rs.18ಲಕ್ಷ
Muda Approved Layout
ಬ್ಯಾಂಕ್ ಲೋನ್ ಲಭ್ಯ / ತಕ್ಷಣ ನೋಂದಣಿ
ಲಾಲ್‌ಬಹದ್ದೂರ್ ಶಾಸ್ತ್ರಿ ನಗರದ ನಂತರ ರಿಂಗ್ ರೋಡ್‌ನಿಂದ 3 Kms ಸಿಟಿ ಸೆಂಟರ್ ನಿಂದ 13 Kms
9538583377

ಹೋಟೆಲ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ
ಕೌಂಟರ್, ಸಪ್ಲೈಯರ್, ಚೈನೀಸ್ ಹಾಗೂ ನಾರ್ತ್ ಇಂಡಿಯನ್ ಮಹಿಳೆಯರು ಹಾಗೂ ಪುರುಷರು, ಇಬ್ಬರಿಗೂ ಅವಕಾಶವಿದೆ.
9845567554

ಬೇಕಾಗಿದ್ದಾರೆ
ಕುವೆಂಪುನಗರ ಮೈಸೂರಿನಲ್ಲಿ ಅಡುಗೆ ಮನೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ ಉತ್ತಮ ಸಂಬಳ,ಉಳಿದುಕೊಳ್ಳುವ ವ್ಯವಸ್ಥೆ ಇರುವುದು.
9480466276
9901820974

WANTED
Freshers - Male
BE Mech / Electrical
Blow Moulding Operator
Kadakola Industrial Area, Mysore
7353480662

ದೊರೆಯುತ್ತದೆ
ದಿನದ 24 ಗಂಟೆ ಬಿಸಿ ಬಿಸಿ ಇಡ್ಲಿ ಮತ್ತು ಕಾಯಿಚಟ್ನಿ ದೊರೆಯುತ್ತದೆ. ವಿಳಾಸ:# 622, ಸುಪ್ರಭ ನಾಗೇಶ್‌ರಾವ್ ಸೇವಾ ಪ್ರತಿಷ್ಠಾನ (ರಿ) ಶಾರದಾದೇವಿ ನಗರ, ಮೈಸೂರು
8792321257

ವಧು ಬೇಕು & ನಿರಾಶ್ರಿತರಿಗೆ ಕೆಲಸ
46 ವರ್ಷದ ಒಕ್ಕಲಿಗ ವಿಧುರರಿಗೆ ವಧು, ವಿಧವೆ–ವಿಚ್ಛೇದಿತೆ ಬೇಕು, ಮಂಡ್ಯ–ಮೈಸೂರಲ್ಲಿ ಅಡುಗೆ ಕೆಲಸಕ್ಕೆ– ಸಹಾಯಕಿ ಮಹಿಳೆಯರು, ಟೀ–ಕಾಫಿ, ಊಟ ತಿಂಡಿ, ಫ್ಯಾಕ್ಟರಿಗಳಿಗೆ, ಆಸ್ಪತ್ರೆಗಳಿಗೆ ಮಾರಾಟ ಮಾಡಲು ಹುಡುಗರು ಬೇಕು. (ಊಟ–ವಸತಿ ಇದೆ.)
7406847717

ಎಲ್ಲಾ ಜಾತಿಯ
ವಧು–ವರರ ಮಾಹಿತಿ ಕೇಂದ್ರ
Degree, M.A, M.Sc, M.Com, MBA, Engineer, Doctor's
ವಿವಾಹ ನೋಂದಣಿಗಾಗಿ ಸಂಪರ್ಕಿಸಿ
(2nd Marriage Also)
9164743059

S.K.Construction
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ ಹೊಸ ಮನೆ ಮತ್ತು Altration Work, Plan, 3D Elevation ಸಹಿತ ಕಟ್ಟಿ ಕೊಡುತ್ತೇವೆ.
9620528490

ಟೆಲಿಕಾಂ ಲೇಔಟ್
30x40 N/F ಸೈಟು @ Rs.25 ಲಕ್ಷ
ಬ್ಯಾಂಕ್ ಲೋನ್ ಲಭ್ಯ
ಇಲವಾಲ ಬಸ್ಸು ನಿಲ್ದಾಣ ಹಿಂಭಾಗ, ಹುಣಸೂರು ರಸ್ತೆ
9538583377

FOR RENT
3 BHK - I Floor Bannimantap 'B' Layout (for Veg Only) Shivarathreshwara Nagar
9886817517

ಬಂಧನ.ಕಾಂ
ಎಲ್ಲಾ ಜಾತಿಯ ವಧು–ವರರಿಗೆ ಸಂಪರ್ಕಿಸಿ ಸಾವಿರದಲ್ಲಿ ಒಂದನ್ನು ಆಯ್ಕೆಮಾಡಿಕೊಳ್ಳಿ
ಡಾ. ಗುರೂಜಿ
9448229184
7899625268
bhandhana.com

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಪ್ಯಾಕಿಂಗ್‌ಕೆಲಸಕ್ಕೆ ಹುಡುಗರು ಬೇಕು. (Full Time / Part Time) ವಯಸ್ಸು ಮಿತಿಯಿಲ್ಲ ವಿದ್ಯಾರ್ಹತೆ ಬೇಕಿಲ್ಲ, ಕನ್ನಡ ಓದಲು ಬರಬೇಕು, ಕುವೆಂಪುನಗರ, ಸುತ್ತಮುತ್ತ
9535370330

ಬೇಕಾಗಿದ್ದಾರೆ
ಹೋಟೆಲ್ ಮತ್ತು ಡೆಲಿವರಿಗೆ ಸಂಬಂಧಪಟ್ಟ ಎಲ್ಲಾ ತರಹದ ಕೆಲಸಗಳಿಗೆ ಮಹಿಳೆಯರು ಮತ್ತು ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.
(ಡೆಲಿವರಿಗೆ ದ್ವಿಚಕ್ರ ವಾಹನ ಕಡ್ಡಾಯ)
6362892296

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಟೀ ಕಾಫಿ, ಸಪ್ಲೈಯರ್, ಕೌಂಟರ್, ಸೌತ್ ಇಂಡಿಯನ್ ಭಟ್ಟರು, ಹೆಲ್ಪರ್‌ಗಳು, ಪಾತ್ರತೊಳೆಯುವವರು, ಕ್ಲೀನರ್‌ಗಳು, ಚಾಟ್ಸ್ & ಚೈನೀಸ್, ದೋಸೆ ಭಟ್ಟರು, ನಾರ್ತ್ ಇಂಡಿಯನ್ ಬಟ್ಟರು ಬೇಕಾಗಿದ್ದಾರೆ
8088337564

ಬಾಡಿಗೆಗೆ ಇದೆ
ಬ್ಯಾಂಕ್, ಶೋರೂಮ್, ಕಛೇರಿ, ಹೋಟೆಲ್ ವ್ಯಾಪಾರಕ್ಕೆ ಯೋಗ್ಯವಾದ, ಸ್ಥಳ 800 ಚದರ ಅಡಿ, ಹುಣಸೂರು, ಮೈಸೂರು ಮುಖ್ಯರಸ್ತೆ, ಹಿನಕಲ್
9844576436

WANTED
ಕುವೆಂಪುನಗರದ ಬೂಟಿಕ್ ಒಂದರಲ್ಲಿ ಕೆಲಸ ಮಾಡಲು ಅನುಭವವಿರುವ Ladies Tailor ಬೇಕಾಗಿದ್ದಾರೆ. ಆಸಕ್ತಿ ಇರುವವರು ಸಂಪರ್ಕಿಸಿ:
8792720395
9844813224

ಬೇಕಾಗಿದ್ದಾರೆ
ಒಂದು ಸ್ವಯಂ ಸೇವಾ ಸಂಸ್ಥೆಗೆ ಲಘು ವಾಹನ ಚಾಲಕರು ಬೇಕಾಗಿದ್ದಾರೆ.
ಸಂಪರ್ಕಿಸಿ: 0821-2301564
9945752592
CA-25, ಜಿ.ಬಿ. ಕೆ.ಎಸ್.ತಿಮ್ಮಯ್ಯ ರಸ್ತೆ, ವಿಜಯನಗರ 2ನೇ ಹಂತ, ಮೈಸೂರು–570017.

FOR SALE
30X40 House for Sale in JP Nagar
40x60 Site for Sale in Sharada Layout attached Srinagar
45x60 old house for sale in Vidyarayanapuram
9880344263

ಮುಡಾ ಸೈಟ್ ಮಾರಾಟಕ್ಕಿದೆ
ಜ್ಞಾನಭಾರತಿ ಲೇಔಟ್ 2ನೇ ಹಂತ, ದಡದಹಳ್ಳಿ, ಈಸ್ಟ್ ಫೇಸಿಂಗ್, 24 ಲಕ್ಷ
30x40
9342123373

ಹೊಸ ಮನೆ ಮಾರಾಟಕ್ಕಿದೆ
ಡ್ಯೂಪ್ಲೆಕ್ಸ್ ಮನೆ 20x30 ವೆಸ್ಟ್ ಫೇಸ್ ನಾರ್ತ್ ಡೋರ್ ಇಟಾಲಿಯನ್ ಕಿಚನ್ ವಾಡ್ರೋಬ್, ಗ್ರಾನೈಟ್ ಸಿಸಿ ಕ್ಯಾಮೆರಾ, ಸೋಲಾರ್ ಚಿಮಣಿ, ಹಾಲ್‌ಗೆ ಪಿಓಪಿ ಮತ್ತೆ ರೂಮಿಗೆ ಫ್ಯಾನ್, ಉಯ್ಯಾಲೆ, ಬಾತ್‌ಟಬ್ ಆರ್ಕಿಟೆಕ್ಟ್ ಮನೆ ದಟ್ಟಗಳ್ಳಿ ಮಹಾಮನೆ ಸರ್ಕಲ್ ಹತ್ತಿರ. ಸಂಪರ್ಕಿಸಿ
9980325199

ಬೇಕಾಗಿದ್ದಾರೆ
ಕೆಲಸ ಹುಡುಕುತ್ತಿರುವಿರೇ? ಮನೆಯಿಂದಲೇ ಕೆಲಸ ಮಾಡಿ ಉತ್ತಮ ಸಂಪಾದನೆಗಳಿಸಿ. ಪಾರ್ಟ್/ಫುಲ್ ಟೈಮ್. ನೀವು ಮಾಡುತ್ತಿರುವ ಕೆಲಸಕ್ಕೆ ತೊಂದರೆ ಆಗದಂತೆ ಮಾಡಬಹುದು.
* ವ್ಯವಸ್ಥಾಪಕರು * ವೃತ್ತಿ ನಿರತರು/ನಿವೃತ್ತರು
* ಗೃಹಿಣಿಯರು * ಖಾಸಗಿ/ಸರ್ಕಾರಿ ನೌಕರರು
* ವಿದ್ಯಾರ್ಥಿಗಳು/ನಿರುದ್ಯೋಗಿಗಳು
ಒಂದು ಕರೆ ನಿಮ್ಮ ಜೀವನ ಶೈಲಿಯನ್ನು ಬದಲಿಸಬಹುದು. ಯೋಚಿಸಿ
9108908688, 9742600540

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ

ನಂಜನಗೂಡಿನಲ್ಲಿ ಬಿಜೆಪಿ ಗೆಲ್ಲಿಸುವ ಮೂಲಕ ಚುನಾವಣಾ ರಾಜಕೀಯದಿಂದ ನಿವೃತ್ತರಾಗುವ

ಬಿಎಸ್‌ವೈ, ಶ್ರೀನಿವಾಸಪ್ರಸಾದ್‌ಗೆ ಗೆಲುವಿನ ಉಡುಗೊರೆ ನೀಡಿ

ಕಾರ್ಯಕರ್ತರಿಗೆ ಶಾಸಕ ಬಿ.ಹರ್ಷವರ್ಧನ್ ಮನವಿ



ನಾನು ಕಳೆದ ಚುನಾವಣೆಯಲ್ಲಿ ನೀಡಿದ ಬಹುತೇಕ ಎಲ್ಲಾ ಭರವಸೆಗಳನ್ನು ಸಾಕಾರಗೊಳಿಸಿರುವ ಬಗ್ಗೆ ಆತ್ಮತೃಪ್ತಿಯಿದೆ. ವಿಶೇಷವಾಗಿ ನುಗು ಏತ ನೀರಾವರಿ ಯೋಜನೆ, ಶ್ರೀಕಂಠೇಶ್ವರಸ್ವಾಮಿ ಬೆಳ್ಳಿರಥ, 75 ಕೊಠಡಿಗಳ ಅತಿಥಿಗೃಹ, ಹೆಡಿಯಾಲ ಭಾಗದ ಕೆರೆಗಳ ತುಂಬಿಸುವ ಯೋಜನೆ ಹೀಗೆ ಹಲವು ಮಹತ್ವದ ಯೋಜನೆಗಳನ್ನು ಕ್ಷೇತ್ರಕ್ಕೆ ತಂದಿದ್ದೇನೆ. ಮುಂದೆಯೂ ಕೂಡ ಮತದಾರರ ನಿರೀಕ್ಷೆಗೆ ತಕ್ಕಂತೆ ಅಭಿವೃದ್ಧಿಗೆ ಒತ್ತು ನೀಡುವ ಸಲುವಾಗಿ ಮತದಾರರ ಮನೆ ಬಾಗಿಲಿಗೆ ತೆರಳಿ ಪ್ರಚಾರ ಕೈಗೊಳ್ಳುವೆ.
–ಬಿ.ಹರ್ಷವರ್ಧನ್, ಶಾಸಕ.

ಮಲ್ಕುಂಡಿ, ಮಾ.31– ಹಿರಿಯ ನಾಯಕರಾದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಸಂಸದ ವಿ.ಶ್ರೀನಿವಾಸ ಪ್ರಸಾದ್ ಚುನಾವಣೆ ರಾಜಕೀಯದಿಂದ ನಿವೃತ್ತರಾಗಲಿದ್ದು, ನಂಜನಗೂಡಿನಲ್ಲಿ ಮತ್ತೇ ಬಿಜೆಪಿ ಬಾವುಟ ಹಾರಿಸುವ ಮೂಲಕ ಈ ನಾಯಕರಿಗೆ ಗೆಲುವಿನ ಉಡುಗೊರೆ ನೀಡಲು ಕಾರ್ಯಕರ್ತರು ಸನ್ನದ್ಧರಾಗಿ ಎಂದು ಶಾಸಕ ಬಿ.ಹರ್ಷವರ್ಧನ್ ಮನವಿ ಮಾಡಿದರು.

ಬೆಂಬಲಿಗರು ಹಾಗೂ ಕಾರ್ಯಕರ್ತರೊಂದಿಗೆ ಬೇಲದಕುಪ್ಪೆ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ತಮ್ಮ ಇಳಿ ವಯಸ್ಸಿನಲ್ಲೂ ಅತ್ಯಂತ ಉತ್ಸುಕರಾಗಿ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಂಡಿರುವ ಬಿ.ಎಸ್. ಯಡಿಯೂರಪ್ಪ ಹಾಗೂ ಸಂಸದ ವಿ. ಶ್ರೀನಿವಾಸಪ್ರಸಾದ್ ಅವರು ಈ ಚುನಾವಣೆ ನಂತರ ರಾಜಕೀಯದಿಂದ ನಿವೃತ್ತರಾಗುವುದರಿಂದ ನಂಜನಗೂಡು ಕ್ಷೇತ್ರದಲ್ಲಿ ಈ ಇಬ್ಬರು ನಾಯಕರಿಗೆ ಗೆಲುವಿನ ಉಡುಗೊರೆ ನೀಡಬೇಕು. ಯಾವುದೇ ಚುನಾವಣೆಯಾದರೂ ಮೊದಲು ಬೇಲದಕುಪ್ಪೆ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿಯೇ ಪ್ರಚಾರ ಕೈಗೊಳ್ಳುತ್ತೇನೆ. ಅಂತೆಯೇ ಈ ಬಾರಿಯೂ ಪೂಜೆ ಸಲ್ಲಿಸಿದ್ದು, ನಂಜನಗೂಡಿನಲ್ಲಿ ಮತ್ತೆ ಬಿಜೆಪಿ ಬಾವುಟ ಹಾರಿಸುವ ಮೂಲಕ ಬಿಜೆಪಿ ಭದ್ರಕೋಟೆ ಎಂಬುದನ್ನು ಮತ್ತೊಮ್ಮೆ ರುಜುವಾತು ಮಾಡಲು ಪೂಜೆ ಸಲ್ಲಿಸಿ ಪ್ರಚಾರಕ್ಕೆ ಧುಮುಕುತ್ತಿರುವುದಾಗಿ ತಿಳಿಸಿದರು.

ಕಳೆದ ಬಾರಿ ನಂಜನಗೂಡಿನಲ್ಲಿ ಮೊದಲ ಬಾರಿಗೆ ಬಿಜೆಪಿ ಬಾವುಟ ಹಾರಿಸುವ ಮೂಲಕ ಕಾಂಗ್ರೆಸ್ ಭದ್ರಕೋಟೆ ಬುಡ ಮೇಲು ಮಾಡುವಲ್ಲಿ ಪಕ್ಷದ ಕಾರ್ಯಕರ್ತರ ಶ್ರಮ ಮರೆಯುವಂತಿಲ್ಲ. ಅಂತೆಯೇ ಈ ಬಾರಿಯೂ ಅತ್ಯಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಲು ಕಾರ್ಯಕರ್ತರು ಹಗಲಿರುಳು ಶ್ರಮಿಸಬೇಕು. ಬಿಜೆಪಿ ಸರ್ಕಾರದ ಸಾಧನೆ ಹಾಗೂ ಶಾಸಕರಾಗಿ ನಾವು ಮಾಡಿರುವ ಅಭಿವೃದ್ಧಿ ಕಾಯಗಳನ್ನು ಜನರಿಗೆ ಮನದಟ್ಟು ಮಾಡಿಕೊಡುವ ಮೂಲಕ ಪಕ್ಷಕ್ಕೆ ಹೆಚ್ಚಿನ ಮತ ಸೆಳೆಯಲು ಕಾರ್ಯಕರ್ತರು ಶ್ರಮಿಸಬೇಕಿದೆ ಎಂದರು.

ಬಿಜೆಪಿ ಹಿರಿಯ ಮುಖಂಡ ಸುಬ್ಬಣ್ಣ ಮಾತನಾಡಿ, ಬಿ.ಹರ್ಷವರ್ಧನ್ ನಿರೀಕ್ಷೆಗೂ ಮೀರಿ ಅಭಿವೃದ್ಧಿ ಕಾರ್ಯವನ್ನು ಕ್ಷೇತ್ರದಲ್ಲಿ ಕೈಗೊಂಡಿದ್ದಾರೆ. ಮುಂದೆಯೂ ಬಿಜೆಪಿ ಸರ್ಕಾರವೇ ಅಧಿಕಾರಕ್ಕೆ ಬರಲಿದ್ದು, ಹರ್ಷವರ್ಧನ್ ಅವರನ್ನು ಗೆಲ್ಲಿಸಿದರೆ ಮುಂದಿನ ಸರ್ಕಾರದಲ್ಲಿ ಸಚಿವರಾಗುವ ಸಾಧ್ಯತೆಯಿದೆ. ಹೀಗಾಗಿ ಪ್ರತಿಯೊಬ್ಬರು ತಮ್ಮ ತಮ್ಮ ಬೂತ್‌ಗಳಲ್ಲಿ ಹೆಚ್ಚಿನ ಮತ ಸೆಳೆಯುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು ಎಂದರು.

ಈ ವೇಳೆ ಬಿಜೆಪಿ ಮಂಡಲ ಅಧ್ಯಕ್ಷ ಪಿ.ಮಹೇಶ್, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ಮಹಿಳಾ ಘಟಕದ ಅಧ್ಯಕ್ಷೆ ಕೋಮಲ ಮಹಾಲಿಂಗಸ್ವಾಮಿ, ನಗರಾಧ್ಯಕ್ಷೆ ನಂದಿನಿ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಮುಖಂಡರಾದ ಸೋಮಣ್ಣ, ಮಲ್ಲಿಕಾರ್ಜುನ, ಶಿವನಾಗು, ಮಲ್ಕುಂಡಿ ಪುಟ್ಟಸ್ವಾಮಿ, ಮಹೇಶ್, ಸುರೇಶ್, ಗೋವರ್ಧನ್ ಸೇರಿದಂತೆ ನೂರಾರು ಕಾರ್ಯಕರ್ತರು ಹಾಜರಿದ್ದರು.

ಶ್ರೀಹನುಮಂತೇಶ್ವರ, ಶ್ರೀನೂರಾಳೇಶ್ವರ ಜಾತ್ರಾ ಮಹೋತ್ಸವ



ಸರಗೂರು, ಮಾ.31– ತಾಲೂಕಿನ ಎತ್ತಿಗೆ ಗ್ರಾಮದಲ್ಲಿ ಶ್ರೀಹನುಮಂತೇಶ್ವರ ಮತ್ತು ಶ್ರೀನೂರಾಳೇಶ್ವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಜಾತ್ರೆ ಹಿನ್ನೆಲೆಯಲ್ಲಿ ದೇವಸ್ಥಾನಗಳನ್ನು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿತ್ತು. ಬೆಳಗ್ಗೆಯಿಂದಲೇ ದೇವರಿಗೆ ವಿಶೇಷ ಪೂಜಾ ಕೈಂಕರ್ಯವನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸಲಾಯಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಂಗಳವಾದ್ಯಗಳು, ಬಿರುದು ಬಾವಲಿಗಳು, ವೀರಗಾಸೆ ನೃತ್ಯ, ನಂದಿಧ್ವಜ, ಸತ್ತಿಗೆಗಳ ಮೆರವಣಿಗೆ ಮೂಲಕ ಉತ್ಸವಮೂರ್ತಿಯನ್ನು ದೇವಸ್ಥಾನಕ್ಕೆ ತರಲಾಯಿತು. ನಂತರ ದೇವಸ್ಥಾನದ ಆವರಣದಲ್ಲಿ ಹಾಕಿದ್ದ ಕೊಂಡೋತ್ಸವಕ್ಕೆ ವಿಶೇಷ ಪೂಜೆ ಸಲ್ಲಿಸಿ ಕೊಂಡ ಹಾಯಲಾಯಿತು. ನಂತರ ಅನ್ನ ಅಂತರ್ಪಣೆ ನಡೆಯಿತು. ಗ್ರಾಮದ ಗುರುಮಠದ ವೈ.ಡಿ.ರಾಮರಾಧ್ಯ ಸಮ್ಮುಖದಲ್ಲಿ ಎಲ್ಲಾ ಕಾರ್ಯಕ್ರಮ ನೆರವೇರಿದವು. ಈ ಸಂದರ್ಭ ಗ್ರಾಮದ ಯಜಮಾನರಾದ ಹೆಚ್.ಎಲ್.ಸುರೇಶ್, ಹೆಚ್.ಜಿ.ಶೇಖರ್, ಶಿಕ್ಷಕರಾದ ಜಗದೀಶ್ ಹಾಗೂ ಮಂಜುನಾಥ್‌ಎಚ್.ಎಲ್, ಪ್ರಕಾಶ್, ಉಮೇಶ್, ಶಿವಲಿಂಗ ಆರಾಧ್ಯರು, ಪ್ರಭ ಇನ್ನಿತರರಿದ್ದರು.

ಇಂದು ಬಿಜೆಪಿ ಜಿಲ್ಲಾ ಮಟ್ಟದ ಓಬಿಸಿ ಸಮಾವೇಶ



ತಿ.ನರಸೀಪುರ, ಮಾ.31– ಬಿಜೆಪಿ ಜಿಲ್ಲಾ ಮಟ್ಟದ ಓಬಿಸಿ ಸಮಾವೇಶವನ್ನು ಏ.1ರಂದು ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸುತ್ತೂರು ಗ್ರಾಮದಲ್ಲಿ ಆಯೋಜಿಸಲಾಗಿದೆ ಎಂದು ಓಬಿಸಿ ಜಿಲ್ಲಾ ಅಧ್ಯಕ್ಷ ಜಿ.ಪರಶುರಾಮಪ್ಪ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶನಿವಾರ ಸಂಜೆ 4 ಘಂಟೆಗೆ ಸುತ್ತೂರಿನ ಕೆಎಸ್ ಆರ್‌ಟಿಸಿ ಬಸ್ ನಿಲ್ದಾಣದ ಎದುರಿನ ಮೈದಾನದಲ್ಲಿ ನಡೆಯಲಿರುವ ಓಬಿಸಿ ಸಮಾವೇಶಕ್ಕೆ ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ಮಾಜಿ ಸಚಿವ ಕುಮಾರ್ ಬಂಗಾರಪ್ಪ ಹಾಗೂ ರಾಜ್ಯ ಓಬಿಸಿ ಅಧ್ಯಕ್ಷ ನೆ.ಲ.ನರೇಂದ್ರಬಾಬು ಆಗಮಿಸಲಿದ್ದಾರೆ.

ರಾಜ್ಯ ಬಿಜೆಪಿ ಸೂಚನೆ ಮೇರೆಗೆ ಈ ಸಮಾವೇಶ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ 7 ವಿಧಾನಸಭಾ ಕ್ಷೇತ್ರದಲ್ಲಿ ರೈತ ಮೋರ್ಚಾ, ಮಹಿಳಾ ಮೋರ್ಚಾ, ಎಸ್‌ಸಿ ಮತ್ತು ಎಸ್ಟಿ ಮೋರ್ಚಾ, ಅಲ್ಪಸಂಖ್ಯಾತ ಮೋರ್ಚಾ ಮಾಡಲಾಗಿದ್ದು, ನಾಳೆ ಅಂತಿಮವಾಗಿ ಓಬಿಸಿ ಸಮಾವೇಶ ನಡೆಯಲಿದೆ. ಈ ಸಮಾವೇಶದ ಮೂಲಕ ವಿಧಾನಸಭಾ ಚುನಾವಣೆ ಪ್ರಚಾರಕ್ಕೆ ಚಾಲನೆ ನೀಡಲಾಗುತ್ತಿದ್ದು, ಕಾರ್ಯಕರ್ತರು, ಎಲ್ಲಾ ಮೋರ್ಚಾಗಳ ಅಧ್ಯಕ್ಷರು ಸಮಾವೇಶದಲ್ಲಿ ಭಾಗವಹಿಸುವಂತೆ ಅವರು ಮನವಿ ಮಾಡಿದರು.

ನಿಕಟಪೂರ್ವ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಮಾತನಾಡಿ, ರಾಜ್ಯ ಬಿಜೆಪಿ ಓಬಿಸಿ ಸಂಚಾಲಕ ಬಿ.ವೈ.ವಿಜಯೇಂದ್ರ ಹಾಗೂ ಸಹ ಕಾರ್ಯದರ್ಶಿ ಜಗದೀಶ್ ಹಿರೇಮನಿ ನೀಡಿರುವ ಜವಾಬ್ದಾರಿ ಮೇರೆಗೆ ಸುತ್ತೂರು ಗ್ರಾಮದಲ್ಲಿ ಸಮಾವೇಶ ನಡೆಯಲಿದ್ದು, ಸಮಾವೇಶದಲ್ಲಿ 3 ಸಾವಿರಕ್ಕೂ ಹೆಚ್ಚಿನ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಈಗಾಗಲೇ ಜಿಲ್ಲೆಯಾದ್ಯಂತ ಎಲ್ಲಾ ಮೋರ್ಚಾಗಳ ಸಮಾವೇಶ ಮಾಡಿ ಯಶಸ್ವಿಯಾಗಿದ್ದೇವೆ. ನಂಜನಗೂಡಿನಲ್ಲಿ ನಡೆದ ಎಸ್ಟಿ ಮೋರ್ಚಾ ಸಮಾವೇಶದಲ್ಲಿ 12 ಸಾವಿರ ಮಂದಿ ಕಾರ್ಯಕರ್ತರು ಭಾಗವಹಿಸುವ ಮೂಲಕ ಪಕ್ಷದ ಕಾರ್ಯಕ್ರಮಕ್ಕೆ ಯಶಸ್ಸು ದೊರಕಿಸಿಕೊಟ್ಟಿದ್ದರು. ಕೆ.ಆರ್.ನಗರದಲ್ಲಿ ಮಹಿಳಾ ಮೋರ್ಚಾ, ತಿ.ನರಸೀಪುರದಲ್ಲಿ ಯುವ ಚೈತನ್ಯ ಸಮಾವೇಶ ಮಾಡಿದ್ದೇವೆ. ನಾಳೆ ಶನಿವಾರ ಕೊನೆಯದಾಗಿ ಓಬಿಸಿ ಮೋರ್ಚಾ ಸಮಾವೇಶ ನಡೆಯಲಿದ್ದು, ಕಾರ್ಯಕರ್ತರು ಈ ಹಿಂದೆ ನಡೆದ ಸಮಾವೇಶಗಳಿಗೆ ಕೊಟ್ಟ ಸಹಕಾರವನ್ನು ನಾಳೆಯ ಸುತ್ತೂರಿನ ಸಮಾವೇಶಕ್ಕೂ ನೀಡಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ಓಬಿಸಿ ಅಧ್ಯಕ್ಷ ಗೂಳಿ ಮಹೇಶ್, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಕರೋಹಟ್ಟಿ ಬಸವರಾಜು ಸೇರಿದಂತೆ ಇನ್ನಿತರರಿದ್ದರು.

ಪ್ರಾಮಾಣಿಕವಾಗಿ ಜನಸೇವೆ ಮಾಡಿದರೆ

ಜನರೆ ನಮ್ಮನ್ನು ಜನಪ್ರತಿನಿಧಿ ಮಾಡುತ್ತಾರೆ: ಸಾರಾ



ಚುಂಚನಕಟ್ಟೆ, ಮಾ.31– ರಾಜಕಾರಣ ಯಾವ ಜಾತಿ, ಕುಟುಂಬ ಹಾಗೂ ಸಮುದಾಯಗಳ ಸ್ವತ್ತಲ್ಲ. ಪ್ರಾಮಾಣಿಕತೆಯಿಂದ ಜನಸೇವೆ ಮಾಡಿದರೆ ಮತದಾರರೇ ನಮ್ಮನ್ನು ಜನಪ್ರತಿನಿಧಿಗಳಾಗಿ ಮಾಡುತ್ತಾರೆ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಹನಸೋಗೆ ಗ್ರಾಮದಲ್ಲಿ ಸ್ತ್ರೀಶಕ್ತಿ ಸಂಘಗಳ ಸದಸ್ಯರು ಹಾಗೂ ಗ್ರಾಮದ ಮಹಿಳೆಯರು ಏರ್ಪಡಿಸಿದ್ದ ಬಾಗಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜನಪ್ರತಿನಿಧಿಗಳಾದ ನಾವು ಮಾಡುವ ಸೇವೆಗೆ ಹಣ ಪಡೆದರೆ ನಮ್ಮನ್ನು ಆಯ್ಕೆ ಮಾಡಿದ ಜನರಿಗೆ ದ್ರೋಹ ಎಸಗಿದಂತಾಗಲಿದ್ದು, ಕಳೆದ 15 ವರ್ಷದ ಅಧಿಕಾರವಧಿಯಲ್ಲಿ ನಾನು ಯಾರಿಂದಲೂ ಹಣ ಪಡೆಯದೇ ನಿಮ್ಮ ಸೇವೆ ಮಾಡಿದ್ದು ಕ್ಷೇತ್ರದ ಮಹಿಳಾ ಮತದಾರರು ನನ್ನನ್ನು ಸೋದರ ಭಾವದಿಂದ ಪ್ರತಿ ಬಾರಿ ಆಶೀರ್ವದಿಸುತ್ತಿರುವುದೇ ಇದಕ್ಕೆ ಸಾಕ್ಷಿಯಾಗಿದೆ ಎಂದರು.

ಶಾಸಕರ ಪತ್ನಿ ಅನಿತಾ ಮಹೇಶ್ ಮಾತನಾಡಿ, ಅಧಿಕಾರದಲ್ಲಿದ್ದಾಗ ಜನಪ್ರತಿನಿಧಿಗಳನ್ನು ಪ್ರೀತಿಸಿದರೆ ಅದು ನಾಟಕೀಯವಾಗಿರಬಹುದು. ಆದರೆ ಚುನಾವಣಾ ಸಮಯದಲ್ಲೂ ನಮ್ಮ ಕುಟುಂಬವನ್ನು ಹರಸಿ ಹಾರೈಸಲು ನಿಮ್ಮ ಗ್ರಾಮಕ್ಕೆ ಕರೆತಂದು ಇಷ್ಟೊಂದು ಪ್ರೀತಿ ತೋರಿರುವುದು ನಮ್ಮ ಭಾಗ್ಯವೇ ಸರಿ ಎಂದರು.

ಕಾರ್ಯಕ್ರಮದ ಅಂಗವಾಗಿ ಸಾರೋಟಿನಲ್ಲಿ ಗ್ರಾಮದಲ್ಲಿ ಸಾ.ರಾ ಕುಟುಂಬದವರನ್ನು ಮೆರವಣಿಗೆ ಮಾಡಿ ಅನಿತಾ ಸಾ.ರಾ ಮಹೇಶ್, ಸುನಿತಾ ನಂದೀಶ್ ಅವರಿಗೆ ಮಹಿಳೆಯರು ಬಾಗಿನ ಅರ್ಪಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷರಾದ ಶಂಕರ್, ಕುಚೇಲ, ಉಪಾಧ್ಯಕ್ಷ ಹರೀಶ್, ಮಾಜಿ ಅಧ್ಯಕ್ಷ ರಾಜೇಶ್, ತಾಲೂಕು ಜೆಡಿಎಸ್ ಅಧ್ಯಕ್ಷ ರಾಜಣ್ಣ, ಯುವ ಜೆಡಿಎಸ್‌ನ ಮಧು, ಮುಖಂಡರಾದ ನಾಗರಾಜು, ಹೆಚ್.ಆರ್ ಮಧುಚಂದ್ರ, ಬಿ.ರಮೇಶ್, ಕುಚೇಲ್, ಕುಮಾರಪ್ಪ, ಬೆಣಗನಹಳ್ಳಿ ಪ್ರಸನ್ನ ವಿವಿಧ ಸಮಾಜಗಳ ಯಜಮಾನರು ಭಾಗವಹಿಸಿದ್ದರು.

ಶ್ರೀಧರ್ಮಸ್ಥಳ ಸಂಸ್ಥೆಯಿಂದ ವಾತ್ಸಲ್ಯ ಕಿಟ್ ವಿತರಣೆ



ಕಂಪಲಾಪುರ, ಮಾ.31– ಗ್ರಾಮದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಅಸಹಾಯಕ ಮಹಿಳೆಯರಿಗೆ, ವಯೋವೃದ್ಧರಿಗೆ ವಾತ್ಸಲ್ಯ ಕಿಟ್ ವಿತರಿಸಲಾಯಿತು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೊಡಗು ಜಿಲ್ಲೆ ಬಿ.ಸಿ.ಟ್ರಸ್ಟ್ ನಿರ್ದೇಶಕಿ ಲೀಲಾವತಿ ಮಾತನಾಡಿ, ಧರ್ಮಸ್ಥಳ ಸಂಸ್ಥೆ ಗ್ರಾಮೀಣ ಜನರಿಗೆ ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದು, ಸಮಾಜದಲ್ಲಿ ವಾಸಿಸುವ ಮಹಿಳೆಯರು, ವಯೋವೃದ್ಧರಿಗೆ ಅವಶ್ಯಕ ಪರಿಕರಗಳನ್ನು ಉಳ್ಳ ಕಿಟ್ ಅನ್ನು ನೀಡಿದ್ದು, ಇದುವರೆಗೆ ರಾಜ್ಯದಲ್ಲಿ 14 ಸಾವಿರ ಮಂದಿಗೆ ನೀಡಲಾಗಿದೆ. ಜಿಲ್ಲೆಯ 60, ತಾಲೂಕಿನ 16, ಕಂಪಲಾಪುರದಲ್ಲಿ 7 ಜನರಿಗೆ ನೀಡಲಾಗಿದೆ ಎಂದರು.

ಆರೈಕೆ ಮಾಡಬೇಕಾದ ಮಕ್ಕಳೇ ಪೋಷಕರನ್ನು ತಿರಸ್ಕರಿಸಿ ಮನೆ ಪಕ್ಕದ ಜಾಗದಲ್ಲೋ, ಹಿಂಭಾಗದಲ್ಲೋ ಇರಿಸಿದ್ದರೇ ಅಂತಹವರನ್ನು ಗುರುತಿಸಿ ಈ ಪರಿಕರಗಳನ್ನು ನೀಡಲಾಗುತ್ತಿದೆ. ಹಾಗೆಯೇ ಮನೆ ರಿಪೇರಿ, ಶೌಚಾಲಯ, ಸೋಲಾರ್ ದೀಪ, ಆಸ್ಪತ್ರೆ ಚಿಕಿತ್ಸಾ ವ್ಯವಸ್ಥೆ ಹೀಗೆ ಹಲವು ಮೂಲ ಸೌಕರ್ಯಗಳನ್ನು ಒದಿಸಲಾಗುತ್ತಿದೆ. ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.

ಈ ವೇಳೆ ತಾಲೂಕು ಯೋಜನಾಧಿಕಾರಿ ಸುರೇಶ್ ಶೆಟ್ಟಿ, ಮೇಲ್ವಿಚಾರಕಿ ರವಿಕಲಾಶೆಟ್ಟಿ, ಜ್ಞಾನವಿಕಾಸ ಕೇಂದ್ರದ ಸಮನ್ವಯಾಧಿಕಾರಿ ಶಾರದಾ, ಹೊಂಗಿರಣ ಒಕ್ಕೂಟದ ಅಧ್ಯಕ್ಷೆ ರಾಣಿ, ಸೇವಾ ಪ್ರತಿನಿಧಿ ರೂಪ, ಆನಂದ್ ಮತ್ತಿತರರಿದ್ದರು.



ಮೂಗೂರಿನ ಕೆಪಿಎಸ್ ಶಾಲೆ ಪರೀಕ್ಷಾ ಕೇಂದ್ರದಲ್ಲಿ ಶುಕ್ರವಾರ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ 188 ವಿದ್ಯಾರ್ಥಿಗಳು ಹಾಜರಾಗಿದ್ದರು.

ನೇಮಕ



ತಿ.ನರಸೀಪುರ, ಮಾ.31– ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಹುಣಸೂರು ಗ್ರಾಮದ ವಿ.ಕೆ.ನಾಗರತ್ನಮ್ಮ ಅವರನ್ನು ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ ಆರ್.ಧರ್ಮಸೇನಾ ಅವರ ಆದೇಶದ ಮೇರೆಗೆ ನೇಮಕ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ಕೆ.ಎಸ್.ಸಿದ್ದರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹನಸೋಗೆ ಪಿಎಸಿಎಸ್‌ಗೆ ಅಂಜತ್ ಪಾಷ ಅಧ್ಯಕ್ಷ



ಚುಂಚನಕಟ್ಟೆ, ಮಾ.31– ಸಾಲಿಗ್ರಾಮ ತಾಲೂಕಿನ ಹನಸೋಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಅಂಜತ್ ಪಾಷ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಹೆಚ್.ಎಸ್.ಕರೀಗೌಡರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಅಂಜತ್ ಪಾಷ ಹಾಗೂ ಹೆಚ್.ಪಿ. ಕರೀಗೌಡ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಹೆಚ್.ಪಿ.ಕರೀಗೌಡರು 6 ಮತ ಪಡೆದರೆ, ಅಂಜತ್ ಪಾಷ ಅವರು 7ಮತಗಳನ್ನು ಪಡೆದು ವಿಜಯಶಾಲಿಯಾದರು. ಚುನಾವಣಾಧಿಕಾರಿಯಾಗಿ ಸಹಕಾರ ಅಭಿವೃದ್ಧಿ ಅಧಿಕಾರಿ ರವಿ ಆಯ್ಕೆಯನ್ನು ಪ್ರಕಟಿಸಿದರು.

ನೂತನ ಅಧ್ಯಕ್ಷ ಅಂಜತ್ ಪಾಷ ಮಾತನಾಡಿ, ಶಾಸಕ ಸಾ.ರಾ.ಮಹೇಶ್ ಅವರ ಮಾರ್ಗದರ್ಶನದಲ್ಲಿ ಸಂಘದ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಲಾಗುವುದು ಹಾಗೂ ಸಕಾಲದಲ್ಲಿ ರೈತರಿಗೆ ಸಾಲ ಸೌಲಭ್ಯ, ಹಾಗೂ ಐಪಿ ಸೆಟ್, ಟ್ರಾಕ್ಟರ್ ಸೇರಿ ದಂತೆ ದ್ವಿಚಕ್ರ ವಾಹನಗಳ ಸಾಲ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ನೂತನ ಅಧ್ಯಕ್ಷರನ್ನು ಗ್ರಾಮದ ಮುಖಂಡರು, ಅಭಿಮಾನಿಗಳು ಪಟಾಕಿ ಸಿಡಿಸಿ ಅಭಿನಂದಿಸಿದರು. ಈ ವೇಳೆ ಉಪಾಧ್ಯಕ್ಷರಾದ ನರೇಂದ್ರಬಾಬು, ಪ್ರೇಮಮ್ಮ, ನೀಲಮ್ಮ, ರಾಜಯ್ಯ, ಪಾಂಡುರಂಗ, ಕುಮಾರಸ್ವಾಮಿ, ನವೀನ, ಸಿದ್ದಯ್ಯ, ಭಾಸ್ಕರ, ಕರೀಗೌಡ ಇದ್ದರು. ಸಂಘದ ಸಿಇಓ ನಂಜುಂಡಸ್ವಾಮಿ, ಮೇಲ್ವಿಚಾರಕರಾದ ಸತೀಶ್ ಸೇರಿದಂತೆ ಮತ್ತಿತರರಿದ್ದರು.

ತಾಂಡವಪುರ ಚೆಕ್‌ಪೋಸ್ಟ್‌ನಲ್ಲಿ 18 ಲಕ್ಷ ವಶಕ್ಕೆ

ನಂಜನಗೂಡು, ಮಾ.31– ದಾಖಲೆ ಇಲ್ಲದೇ ಕಾರಿನಲ್ಲಿ ಸಾಗಿಸುತ್ತಿದ್ದ 18 ಲಕ್ಷ ರೂ.ಗಳನ್ನು ಶುಕ್ರವಾರ ತಾಲೂಕಿನ ತಾಂಡವಪುರ ಚೆಕ್‌ಪೋಸ್ಟ್‌ನಲ್ಲಿ ಎಸ್‌ಎಸ್‌ಟಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಆಂಧ್ರ ಪ್ರದೇಶ ಮೂಲಕ ಅಶೋಕ್ ಎಂಬಾತ ತನ್ನ ಡಸ್ಟರ್ ಕಾರಿನಲ್ಲಿ ಹಣ ತೆಗೆದುಕೊಂಡು ಹೋಗುತ್ತಿದ್ದ ವೇಳೆ ತಾಂಡವಪುರ ಚೆಕ್‌ಪೋಸ್ಟ್‌ನಲ್ಲಿ ತಪಾಸಣೆ ನಡೆಸಲಾಗಿ ಹಣ ಪತ್ತೆಯಾಗಿದೆ. 10 ಲಕ್ಷ ರೂ.ಗಿಂತ ಹೆಚ್ಚಿನ ಹಣ ವಶಕ್ಕೆ ಪಡೆಯಲು ಎಸ್‌ಎಸ್‌ಟಿ ತಂಡಕ್ಕೆ ಅವಕಾಶವಿಲ್ಲದ ಕಾರಣ ವಾಣಿಜ್ಯ ತೆರಿಗೆ ಅಧಿಕಾರಿಗಳ ವಶಕ್ಕೆ 18 ಲಕ್ಷ ರೂ.ಗಳನ್ನು ನೀಡಲಾಗಿದೆ. ಈ ಪ್ರಕರಣ ಸಂಬಂಧ ಕಾನೂನು ಕ್ರಮವನ್ನು ವಾಣಿಜ್ಯ ತೆರಿಗೆ ಅಧಿಕಾರಿಗಳು ವಹಿಸಲಿದ್ದಾರೆ ಎಂದು ವರುಣಾ ಕ್ಷೇತ್ರದ ಚುನಾವಣಾಧಿಕಾರಿ ಗೌರವ್ ತಿಳಿಸಿದ್ದಾರೆ.



ಸರಗೂರು ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ಶ್ರೀಕಾಳಮ್ಮತಾಯಿ ಜಾತ್ರಾ ಕೊಂಡೋತ್ಸವ ಬಹಳ ವಿಜೃಂಭಣೆಯಿಂದ ಜರುಗಿತು. ಈ ವೇಳೆ ಭಕ್ತರು ಕಾಳಮ್ಮತಾಯಿಗೆ ವಿಶೇಷ ಪೂಜೆ ಸಲ್ಲಿಸಿದರು. ಮುಳ್ಳೂರು ಸೇರಿದಂತೆ ಅಕ್ಕಪಕ್ಕದ ಗ್ರಾಮಗಳ ಭಕ್ತರು ಆಗಮಿಸಿದ್ದರು.

ಜೆಡಿಎಸ್ ಟಿಕೆಟ್ ಘೋಷಿಸದಿದ್ದರೆ ಬಂಡಾಯ ಸ್ಪರ್ಧೆ ಖಚಿತ

ಜೆಡಿಎಸ್ ಟಿಕೆಟ್ ಆಕಾಂಕ್ಷಿ ಕೆ.ಎಂ.ಕೃಷ್ಣನಾಯಕ ಘೋಷಣೆ



ಬೇರೆ ಪಕ್ಷದಿಂದ ನನಗೆ ಈಗಾಗಲೇ ಆಹ್ವಾನ ಬಂದಿದ್ದು, ಆ ಪಕ್ಷದ ಮುಖಂಡರೊಂದಿಗೆ ಚರ್ಚೆ ಮಾಡಿದ್ದೇನೆ. ಜೆಡಿಎಸ್‌ನಿಂದ ನನಗೆ ಟಿಕೆಟ್ ಘೋಷಣೆಯಾಗದಿದ್ದರೇ, ಈ ವಿಚಾರವಾಗಿ ಎಲ್ಲಾ ಸಮಾಜದ ಮುಖಂಡರ ಸಭೆ ಕರೆದು ಬೇರೆ ಪಕ್ಷದಿಂದ ಸ್ಪರ್ಧಿಸುವ ಬಗ್ಗೆ ಚರ್ಚಿಸಿ ತೀರ್ಮಾನಿಸಲಾಗುವುದು. ಆದರೆ ಈ ಬಗ್ಗೆ ಈಗಾಗಲೇ ಕೆಲವರು ನನ್ನ ವಿರುದ್ಧ ಅಪಪ್ರಚಾರದಲ್ಲಿ ನಿರತರಾಗಿದ್ದಾರೆ. ಇದಕ್ಕೆಲ್ಲಾ ಯಾರೂ ತಲೆಕೆಡಿಸಿಕೊಳ್ಳಬಾರದು. ನಾನು ಯಾವುದೇ ಕಾರಣಕ್ಕೂ ಹೆಚ್.ಡಿ.ಕೋಟೆ ಕ್ಷೇತ್ರ ಬಿಟ್ಟು ಹೋಗುವುದಿಲ್ಲ. ತಮ್ಮ ಪ್ರೀತಿ, ವಿಶ್ವಾಸಕ್ಕೆ ನಾನು ಚಿರಋಣಿಯಾಗಿದ್ದೇನೆ. ತಮ್ಮೆಲ್ಲರ ಬೆಂಬಲದಿಂದ ಚುನಾವಣೆಯಲ್ಲಿ ಸ್ಪರ್ಧಿಸುವುದು ಖಚಿತ.
–ಕೆ.ಎಂ. ಕೃಷ್ಣ ನಾಯಕ. ಜೆಡಿಎಸ್ ಮುಖಂಡ.

ಹೆಚ್.ಡಿ.ಕೋಟೆ, ಮಾ.31– ಜೆಡಿಎಸ್ ಪಕ್ಷ ನನಗೆ ಟಿಕೆಟ್ ಘೋಷಣೆ ಮಾಡದಿದ್ದರೆ, ಬಂಡಾಯ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸುವುದು ಶತಸಿದ್ಧ ಎಂದು ಜೆಡಿಎಸ್ ಟಿಕೆಟ್ ಆಕಾಂಕ್ಷಿ ಕೆ.ಎಂ.ಕೃಷ್ಣನಾಯಕ ತಿಳಿಸಿದರು.

ತಾಲೂಕಿನ ಮಾದಾಪುರ ಸಮೀಪದ ಫಾರಂಹೌಸ್‌ನಲ್ಲಿ ನಡೆದ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷ ಸಂಘಟನೆ ಕುರಿತವಾಗಿರುವ ಬಗ್ಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಸಂಪೂರ್ಣ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ನನಗೆ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ಪಕ್ಷ ಸಂಘಟನೆ ಮಾಡುವಂತೆ ಆದೇಶಿಸಿದ್ದರು. ಕುಮಾರಸ್ವಾಮಿ ಅವರ ಮಾರ್ಗದರ್ಶನದ ಮೇರೆಗೆ ಸಾಕಷ್ಟು ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೂಲಕ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದೇನೆ ಎಂದ ಅವರು, ಕೋವಿಡ್ ವೇಳೆ ಸಂಕಷ್ಟಕ್ಕೊಳಗಾದವರಿಗೆ 25 ಸಾವಿರಕ್ಕೂ ಹೆಚ್ಚು ಆಹಾರ ಕಿಟ್ ವಿತರಣೆ ಮಾಡಿದ್ದೇನೆ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಆಕ್ಸಿಜನ್‌ವುಳ್ಳ 2 ಆಂಬುಲೆನ್ಸ್ ಹಾಗೂ 15 ಲಕ್ಷ ರೂ. ಔಷಧಿ ಕಿಟ್ ನೀಡಲಾಯಿತು. ಅದೇ ರೀತಿ ವಿದ್ಯಾರ್ಥಿಗಳು, ಬಡ ಕೂಲಿಕಾರರು, ಕಾರ್ಮಿಕರು, ಮಧ್ಯಮ ವರ್ಗದವರ ಹಸಿವು ನೀಗಿಸಲು ಕೋಟೆ, ಸರಗೂರಲ್ಲಿ ಅಪ್ಪಾಜಿ ಕ್ಯಾಂಟೀನ್ ತೆರೆದು 10 ರೂ.ಗೆ ಬೆಳಗಿನ ಉಪಹಾರ, ಮಧ್ಯಾಹ್ನದ ಊಟ ನೀಡುವ ಕಾರ್ಯಕ್ರಮ ರೂಪಿಸಲಾಯಿತು. ಅಲ್ಲದೇ ಈ ಎರಡೂ ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಜೆಡಿಎಸ್ ಪಕ್ಷ ಸಂಘಟನೆಯಲ್ಲಿ ತೊಡಗಿರುವ ನನಗೆ ವರಿಷ್ಠರು ಈ ಬಾರಿಯ ಚುನಾವಣೆಯಲ್ಲಿ ಕ್ಷೇತ್ರದ ಜೆಡಿಎಸ್ ಟಿಕೆಟ್ ಘೋಷಿಸಬೇಕು. ಇಲ್ಲದಿದ್ದರೇ ರಾಜಕಾರಣದಿಂದ ಹಿಂದೆ ಸರಿಯುವ ಮಾತೇ ಇಲ್ಲ. ಬದಲಿಗೆ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುವುದು ಖಚಿತ ಎಂದು.

ಈ ವೇಳೆ ಸಭೆಯಲ್ಲಿದ್ದ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳು ಕೆ.ಎಂ.ಕೃಷ್ಣನಾಯಕ ಅವರು ಮಾತಿಗೆ ಬೆಂಬಲ ವ್ಯಕ್ತಪಡಿಸಿದರು. ತಾಲೂಕು ಜೆಡಿಎಸ್ ಮಾಜಿ ಅಧ್ಯಕ್ಷ ಸಿ.ವಿ.ನಾಗರಾಜು ಮಾತನಾಡಿ, ಹೆಚ್.ಡಿ.ಕೋಟೆ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷ ಸಂಘಟನೆ ಮಾಡಿರುವ ಕೃಷ್ಣನಾಯಕರಿಗೆ ವರಿಷ್ಠರು ಟಿಕೆಟ್ ನೀಡಿದರೆ ಮಾತ್ರ ಕ್ಷೇತ್ರದಲ್ಲಿ ಜೆಡಿಎಸ್ ಭದ್ರಕೋಟೆಯಾಗಿ ಉಳಿಯುತ್ತದೆ. ಬೇರೆಯವರಿಗೆ ಟಿಕೆಟ್ ನೀಡಿದರೆ ತಾಲೂಕಿನಲ್ಲಿ ಜೆಡಿಎಸ್ ಪಕ್ಷ ಛಿದ್ರವಾಗುತ್ತದೆ. ನೀವು ಕೃಷ್ಣನಾಯಕ ಅವರಿಗೆ ಪಕ್ಷದ ಟಿಕೆಟ್ ನೀಡದಿದ್ದಲ್ಲಿ ಚುನಾವಣೆಯಲ್ಲಿ ಬಿಜೆಪಿಯಿಂದ ಗೆಲ್ಲಿಸಿ ಶಾಸಕರಾಗಿ ಮಾಡಲು ಶಪಥ ಮಾಡುತ್ತೇವೆ ಎಂದರು.

ಸಭೆಯಲ್ಲಿ ತಾಲೂಕು ಒಕ್ಕಲಿಗ ಸಂಘದ ಮಾಜಿ ಅಧ್ಯಕ್ಷ ಟಿ.ವೆಂಕಟೇಶ್, ತಾಪಂ ಮಾಜಿ ಸದಸ್ಯ ಶಂಭೇಗೌಡ, ಪುರಸಭಾ ಸದಸ್ಯ ಹರೀಶ್ ಗೌಡ, ಮುಖಂಡರಾದ ಮಹೇಂದ್ರ, ಸಿರಿ, ಗಿರೀಶ್, ರಾಮೇಗೌಡ, ಶಂಕರ್, ಲಿಂಗರಾಜು, ಮಾರುತಿ, ನಿಂಗಣ್ಣ ಸ್ವಾಮಿ, ರಾಜಣ್ಣ ಬಸವರಾಜ್, ಬಾಣಪ್ಪ ಶಿವರಾಮೇಗೌಡ, ಶೇಖರ್, ವಕೀಲರಾದ ಮಣಿರಾಜ್, ರವಿ, ರಮೇಶ, ಪ್ರಶಾಂತ, ಪ್ರಸನ್ನ, ಶಂಕರ, ಶಿವಯ್ಯ, ಕಾಳಪ್ಪಾಜಿ, ಜವರೇಗೌಡ, ಸುರೇಶ್, ನಿಂಗರಾಜು, ಹಾಲನಹಳ್ಳಿ ರವಿ, ಸತೀಶ್‌ಗೌಡ, ಮಂಜು ಆಚಾರ್, ಪಾಪಣ್ಣ, ಸೋಮಣ್ಣ, ಗೋವಿಂದೇಗೌಡ, ಪ್ರಕಾಶ್ ನಾಯಕ, ಭೈರನಾಯ್ಕ, ಬಿದರಳ್ಳಿ ಸೋಮ, ಪುಟ್ಟಸಿದ್ದನಾಯಕ, ಭಾಸ್ಕರ ಇದ್ದರು.

ಒಂದನೇ ವರ್ಷದ ಪುಣ್ಯಸ್ಮರಣೆ



ಎಸ್.ಪಿ.ರಮೇಶ್‌ಗೌಡ

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ.

ದುಃಖತಪ್ತರು: ಪತ್ನಿ, ಮಗಳು, ಅಳಿಯ, ಕುಟುಂಬವರ್ಗದವರು ಹಾಗೂ ಬಂಧುಮಿತ್ರರು, ಮೈಸೂರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರು ಎಂದು ಪ್ರತಿನಿಧಿಸುತ್ತಿರುವ ಬೆಂಗಳೂರು ನಗರ- 560098, ರಾಜರಾಜೇಶ್ವರಿನಗರ, ಸಚ್ಚಿದಾನಂದನಗರ ಜೋಡಿ ರಸ್ತೆ, 3ನೇ ಮೇನ್, ಮನೆ ನಂ. 256ರಲ್ಲಿ ವಾಸವಾಗಿರುವ ಲೇಟ್ ತಿಮ್ಮಯ್ಯನವರ ಮಗನಾದ ಸುಮಾರು 46 ವರ್ಷ ವಯಸ್ಸಿನ ಶ್ರೀ ವೆಂಟೇಶ್ ಪಿ.ಟಿ. ಇವರಿಂದ ಖರೀದಿಸಲು ಇಚ್ಛಿಸಿರುತ್ತಾರೆ.

ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಹಾಗೇ ಯಾರಿಗಾದರೂ, ಹಕ್ಕು, ಋಣ, ಮೈನರ್ ಕ್ಲೈಂಗಳು ಅಥವಾ ಇತರೆ ಯಾವುದೇ ರೀತಿಯಾದ ಬಾಧ್ಯತೆಗಳು ಇದ್ದಲ್ಲಿ ಸಾರ್ವಜನಿಕರು ಈ ಸಾರ್ವಜನಿಕ ಪ್ರಕಟಣೆ ನೀಡಿದ ಹದಿನೈದು (15) ದಿನದೊಳಗಾಗಿ ಈ ಕೆಳಕಾಣಿಸಿರುವ ವಕೀಲರ ಕಛೇರಿಗೆ ಅಂತಹ ಹಕ್ಕು, ಋಣ, ಮೈನರ್ ಕ್ಲೈಂಗಳು ಅಥವಾ ಇತರೆ ಯಾವುದೇ ರೀತಿಯಾದ ಬಾಧ್ಯತೆಗಳನ್ನು ಪ್ರತಿಪಾದಿಸುವಂತಹ ದಾಖಲೆ ಸಮೇತವಾಗಿ ಹಾಗೂ ಖುದ್ದಾಗಿ ಸಂಪರ್ಕಿಸತಕ್ಕದ್ದು.

ಈ ಹದಿನೈದು ದಿವಸದೊಳಗಾಗಿ ಅಂತಹ ಯಾವುದೇ ರೀತಿಯಾದ ಹಕ್ಕು, ಋಣ, ಮೈನರ್ ಕ್ಲೈಂಗಳು ಅಥವಾ ಇತರೆ ಯಾವುದೇ ರೀತಿಯಾದ ಬಾಧ್ಯತೆಗಳನ್ನು ಪ್ರತಿಪಾದಿಸುವಂತಹ ಯಾವುದೇ ರೀತಿಯಾದಂತಹ ಹೇಳಿಕೆ ಅಥವಾ ದಾಖಲಾತಿಗಳು ಎದುರು ಬರದ ಪಕ್ಷದಲ್ಲಿ ಈ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಾರ್ವಜನಿಕರಿಂದ ಅಂತಹ ಯಾವುದೇ ರೀತಿಯಾದ ಹಕ್ಕು, ಋಣ, ಮೈನರ್ ಕ್ಲೈಂಗಳು ಅಥವಾ ಇತರೆ ಯಾವುದೇ ತರಹದ ರೀತಿಯಾದ ಹಕ್ಕು ಮತ್ತು ಬಾಧ್ಯತೆಗಳು ಇರುವುದಿಲ್ಲವೆಂದು ತಿಳಿದುಕೊಂಡು ನನ್ನ ಕಕ್ಷಿದಾರರು ಈ ಕೆಳಕಂಡ ಸ್ವತ್ತನ್ನು ಅದರ ಮೇಲ್ಕಾಣಿಸಿರುವ ಮಾಲೀಕರೊಡನೆ ಕ್ರಯ ಪತ್ರವನ್ನು ಮಾಡಿಸಿಕೊಂಡು ಖಾತೆ ವರ್ಗಾಯಿಸಿಕೊಳ್ಳಲು ಮುಂದಾಗುತ್ತಾರೆ. ಈ ಹದಿನೈದು ದಿನಗಳ ನಂತರ ಬಂದಂತಹ ಯಾವುದೇ ತಂಟೆ ತಕರಾರುಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್: ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ದೊಡ್ಡಮಾರಗೌಡನಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 128 (ಒಂದು ನೂರ ಇಪ್ಪತ್ತೆಂಟು)ರಲ್ಲಿ ಇರುವ ವಸತಿ ಉದ್ದೇಶಕ್ಕೆ ಅನ್ಯಕ್ರಾಂತವಾಗಿರುವ ವಿಸ್ತೀರ್ಣ 2.27.00.00 (ಎರಡು ಎಕರೆ ಇಪ್ಪತ್ತೇಳು ಗುಂಟೆ) ಜಮೀನಿಗೆ ಚೆಕ್ಕುಬಂದಿ. ಪೂರ್ವಕ್ಕೆ : ಸರ್ವೆ ನಂ.129ರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ.388 ಮತ್ತು 389ರ ಜಮೀನು, ಉತ್ತರಕ್ಕೆ: ಸರ್ವೆ ನಂ.129ರ ಜಮೀನು ಮತ್ತು ರಸ್ತೆ, ದಕ್ಷಿಣಕ್ಕೆ: ಸರ್ವೆ ನಂ.129ರ ಜಮೀನು.

Sd/- N.K .Somanna, BAL., LLB
Advocate, #35, Kuvempu trust building, kalidasa road, jayalakshmi puram, Mysore-12, Ph: 9986685754

43
ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

17ನೇ ವರ್ಷದ ಪುಣ್ಯಸ್ಮರಣೆ



ಪೊನ್ನಿರ ದಾಲು

ನೀವು ನಮ್ಮನ್ನು ಅಗಲಿ ಇಂದಿಗೆ 17 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.

ದುಃಖತಪ್ತರು:
ಪತ್ನಿ: ಸೀತಮ್ಮ
ಮಕ್ಕಳು: ವಿಶಾಲ, ಚೇತನ್ ಚೆಂಗಪ್ಪ
ಸೊಸೆ: ಶಿಲ್ಪ
ಮೊಮ್ಮಗ: ಕವಿನ್ ಕಾರ್ಯಪ್ಪ
& ತಮ್ಮ: ಪೊನ್ನಿರ ಕೆ ರಾಜು
ಬಿಟ್ಟಂಗಾಲ

ಹಸಿರು ನಮ್ಮ ಉಸಿರು